ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 19 ಶನಿವಾರ 2025

ಸಂಪುಟ: 46 | ಸಂಚಿಕೆ: 4 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಮೈಸೂರು ಮಿತ್ರ
ಶನಿವಾರ 19 ಏಪ್ರಿಲ್ 2025

ಸಾಟಿ ಇಲ್ಲದ ಸ್ಥಳ, ಸರಿಸಾಟಿಯಿಲ್ಲದ ಬೆಲೆ!

ಕ್ರಿಕೆಟ್ ನೆಟ್‌ಗಳು



ಮಕ್ಕಳ ಮನರಂಜನೆ



ಪಿಕ್ನಿಕ್ ಟೇಬಲ್



ಮರಳಿನ ಆಟದ ಪ್ರದೇಶ



35+ ಕ್ಕೂ ಅಧಿಕ ವಿಶ್ವ ದರ್ಜೆಯ ಸೌಲಭ್ಯಗಳು

- ಧ್ಯಾನ ವಲಯ
- ಹಿರಿಯ ನಾಗರಿಕರ ಗೆಜೆಬೋ (ಮೊಗಸಾಲೆ)
- ಸಾಕುಪ್ರಾಣಿ ವಲಯ
- ನಗುವ (ಲಾಫಿಂಗ್) ಉದ್ಯಾನವನ
- ಉದ್ಯಾನ ನಡಿ
- ಪಾರ್ಟಿ ಲಾನ್
- ಕೂಟದ ಸ್ಥಳ
- ಉಯ್ಯಾಲೆ ಉದ್ಯಾನವನ
- ಮರಳು ಗುಂಡಿ (ಆಟದ ವಲಯ)
- ಚಿಕ್ಕ ಮಕ್ಕಳ ಉಯ್ಯಾಲೆ
- ಚಿಕ್ಕ ಮಕ್ಕಳ ಸ್ಪ್ರಿಂಗ್ ರೈಡರ್
- ಚಿಕ್ಕ ಮಕ್ಕಳ ಟಾಟ್ ಲಾಟ್
- ಯೋಗ ಲಾನ್
- ಜಾಗಿಂಗ್ ಟ್ರ್ಯಾಕ್
- ಹೊರಾಂಗಣ ಜಿಮ್
- ಆಕ್ಯುಪಂಕ್ಚರ್ ವಾಕ್ ವೇ
- ಮಕ್ಕಳ ಸೀ-ಸಾ
- ಗುಮ್ಮಟ ಹತ್ತುವವರು
- ಮಕ್ಕಳ ಜಾರುಬಂಡಿ
- ಮಕ್ಕಳ ಮಂಕಿ ಬಾರ್‌ಗಳು
- ಮಕ್ಕಳ ಡೂಡಲ್ ಕಾರ್ನರ್
- ಮಕ್ಕಳ ಜಂಗಲ್ ಜಿಮ್
- ಮಕ್ಕಳ ಮೆರ್ರಿ ಗೋ
- ಗಾಗಾ ಬಾಲ್ ಪಿಟ್
- ಮಕ್ಕಳ ಟಾಟ್ ಲಾಟ್
- ಮಕ್ಕಳ ಹಾಪ್ಸ್ಕಾಚ್
- ಮಕ್ಕಳ ಕ್ಲೈಂಬಿಂಗ್ ನೆಟ್
- ಮಕ್ಕಳ ರಾಕ್ ಕ್ಲೈಂಬಿಂಗ್ ವಾಲ್
- ಬಾಸ್ಕೆಟ್‌ಬಾಲ್ ಪೋಸ್ಟ್
- ಬ್ಯಾಡ್ಮಿಂಟನ್ ಕೋರ್ಟ್
- ವಾಲಿಬಾಲ್ ಕೋರ್ಟ್
- ಕ್ರಿಕೆಟ್ ನೆಟ್‌ಗಳು
- ವೀಕ್ಷಣಾ ಗ್ಯಾಲರಿ
- ವಿಶ್ರಾಂತಿ ಸ್ಥಳ
- ರಿಫ್ಲೆಕ್ಸಾಲಜಿ ಮಾರ್ಗ
- ಪಿಕ್ನಿಕ್ ಟೇಬಲ್‌ಗಳೊಂದಿಗೆ ಪೆರ್ಗೋಲಾ

ಮತ್ತು ಇನ್ನೂ ಹೆಚ್ಚಿನವು...

ಪ್ರಶಾಂತ ಜೀವನ ಮತ್ತು ಕಾರ್ಯತಂತ್ರದ ಹೂಡಿಕೆಗಾಗಿ ಮೈಸೂರಿನ ರಾಜರಾಜೇಶ್ವರಿ ನಗರ ಏಕೆ ಪರಿಪೂರ್ಣ ಆಯ್ಕೆಯಾಗಿದೆ?

ಪ್ರಧಾನ (ಪ್ರೈಮ್) ಸ್ಥಳ

ಮೈಸೂರಿನ ರಾಜರಾಜೇಶ್ವರಿ ನಗರದ ಪ್ರಶಾಂತ ಪರಿಸರದಲ್ಲಿ ನೆಲೆಗೊಂಡಿರುವ ಈ ಪ್ರದೇಶವು ಶಾಂತತೆಯನ್ನು ಕಾರ್ಯತಂತ್ರದ ಹೂಡಿಕೆಯ ಜೊತೆಗೆ ಅತ್ಯುತ್ತಮ ನಿರೀಕ್ಷೆಗಳೊಂದಿಗೆ ಸಂಯೋಜಿಸುತ್ತದೆ.

ಅಸಾಧಾರಣ ಸಂಪರ್ಕ

80 ಅಡಿ ಮೈಸೂರು ರಸ್ತೆಯಲ್ಲಿ ನೆಲೆಗೊಂಡಿರುವ ಮತ್ತು ಹೊರ ವರ್ತುಲ ರಸ್ತೆಗೆ ಉತ್ತಮ ಸಂಪರ್ಕ ಹೊಂದಿರುವ ರಾಜರಾಜೇಶ್ವರಿ ನಗರವು ಮೈಸೂರು ಬಸ್ ನಿಲ್ದಾಣ, ರೈಲು ನಿಲ್ದಾಣ ಮತ್ತು ಮೈಸೂರು ವಿಮಾನ ನಿಲ್ದಾಣದಂತಹ ಪ್ರಮುಖ ಸಾರಿಗೆ ಕೇಂದ್ರಗಳಿಗೆ ಸುಗಮ ಪ್ರವೇಶವನ್ನು ನೀಡುತ್ತದೆ.

ಪ್ರಮುಖ ವಲಯಗಳ ಸಾಮೀಪ್ಯ

ಈ ಪ್ರದೇಶವು ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಮತ್ತು ಕ್ರೈಸ್ಟ್ ಕಾಲೇಜಿನಂತಹ ಪ್ರಮುಖ ಶಿಕ್ಷಣ ಸಂಸ್ಥೆಗಳಿಗೆ ಹತ್ತಿರದಲ್ಲಿರುವುದರ ಜೊತೆಗೆ ಪ್ರಮುಖ ಆರೋಗ್ಯ ಸೌಲಭ್ಯಗಳು ಮತ್ತು ಕಾರ್ಪೋರೇಟ್ ಕೇಂದ್ರಗಳಿಗೂ ಹತ್ತಿರದಲ್ಲಿದೆ.

ನಗರ ಅನುಕೂಲತೆ

ಪ್ರಮುಖ ಶಾಪಿಂಗ್ ಕೇಂದ್ರಗಳು, ಮನರಂಜನಾ ತಾಣಗಳು ಮತ್ತು ಊಟದ ಆಯ್ಕೆಗಳಿಗೆ ಸುಲಭ ಲಭ್ಯತೆಯೊಂದಿಗೆ ಈ ಪ್ರದೇಶವು ನಿವಾಸಿಗಳಿಗೆ ಸಮತೋಲಿತ ಜೀವನಶೈಲಿಯನ್ನು ಒದಗಿಸುತ್ತದೆ.

ಮೂಲಸೌಕರ್ಯ ಬೆಳವಣಿಗೆ

ಸುಧಾರಿತ ರಸ್ತೆಗಳು ಮತ್ತು ಅಗತ್ಯ ಉಪಯುಕ್ತತೆಗಳಂತಹ ಮೂಲಸೌಕರ್ಯದಲ್ಲಿನ ತ್ವರಿತ ಅಭಿವೃದ್ಧಿಯು ಈ ಪ್ರದೇಶಕ್ಕೆ ಗಮನಾರ್ಹ ಮೌಲ್ಯವನ್ನು ಒದಗಿಸುತ್ತದೆ ಮತ್ತು ಇದು ದೀರ್ಘಾವಧಿಯ ಹೂಡಿಕೆಗೆ ಭರವಸೆಯ ಆಯ್ಕೆಯಾಗಿದೆ.

ಶಾಲೆಗಳು

- ಕ್ರೈಸ್ಟ್ ಪಬ್ಲಿಕ್ ಸ್ಕೂಲ್ - 700 ಮೀಟರ್
- ಶಾರದಾ ಪಬ್ಲಿಕ್ ಸ್ಕೂಲ್ - 2 ಕಿ.ಮೀ.
- ಹರಿ ವಿದ್ಯಾಲಯ - 2 ಕಿ.ಮೀ.
- ಚೈತನ್ಯ ಟೆಕ್ನೋ ಸ್ಕೂಲ್ - 3 ಕಿ.ಮೀ.
- ನೈಪುಣ್ಯ ಸ್ಕೂಲ್ - 4 ಕಿ.ಮೀ.
- ನ್ಯಾಷನಲ್ ಪಬ್ಲಿಕ್ ಸ್ಕೂಲ್ - 4.5 ಕಿ.ಮೀ.
- ಮರಿಮಲ್ಲಪ್ಪ ಸ್ಕೂಲ್ - 5 ಕಿ.ಮೀ.
- ಡೆಮಾನ್ಸ್ಟ್ರೇಷನ್ ಮಲ್ಟಿಪರ್ಪಸ್ ಸ್ಕೂಲ್ - 5.3 ಕಿ.ಮೀ.

ಕಾಲೇಜುಗಳು

- ಅಮೃತ ವಿಶ್ವ ವಿದ್ಯಾ ಪೀಠ - 4 ಕಿ.ಮೀ.
- ಮಾನಸ ಗಂಗೋತ್ರಿ ವಿಶ್ವವಿದ್ಯಾಲಯ - 6 ಕಿ.ಮೀ.
- ಸೇಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು - 7.5 ಕಿ.ಮೀ.
- ಕ್ರೈಸ್ಟ್ ಕಾಲೇಜು - 7.6 ಕಿ.ಮೀ.
- ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು - 6 ಕಿ.ಮೀ
- NIE ಪ್ರಥಮ ದರ್ಜೆ ಇಂಜಿನಿಯರಿಂಗ್ ಕಾಲೇಜು - 8.2 ಕಿ.ಮೀ.
- ಮಹಾರಾಜ ಕಾಲೇಜು - 9 ಕಿ.ಮೀ.

ಆಸ್ಪತ್ರೆಗಳು

- ಅಮೃತ ಕೃಪಾ - 800 ಮೀಟರ್
- ನಯನ ಕುಮಾರ್ ಮಲ್ಟಿ-ಸ್ಪೆಷಾಲಿಟಿ - 3 ಕಿ.ಮೀ.
- ಆದಿತ್ಯ ಸಂಜೀವಿನಿ ಮಲ್ಟಿ-ಸ್ಪೆಷಾಲಿಟಿ - 3.5 ಕಿ.ಮೀ.
- ಅವಂತ್ 8 KG ಆಸ್ಪತ್ರೆ - 3.9 ಕಿ.ಮೀ.
- AR ಆಸ್ಪತ್ರೆ - 4 ಕಿ.ಮೀ.
- ಭಾನವಿ ಆಸ್ಪತ್ರೆ - 6 ಕಿ.ಮೀ.
- ಕಾಮಾಕ್ಷಿ ಆಸ್ಪತ್ರೆ - 6.7 ಕಿ.ಮೀ.
- ಅಪೋಲೋ BGS ಆಸ್ಪತ್ರೆಗಳು - 6.4 ಕಿ.ಮೀ.
- ISS ಆಸ್ಪತ್ರೆ - 10 ಕಿ.ಮೀ.

ಕಾರ್ಪೋರೇಟ್‌ಗಳು

- ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ - 9 ಕಿ.ಮೀ.
- L&T ಟೆಕ್ನಾಲಜಿ ಸರ್ವೀಸಸ್ - 10 ಕಿ.ಮೀ.
- BEML ಲಿಮಿಟೆಡ್ - 10.2 ಕಿ.ಮೀ.
- ಇನ್ಫೋಸಿಸ್ - 11 ಕಿ.ಮೀ.
- JK ಟೈರ್ & ಇಂಡಸ್ಟ್ರೀಸ್ ಲಿಮಿಟೆಡ್ - 13 ಕಿ.ಮೀ.
- ವಿಪ್ರೋ ಲಿಮಿಟೆಡ್ - 14 ಕಿ.ಮೀ.

ಪ್ಲಾಟ್ + 2 BHK ವಿಲ್ಲಾ



G ಸ್ಕ್ವೇರ್ ಪ್ಲಾಟ್ + ವಿಲ್ಲಾ ಬೆಲೆ
₹70.5*L
ಪ್ಲಾಟ್ ವಿಸ್ತೀರ್ಣ: 650 ಚದರ ಅಡಿ
ನಿರ್ಮಿತ (ಬಿಲ್ಟ್ ಅಪ್) ವಿಸ್ತೀರ್ಣ: 975 ಚದರ ಅಡಿ

ಪ್ಲಾಟ್ + 3 BHK ವಿಲ್ಲಾ



G ಸ್ಕ್ವೇರ್ ಪ್ಲಾಟ್ + ವಿಲ್ಲಾ ಬೆಲೆ
₹97.5*L
ಪ್ಲಾಟ್ ವಿಸ್ತೀರ್ಣ: 1100 ಚದರ ಅಡಿ
ನಿರ್ಮಿತ (ಬಿಲ್ಟ್ ಅಪ್) ವಿಸ್ತೀರ್ಣ: 1650 ಚದರ ಅಡಿ

ಪತ್ರಿಕಾ ಲೇಖನಗಳು



Bengaluru-Mysuru Expressway: 119-Km Stretch Allows Travel In Just 75 Mins | Full Details

Bengaluru-Mysuru Expressway: Earlier, the journey used to take around three hours. The improvement is due to upgraded infrastructure and better connectivity. In 2023, Prime Minister Narendra Modi inaugurated the much-awaited Bengaluru-Mysuru Expressway at a public meeting in Mandya district.

Bengaluru-Mysuru Expressway has been developed at a total cost of Rs 8,480 crore. (Representational image)



Business Standard

Why Bengalureans Are Choosing Mysuru: A Real Estate Boom Driven by Connectivity and Quality of Life

NewsVoir Mysuru

The evolving urban landscape of Mysuru

(Karnataka) [India], November 28: As Bengaluru grapples with rising property prices, relentless traffic, and urban congestion, many Bengalureans are shifting their preference to Mysuru's booming real estate market.

PRM/KA/RERA/1268/378/PR/020125/007342

* T & C apply

98849 00037
www.gsquarehousing.com

ಈಗಲೇ ಸ್ಕ್ಯಾನ್ ಮಾಡಿ — ₹2L ವರೆಗೆ ಉಳಿಸಿ & ಗಳಿಸಿ

ಬೆಂಗಳೂರಿನಿಂದ ಮೈಸೂರು
ಸುತ್ತಮುತ್ತಲಿನ ಪ್ರದೇಶದಲ್ಲಿ ಭೂಮಿ ಬೇಕಾಗಿದೆ
3 ರಿಂದ 300 ಎಕರೆ | ಸಂಪೂರ್ಣ | ಸಹಭಾಗಿತ್ವ
ಅನುಮೋದಿತ ಅಥವಾ ಅನುಮೋದನೆಗಾಗಿ ಇರುವ ಲೇಔಟ್‌ಗಳು

G SQUARE GROUP
YOUR HOME. YOUR DREAM. YOUR CHOICE.
PLOTS | VILLAS | APTS.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಏಪ್ರಿಲ್ 19 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 4 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮರಗಳ ಹನನ ಅನ್ಯಾಯ...

● ಮೈಸೂರಲ್ಲಿ ಪರಿಸರ ವಿನಾಶಿಗಳು, ಮರಗಳ ಹನನ ಮಾಡಿದ ನಿರ್ದಯಿಗಳಿಗೆ ಕ್ಯಾಂಡಲ್ ಬೆಳಗಿ ಸಾವಿರಾರು ಪರಿಸರ ಸ್ನೇಹಿಗಳು, ಮರಗಳ ಗೆಳೆಯರ ಮೌನ ಎಚ್ಚರಿಕೆ ಸಂದೇಶ ●ಧರೆಗುರುಳಿದ ಮರಗಳಿಗೆ ಭಾವಪೂರ್ಣ ಶ್ರದ್ಧಾಂಜಲಿ

ಮೈಸೂರು, ಏ.18(ಎಂಕೆ)– ಪ್ರಕೃತಿಯನ್ನು ಹಾಳು ಮಾಡುವುದೇ ವಿಕೃತಿ... ಪ್ರಕೃತಿಯನ್ನು ಪೊರೆಯುವುದು ನಮ್ಮ ಸಂಸ್ಕೃತಿ... ಮರ ಬೆಳೆಸಿ, ಜೀವ ಉಳಿಸಿ... ಜೀವ ವಾಯು ಇದ್ದರಷ್ಟೇ ನಾವುಗಳು ಜೀವಂತ... ಎನ್ನುವ ನಿತ್ಯ, ಸತ್ಯ ಸಂದೇಶಗಳನ್ನು ತಿಳಿಸುವ ಮೂಲಕ ಮೈಸೂರಿನ ಹಸಿರನ್ನು ಉಳಿಸಲು ಪಣತೊಟ್ಟ ಪರಿಸರ ಪ್ರೇಮಿಗಳು, ಮರಗಳ ಗೆಳೆಯರು ಮರಗಳ ಹನನ ಅನ್ಯಾಯವನ್ನು ಅತ್ಯಂತ ತೀವ್ರವಾಗಿ ಖಂಡಿಸಿದರು.

ಮೈಸೂರಿನ ಹೈದರಾಲಿ ರಸ್ತೆಯ ಕಾಳಿಕಾಂಬ ದೇವಸ್ಥಾನದಿಂದ ಎಸ್‌ಪಿ ಕಚೇರಿ ವೃತ್ತದವರೆಗೆ 40 ಮರಗಳ ಕಡಿದಿರುವುದನ್ನು ಖಂಡಿಸಿ, ಶುಕ್ರವಾರ ಸಂಜೆ ಆಗಸದಲ್ಲಿ ಸೂರ್ಯ ಮರೆಯಾಗುತ್ತಿದ್ದಂತೆ ತಂಡೋಪ ತಂಡವಾಗಿ ಧಾವಿಸಿದ ಪರಿಸರ ಪ್ರೇಮಿಗಳು, ಮೈಸೂರ ಒಡನಾಡಿಗಳು ರಸ್ತೆಯ ಇಕ್ಕೆಲದಲ್ಲಿ ನೆಲಕ್ಕುರುಳಿದ್ದ ಮರಗಳ ಅಳಿದುಳಿದ ಅವಶೇಷಗಳ ಮುಂದೆ ಕ್ಯಾಂಡಲ್ ಬೆಳಗಿಸಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.

ರಸ್ತೆಯ ಎರಡು ಬದಿಯಲ್ಲಿ ಸಾಲಾಗಿ ನಿಂತು ಕ್ಯಾಂಡಲ್ ಲೈಟ್ ಬೆಳಗಿಸಿ, ಮೌನವಾಗಿಯೇ ಮನದ ಆಕ್ರೋಶ ಹೊರಹಾಕಿದರು. ರಸ್ತೆಯ ಇಕ್ಕೆಲಗಳಲ್ಲಿ ಉಳಿದಿರುವ ಮರದ ಅವಶೇಷಕ್ಕೆ ಬಿಳಿ ಬಟ್ಟೆ, ಹೂ ಹಾಕಲಾಗಿತ್ತು. ಕತ್ತಲು ಆವರಿಸುತ್ತಿದ್ದಂತೆ ರಸ್ತೆಯ ಎರಡೂ ಬದಿಗಳಲ್ಲಿ ನಿಂತ ಪರಿಸರ ಪ್ರೇಮಿಗಳು ಮೇಣದ ಬತ್ತಿ ■6ನೇ ಪುಟಕ್ಕೆ





ಮೈಸೂರಿನ ಹೈದರಾಲಿ ರಸ್ತೆಯ ಕಾಳಿಕಾಂಬ ದೇವಸ್ಥಾನದಿಂದ ಎಸ್‌ಪಿ ಕಚೇರಿ ವೃತ್ತದವರೆಗೆ 40 ಮರಗಳ ಕಡಿದಿರುವುದನ್ನು ಖಂಡಿಸಿ ವಿವಿಧ ಪರಿಸರ ಸಂಘಟನೆಗಳಿಂದ ಶುಕ್ರವಾರ ಕ್ಯಾಂಡಲ್ ಲೈಟ್ ಬೆಳಗಿ, ಮೌನ ಪ್ರತಿಭಟನೆ ನಡೆಸಲಾಯಿತು.

ಆಪ್ತರ ಸಾವು ಅಥವಾ ಅಪಘಾತ ಸಂಭವಿಸಿದಾಗ ಹೇಗೆ ಮನಸ್ಸಿಗೆ ನೋವು ಉಂಟಾಗುತ್ತದೆಯೋ ಹಾಗೆಯೇ ಮರಗಳನ್ನು ಕಡಿದಾಗಲೂ ಮನಸ್ಸಿಗೆ ನೋವಾಗುತ್ತದೆ. ಪಾರಂಪರಿಕ ನಗರದಲ್ಲಿ ಪಾರಂಪರಿಕ ಕಳೆ ಬರುವುದೇ ಕಟ್ಟಡಗಳು ಹಾಗೂ ಮರಗಳಿಂದ. ನೂರಾರು ವರ್ಷಗಳಿಂದ ನಮ್ಮೊಡನೆ ಬದುಕುತ್ತಿರುವ ಮರಗಳನ್ನು ನಗರದ ಹಿರಿಯರಂತೆ ನಾವು ಗುರ್ತಿಸುತ್ತೇವೆ. ಈ ನಿಟ್ಟಿನಲ್ಲಿ ಏಕಾಏಕಿ 40 ಮರಗಳನ್ನು ಕಡಿದಿರುವುದು ಖಂಡನೀಯ. ಈ ಬಗ್ಗೆ ಪಾಲಿಕೆ ಆಯುಕ್ತರು ಸ್ಪಷ್ಟನೆ ಕೊಡಬೇಕು. ಮುಂದಿನ ದಿನಗಳಲ್ಲಿ ಮೈಸೂರಿನಲ್ಲಿ ಒಂದೇ ಒಂದು ಮರ ಕಡಿಯಬೇಕಾದರೂ ಪಬ್ಲಿಕ್ ನೋಟಿಸ್ ಕೊಡುವಂತಹ ವ್ಯವಸ್ಥೆ ಜಾರಿಯಾಗಬೇಕು.

– ಯದುವೀರ್, ಸಂಸದ





ನಕ್ಕರೆ ಅದೇ ಸ್ವರ್ಗ

ಎಲ್‌ಕೆಜಿ ಹುಡುಗ : ಮಗ, ನಮ್ ಅಪ್ಪನಿಗೆ ತುಂಬಾ ಭಯ ಕಣೋ.
ಗೆಳೆಯ : ಅದು ಹೇಗೆ?
ಎಲ್‌ಕೆಜಿ ಹುಡುಗ : ನಮ್ಮಪ್ಪ ರೋಡ್ ಕ್ರಾಸ್ ಮಾಡುವಾಗ ನನ್ನ ಕೈ ಹಿಡ್ಕೊತ್ತಾರೆ ಕಣೋ!

ಮೈಸೂರು ಮಿತ್ರ

ಶನಿವಾರ, 19 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸೋತ ಕಾಲುಗಳಲ್ಲೇ ಓಡಲೇಬೇಕಾದದ್ದು ಬದುಕು.

–ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮರಿ ಮಾಡುವ ಮೊದಲೇ ಮೊಟ್ಟೆಗಳನ್ನು ಎಣಿಸಬೇಡ.

ನಿಮ್ಮ ಪತ್ರಗಳು

■ ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆಸಿದ್ದು ಅಪರಾಧ


ಮಾನ್ಯರೆ,

ಇತ್ತೀಚೆಗೆ ನಡೆದ ಕರ್ನಾಟಕ ಸಿಇಟಿ ಪರೀಕ್ಷೆಯಲ್ಲಿ ಬೀದರ್ ಮತ್ತು ಶಿವಮೊಗ್ಗದ ಪರೀಕ್ಷಾ ಕೇಂದ್ರಗಳಲ್ಲಿ ಜನಿವಾರ ಧರಿಸಿ ಬಂದ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗೆ ಜನಿವಾರ ತೆಗೆಯದ ಕಾರಣಕ್ಕಾಗಿ ಪರೀಕ್ಷೆ ಬರೆಯಲು ಅನುಮತಿ ಸಿಲ್ಲದ ಮತ್ತು ಜನಿವಾರವನ್ನು ಮತ್ತು ಕೈಗೆ ಕಟ್ಟಿಕೊಂಡಿರುವ ಕಾಶಿ ದಾರವನ್ನು ಕತ್ತರಿಸಿರುವುದು ನಿಜಕ್ಕೂ ಹೇಯ, ಅವಮಾನಕರ, ಮತ್ತು ಅಕ್ಷಮ್ಯ ಅಪರಾಧವೇ ಸರಿ. ಜನಿವಾರದ ಮೂಲಕ ಗಾಯತ್ರಿ ಮಂತ್ರ ಪಠಿಸುತ್ತಾ ಸರ್ವರಿಗೂ ಒಳಿತಾಗಲಿ ಎಂದು ಪ್ರಾರ್ಥಿಸುವ ಬ್ರಾಹ್ಮಣ ಸಮುದಾಯಕ್ಕೆ ಇದು ಇತ್ತೀಚಿನ ದಿನಗಳಲ್ಲಿನ ಮತ್ತೊಂದು ಅವಮಾನ ಮಾಡುವ ಕೀಳು ಮನಸ್ಸಿನ ಸ್ಥಿತಿ ಎಂದರೆ ತಪ್ಪಾಗಲಾರದು.

ಬಹುಶಃ ಜನಿವಾರಕ್ಕೆ ಬ್ಲೂ ಟೂತ್ ಸಿಕ್ಕಿಸಿ ಪರೀಕ್ಷೆಗಳಲ್ಲಿ ನಕಲು ಮಾಡುತ್ತಾರೆ ಎಂದುಕೊಂಡರೆ, ಆಧುನಿಕ ತಂತ್ರಜ್ಞಾನದ ಮೂಲಕ ವಿದ್ಯಾರ್ಥಿಗಳು ಅಂತಹ ಪರೀಕ್ಷೆ ನಕಲು ಮಾಡುವ ವಿದ್ಯುನ್ಮಾನ ವಸ್ತುಗಳನ್ನು ಒಳಗೆ ತರುತ್ತಾರೆಯೇ ಎಂದು ಕಂಡುಕೊಳ್ಳಬಹುದಲ್ಲವೇ. ಅಲ್ಲದೇ ವಿದ್ಯಾರ್ಥಿಗಳನ್ನು ಒಳಬಿಡುವ ಮುನ್ನ ಲೋಹ ಪರೀಕ್ಷಕ ಯಂತ್ರದಲ್ಲಿ ಸ್ಕ್ಯಾನಿಂಗ್ ಮಾಡಿ, ವಿದ್ಯಾರ್ಥಿಗಳನ್ನು ಕೂಲಂಕಷವಾಗಿ ತಪಾಸಣೆ ಮಾಡುವ ಇವರಿಗೆ ಜನಿವಾರದಲ್ಲಿ ಅಂತಹ ವಸ್ತುಗಳಿದ್ದಲ್ಲಿ ತೆಗೆಸಬಹುದಿತ್ತಲ್ಲವೇ? ಅಷ್ಟಕ್ಕೂ ಪರೀಕ್ಷಾ ಕೇಂದ್ರಗಳಲ್ಲಿ ಜಾಮರ್ ಅಳವಡಿಸುವ ಯೋಚನೆ ಕೂಡ ಮಾಡಬಹುದಿತ್ತು. ಇಷ್ಟು ನಿರ್ವಹಿಸಿದ ಸಿಬ್ಬಂದಿ ಮುಂದಿನ ದಿನಗಳಲ್ಲಿ ಹಣೆಗೆ ತಿಲಕವೋ, ನಾಮವೋ, ವಿಭೂತಿಯೋ, ಕುಂಕುಮವೋ ಅಥವಾ ಜುಟ್ಟು ಬಿಟ್ಟುಹೋದರೆ ಅದನ್ನು ತೆಗೆಯಿರಿ, ಜುಟ್ಟು ಕತ್ತರಿಸಿ ಎಂದು ವಿಕೃತಿ ಮೆರೆಯುವುದರಲ್ಲಿ ಸಂದೇಹವೇ ಇಲ್ಲ. ವಿಪ್ರ ಸಮುದಾಯ ಮತ್ತು ಸಂಘವು ಇದನ್ನು ತೀವ್ರವಾಗಿ ಖಂಡಿಸಿ, ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟಿಸಲಿ. ಅಷ್ಟಕ್ಕೂ ಇದೇ ಇತರೆ ಸಮುದಾಯದ ವಸ್ತ್ರ ವೇಷಭೂಷಗಳಿಗಾಗಿದ್ದಲ್ಲಿ, ಇಷ್ಟು ಹೊತ್ತಿಗೆ ಅದ್ಯಾವ ಅನಾಹುತವಾಗಿ ರಾದ್ಧಾಂತವಾಗುತ್ತಿತ್ತೋ. ಇಷ್ಟು ದಿನವೂ ಬರೀ ಟೀಕೆಗೆ ಟಿಪ್ಪಣಿಗಳಿಗೆ ಆಹಾರವಾಗುತ್ತಿದ್ದ ವಿಪ್ರ ಸಮುದಾಯ ಇದೀಗ ವಿಕೃತ ಮನಸ್ಸಿನ ಇಂಥವರ ಕೃತ್ಯಗಳಗೆ ಒಳಗಾಗುತ್ತಿರುವುದು ನಿಜಕ್ಕೂ ಖೇದಕರ ಮತ್ತು ಅವಮಾನಕರ. ವಿಪ್ರ ಸಂಘ ಕೂಡಲೇ ಸಂವಿಧಾನದ ಧರ್ಮ ಸಂಹಿತೆಗೆ ವಿರುದ್ಧವಾದ ಈ ಕೃತ್ಯಕ್ಕೆ ಕಾನೂನು ಮೂಲಕ ಉತ್ತರ ನೀಡಬೇಕಿದೆ.

–ವಿಜಯ್ ಹೆಮ್ಮಿಗೆ, ಮೈಸೂರು

■ ಗುಂಡಿ ಮುಚ್ಚಿಸಲು ಮನವಿ



ಮಾನ್ಯರೆ,

ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಒಂದಾದ ಮಹಾತ್ಮ ಗಾಂಧಿ ರಸ್ತೆಯ (M G Road) ತೇರಾಪಂಥ್ ಭವನದ ಬಳಿ ಬಹಳ ಅಗಲವಾದ ದೊಡ್ಡ ಗುಂಡಿ ಮಾರ್ಪಾಡಾಗಿದೆ. ಸದಾ ವಾಹನ ದಟ್ಟಣೆ ರಸ್ತೆ ಇದಾಗಿದ್ದು, ಪ್ರತಿದಿನ ಸಾವಿರಾರು ವಾಹನಗಳು ಇಲ್ಲಿ ಸಂಚರಿಸುತ್ತವೆ. ಹಲವಾರು ತಿಂಗಳುಗಳಿಂದ ಈ ಗುಂಡಿ ಇದ್ದು ವಾಹನ ಸವಾರರಿಗೆ ಸರಾಗ ವಾಹನ ಚಾಲನೆಗೆ ತೊಡಕಾಗಿದೆ. ದಯಮಾಡಿ ಈ ಗುಂಡಿಯನ್ನು ಸರಿಪಡಿಸಿ ವಾಹನ ಸವಾರರಿಗೆ ಅನುಕೂಲ ಮಾಡಿಕೊಡಬೇಕಾಗಿ ವಿನಂತಿ.

–ಮಂಜೇಶ್ ದೇವಗಳ್ಳಿ, ಮೈಸೂರು

■ ವಿದ್ಯುತ್ ಸಂಪರ್ಕ ಕಲ್ಪಿಸಿ, ರಸ್ತೆ ಡುಬ್ಬ ನಿರ್ಮಿಸಿ

ಮಾನ್ಯರೆ,

ಮೈಸೂರಿನ ಬಿಇಎಂಎಲ್ 2ನೇ ಹಂತ, ರಾಜರಾಜೇಶ್ವರಿನಗರದ ಮುಖ್ಯ ರಸ್ತೆಯಲ್ಲಿ ವಿದ್ಯುತ್ ಕಂಬಗಳನ್ನು ಹಾಕಿ ಒಂದೂವರೆ ವರ್ಷ ಆಯಿತು. ಆದರೆ ಅದಕ್ಕೆ ವಿದ್ಯುತ್ ಸಂಪರ್ಕ ಮತ್ತು ಬಲ್ಬುಗಳನ್ನು ಇದುವರೆಗೂ ಅಳವಡಿಸಲಿಲ್ಲ. ಇದರಿಂದ ರಾತ್ರಿಯ ವೇಳೆ ಜನರಿಗೆ ಓಡಾಡಲಿಕ್ಕೆ ತುಂಬಾ ಕಷ್ಟವಾಗುತ್ತಿದೆ. ಇನ್ನು ವಿಶಾಲವಾದ ರಸ್ತೆಯಲ್ಲಿ ರೋಡ್ ಹಂಪ್ ಇಲ್ಲದೆ ಹೋದ ಕಾರಣ ವಾಹನ ಸವಾರರು ವೇಗವಾಗಿ ಚಲಾಯಿಸುತ್ತಾರೆ. ಇದರಿಂದ ಮಕ್ಕಳು, ಮಹಿಳೆಯರು, ವಯಸ್ಸಾದವರಿಗೆ ರಸ್ತೆಯನ್ನು ದಾಟಲು ತುಂಬಾ ತೊಂದರೆಯಾಗುತ್ತಿದೆ. ಈ ಸಮಸ್ಯೆಗಳನ್ನು, ಸಂಬಂಧಪಟ್ಟ ಜನಪ್ರತಿನಿಧಿಗಳು ಹಾಗೂ ಸರಕಾರದ ಅಧಿಕಾರಿಗಳು ಕೂಡಲೇ ಪರಿಹರಿಸಬೇಕೆಂದು ಈ ಮೂಲಕ ಮನವಿ.

–ಕೃಷ್ಣ ಹೆಗಡೆ, ರಾಜರಾಜೇಶ್ವರಿನಗರ, ಮೈಸೂರು.

■ 'ನೀವೇ ಕಿತ್ತಾಡಿಕೊಂಡರೆ, ಮೋದಿ ನಿಮ್ಮ ಸರ್ಕಾರವನ್ನೇ ಮುಗಿಸಿಬಿಡುತ್ತಾರೆ'

ಮಾನ್ಯರೆ,

'ನೀವ್ ಹೀಗೆ ಕಿತ್ತಾಡಿದರೆ ಮೋದಿ ಸರ್ಕಾರ ಬೀಳಿಸ್ತಾರೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಮೋದಿ ಕಂಡರೆ ಬಹಳ ಭಯ ಪಡುತ್ತಾರೆ ಎನ್ನಬಹುದೆ? ಇಲ್ಲ ಅಂದರೆ ಯಾರಾದರೂ ಇನ್ನಾರದೋ ಸರ್ಕಾರ ಉಳಿಸುವುದಾಗಲೀ, ಕೆಡಹುವುದಾಗಲೀ ಸಾಧ್ಯವೆ?

ಈ ರೀತಿ ಹೇಳಿಕೆ ಕೊಟ್ಟಿದ್ದೂ ಕಲಬುರಗಿಯಲ್ಲಿ ನಡೆದ ಬಹಿರಂಗ ಸಭೆಯೊಂದರಲ್ಲಿ ಅದರಲ್ಲೂ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಸಮ್ಮುಖದಲ್ಲೇ ಎಂಬುದು ಇನ್ನೂ ಮುಖ್ಯ. ಹೀಗೆ ಹೇಳಲು ಕಾರಣವೂ ಇಲ್ಲದಿಲ್ಲ. ಇಂದು ರಾಜ್ಯದಲ್ಲಿ ಕಾಂಗ್ರೆಸ್ ಬಣ ರಾಜಕೀಯ ತುಸು ಜೋರಾಗೇ ನಡೆಯುತ್ತಿದೆ. ಸಿದ್ದರಾಮಯ್ಯ ಮತ್ತು ಡಿಕೆಶಿ ಮಧ್ಯೆ ಮುಸುಕಿನ ಗುದ್ದಾಟ ನಡೆಯುತ್ತಲೇ ಇದೆ. ಇದನ್ನೆಲ್ಲ ಸೂಕ್ಷ್ಮವಾಗಿ ನೋಡುತ್ತ ಇದ್ದ ಮಲ್ಲಿಕಾರ್ಜುನ ಖರ್ಗೆ, 'ನೀವೇ ಕಿತ್ತಾಡಿಕೊಂಡರೆ, ಮೋದಿ ನಿಮ್ಮ ಸರ್ಕಾರವನ್ನೇ ಮುಗಿಸಿಬಿಡುತ್ತಾರೆ' ಎಂದಿದ್ದು. ಮೋದಿ ಈ ನಿಟ್ಟಿನಲ್ಲಿ ಪ್ಲ್ಯಾನ್ ಹೆಣೆಯುತ್ತಿದ್ದಾರೆ ಅಂತಲೂ ಹೇಳುವಾಗ, ಇವರೀರ್ವರ ಒಳ ಜಗಳ ಯಾವ ಹಂತ ತಲ್ಪಿದೆ ಅಥವಾ ತಲುಪಬಹುದು ಎಂಬುದೂ ತಿಳಿದಂತಾಯಿತಲ್ಲವೆ ? ಹೀಗಾಗಿ ಏನೇ ಮನಸ್ತಾಪವಿದ್ದರೂ ನಿಮ್ಮ ನಿಮ್ಮೊಳಗೇ ಸುಧಾರಿಸಿಕೊಂಡು ಒಗ್ಗಟ್ಟಾಗಿರಬೇಕು ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ. ಒಂದಂತೂ ನಿಜ. ಇಂದು ರಾಜ್ಯ ಕಾಂಗ್ರೆಸ್ಸಿನಲ್ಲಿ ಎಲ್ಲವೂ ಸರಿ ಇಲ್ಲ. ಅಧಿಕಾರಕ್ಕಾಗಿ ಏನೆಲ್ಲ ಕಸರತ್ತು ನಡೆಯುತ್ತಿದೆ ಎಂಬುದೂ ರಾಜ್ಯದ ಜನರ ಅರಿವಿಗೂ ಬರುತ್ತಿದೆ. ಹೌದು. ಒಗ್ಗಟ್ಟಿದ್ದರೆ ಸಮಸ್ಯೆ ಪರಿಹಾರ ಸಾಧ್ಯ. ಆದರೆ ಅದು ಯಾರಿಂದ, ಎಲ್ಲಿಂದ ಬರಬೇಕು?

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಬದಲಾವಣೆ ಜಗದ ನಿಯಮ

ಇದ್ದಂತೆ ಯಾವುದೂ ಇರುವುದಿಲ್ಲ ಗಾಳಿ, ಬೆಳಕು, ಏರು, ಇಳಿಗಳಲ್ಲಿ ಕೊಂಚವೋ ಇಲ್ಲವೇ ಪೂರಾ ಬದಲಾವಣೆಗೆ ತನ್ನನ್ನು ಒಡ್ಡಿಕೊಂಡು ರೂಪ ಸ್ವರೂಪದಲಿ ಆಕಾರವನ್ನು ತಾಳುತ್ತಿರುತ್ತದೆ. ಪ್ರಕೃತಿ ಬಿಸಿಲು, ಬೇಸಿಗೆ, ಚಳಿ ಹೀಗೆ ತನ್ನದೇ ಆದ ವೈಶಿಷ್ಟ್ಯವನ್ನು ಮೈಗೂಡಿಸಿಕೊಂಡು ಕಾಲಕಾಲಕ್ಕೂ ಬದಲಾಗುತ್ತಲೇ ಇರುತ್ತದೆ. ಮನುಷ್ಯನು ಪ್ರಕೃತಿಯಂತೆ ಬದಲಾಗುತ್ತಿರುವ ಕಾಲಘಟಕ್ಕೆ ತನ್ನನ್ನು ತಾನು ಬದಲಿಸಿಕೊಂಡು ಮುಂದೆ ಸಾಗಬೇಕಾಗುವುದು ಅನಿವಾರ್ಯವು, ಅವಶ್ಯಕವು ಆಗಿದೆ.



> "ಸಹಜತೆಯಲ್ಲಿ ಸ್ವಭಾವದಿಂದ ಹರಿಯುವ ನೀರು ಪರಿಶುದ್ಧವಾಗಿರುತ್ತದೆ, ನಿಂತ ನೀರು ವಿಕಾರತೆಯಲ್ಲಿ ಕೆಡುತ್ತದೆ. ನಮ್ಮ ಬದುಕು ಯಾವಾಗಲೂ ಹರಿಯುವ ನೀರಿನಂತೆ; ಬದುಕಿನಲ್ಲಿ ಎದುರಾಗುವ ಎಲ್ಲಾ ಅಡೆತಡೆಗಳನ್ನು ಮೀರಿ ಮುಂದೆ ಸಾಗಬೇಕು. ನಿಂತ ನೀರಿನ ಹಾಗೆ ಕೆಡುತ್ತಲಿರಬಾರದು, ಬದಲಾಗುತ್ತಿರುವ ಸನ್ನಿವೇಶಗಳಿಗೆ ತಕ್ಕಂತೆ ನಮ್ಮನ್ನು ನಾವು ಮಾರ್ಪಡಿಸಿಕೊಂಡು ಮುನ್ನುಗ್ಗಬೇಕಾಗಿರುತ್ತದೆ.

ಸಹಜತೆಯಲ್ಲಿ ಸ್ವಭಾವದಿಂದ ಹರಿಯುವ ನೀರು ಪರಿಶುದ್ಧವಾಗಿರುತ್ತದೆ, ನಿಂತ ನೀರು ವಿಕಾರತೆಯಲ್ಲಿ ಕೆಡುತ್ತದೆ. ನಮ್ಮ ಬದುಕು ಯಾವಾಗಲೂ ಹರಿಯುವ ನೀರಿನಂತೆ; ಬದುಕಿನಲ್ಲಿ ಎದುರಾಗುವ ಎಲ್ಲಾ ಅಡೆತಡೆಗಳನ್ನು ಮೀರಿ ಮುಂದೆ ಸಾಗಬೇಕು. ನಿಂತ ನೀರಿನ ಹಾಗೆ ಕೆಡುತ್ತಲಿರಬಾರದು, ಬದಲಾಗುತ್ತಿರುವ ಸನ್ನಿವೇಶಗಳಿಗೆ ತಕ್ಕಂತೆ ನಮ್ಮನ್ನು ನಾವು ಮಾರ್ಪಡಿಸಿಕೊಂಡು ಮುನ್ನುಗ್ಗಬೇಕಾಗಿರುತ್ತದೆ.

ಅಪ್ಡೇಟ್ ಆದಷ್ಟು ಬೆಲೆ ಜಾಸ್ತಿ : ಮೊಬೈಲ್ ಫೋನ್‌ಗಳು, ವಾಹನಗಳು ಹೆಚ್ಚೆಚ್ಚು ಬದಲಾವಣೆಗೆ ಒಳಪಟ್ಟು ಹೊಸ ರೂಪದಲ್ಲಿ ಮಾರುಕಟ್ಟೆಗೆ ಬಂದಾಗ ಅದಕ್ಕೆ ತಕ್ಕಂತೆ ಅದರ ಬೆಲೆಯನ್ನು ನೀಡಿ ಖರೀದಿಸುತ್ತೇವೆ. ಹಾಗೆಯೇ ಬದಲಾಗುತ್ತಿರುವ ಕಾಲಮಾನಕ್ಕೆ ತಕ್ಕಂತೆ ನಮ್ಮನ್ನು ನಾವು ಅಪ್ಡೇಟ್ ಮಾಡಿಕೊಂಡಲ್ಲಿ ಮುಕ್ತ ಅವಕಾಶಗಳು ದೊರಕುತ್ತದೆ. ನಮ್ಮ ಕಾಲದಲ್ಲಿ ಇವುಗಳನ್ನೆಲ್ಲ ಕಲಿಸಿಲ್ಲ, ಈಗ ಕಲಿಯುವುದು ಕೂಡ ಬೇಕಿಲ್ಲ ಎಂದು ಅಪ್ಪ ಹಾಕಿದ ಆಲದ ಮರಕ್ಕೆ ನೇತು ಹಾಕಿಕೊಂಡರು ಎಂಬ ಗಾದೆ ಮಾತಿಗೆ ಪೂರಕ ಎಂಬಂತೆ ಆಧುನಿಕ ಕಾಲಕ್ಕೆ ತಕ್ಕಂತೆ ನಮ್ಮನ್ನು ಬದಲಿಸಿಕೊಳ್ಳದಿದ್ದಲ್ಲಿ ನಾವೆಲ್ಲ ಕೂಪ ಮಂಡೂಕಗಳಂತೆ ಪೈಪೋಟಿಯಲ್ಲಿ ಭಾಗವಹಿಸಲಾಗದೆ ಹೊರಗೆ ನಿಂತು ಗೆದ್ದವರನ್ನು ನೋಡಿ ಪ್ರೋತ್ಸಾಹ ಕೊಡುವ ಕೆಲಸ ಮಾಡಬೇಕಾಗುತ್ತದೆ. ನಾವು ನಿಂತಲ್ಲೇ ನಿಲ್ಲಬೇಕಾಗುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಹೊಸ ತಲೆಮಾರಿನ ಹೊಸ ತನಗಳಿಗೆ ನಮ್ಮನ್ನು ನಾವು ಬದಲಿಸಿಕೊಂಡರೆ ಆರಂಭದಲ್ಲಿ ಕಷ್ಟ ಎನಿಸಿದರೂ ಪಳಗಿದಂತೆಲ್ಲ ಅವು ಸುಲಭವಾಗುತ್ತದೆ.

ಉದಾಹರಣೆಗೆ ಕಂಪ್ಯೂಟರ್ ಮೊದಲು ಬಂದಾಗ ಇದ್ದ ರೀತಿಗೂ ಈಗ ಇರುವ ರೀತಿಗೂ ಅಜಗಜಾಂತರ ವ್ಯತ್ಯಾಸ ಇದೆ. ಕಂಪ್ಯೂಟರ್‌ನಲ್ಲಿ ಟೈಪ್ ಮಾಡುವಾಗ ಮೊದಲು ಅನುಭವಿಸುತ್ತಿದ್ದ ಕಷ್ಟ ಇವತ್ತಿನ ಪ್ರಸ್ತುತ ದಿನಗಳಲ್ಲಿ ಸುಲಭವಾಗಿದೆ. ಮೊಬೈಲ್‌ನಲ್ಲೂ ಕೂಡ ಮೊದಲು ಯಾವುದೇ ವಿಷಯವನ್ನು ಟೈಪ್ ಮಾಡಲು ಕಷ್ಟವಾಗುತ್ತಿತ್ತು ಈಗ ಟೈಪ್ ಮಾಡಲು ಬರದಿದ್ದರೂ ಕೇವಲ ಬಾಯಿ ಮಾತಿನ ಮೂಲಕ ಹೇಳಿದರೂ ಅದು ತನ್ನಷ್ಟಕ್ಕೆ ತಾನೇ ನಮಗೆ ಬೇಕಾದ ಭಾಷೆಯಲ್ಲಿ ಅಕ್ಷರಗಳನ್ನು ಟೈಪ್ ಮಾಡಿ ಕೊಡುತ್ತದೆ. ಇವೆಲ್ಲಕ್ಕೂ ಕಾರಣ ಕಾಲಕ್ಕೆ ತಕ್ಕಂತೆ ಬದಲಾವಣೆಗೆ ಒಳಪಡುವುದು.

ಅಭಿವೃದ್ಧಿ ಮಾರ್ಗದಲ್ಲಿ ಸಾಗುವಾಗ ಹೊಸ ಹೊಸ ಬದಲಾವಣೆಗೆ ತಕ್ಕಂತೆ ನಮ್ಮನ್ನು ನಾವು ಬದಲಿಸಿಕೊಳ್ಳಲೇಬೇಕು. ಕೇವಲ ಹತ್ತು ವರ್ಷದ ಹಿಂದಿನ ಸ್ಥಿತಿಯನ್ನು ನೆನಪು ಮಾಡಿಕೊಂಡರೆ ಹಾಗೆಲ್ಲ ಹಣವನ್ನು ಬ್ಯಾಂಕಿನಲ್ಲಿ ಹೋಗಿ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಂತು ದುಡ್ಡನ್ನು ಹಾಕುವುದಾಗಲಿ/ ನಗದನ್ನು ಸ್ವೀಕರಿಸುವುದಾಗಲಿ ಮಾಡಬೇಕಾಗಿತ್ತು. ಆದರೆ ಪ್ರಸ್ತುತ ಅವೆಲ್ಲವನ್ನು ಯಾವುದೇ ರೀತಿಯ ಕಷ್ಟವಿಲ್ಲದೆ ನಮ್ಮ ಮೊಬೈಲ್‌ನಲ್ಲೇ ಮಾಡಿಕೊಳ್ಳಬಹುದು. ಇದು ಕೂಡ ಹೊಸ ವಿದ್ಯುನ್ಮಾನ ತಂತ್ರಗಳಿಗೆ ಸ್ಪಂದಿಸುವ ಗುಣವನ್ನು ಬೆಳೆಸಿಕೊಂಡಾಗ ಮಾತ್ರ ಸಾಧ್ಯವಾದದ್ದು.

ಎಲ್ಲಿಯವರೆಗೆ ನಾವು ನಮ್ಮ ಗುಣಗಳನ್ನು ನಮ್ಮ ಆಲೋಚನೆಗಳನ್ನು ಬದಲಿಸಿಕೊಳ್ಳದೆ ಒಂದೇ ಬಗೆಯಲ್ಲಿ ತಟಸ್ಥವಾಗಿ ಇರುತ್ತೇವೆಯೋ ಅಲ್ಲಿಯವರೆಗೂ ನಾವು ನಿಂತ ನೀರಾಗಿಯೇ ಇರಬೇಕಾಗುತ್ತದೆ. ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ನಮ್ಮ ಆಲೋಚನೆಗಳನ್ನು ಬದಲಿಸಿಕೊಳ್ಳದಿದ್ದರೆ, ಬದಲಾದ ಪರಿಸ್ಥಿತಿಗೆ ತಕ್ಕಂತೆ ನಮ್ಮನ್ನು ಮಾರ್ಪಡಿಸಿಕೊಳ್ಳದಿದ್ದರೆ ಕಷ್ಟ. ಹಾಗಾಗಿ ಕಾಲಕ್ಕೆ ತಕ್ಕಂತೆ ನಮ್ಮನ್ನು ನಾವು ಬದಲಿಸಿಕೊಂಡರೆ ಅವಕಾಶಗಳು ಹೆಚ್ಚೆಚ್ಚು ಸಿಗುತ್ತದೆ.

ಬುದ್ಧಿವಂತಿಕೆ: ಬದಲಾಗುತ್ತಿರುವ ಕಾಲಮಾನಕ್ಕಂತೆ ಮಾರ್ಪಡಿಸಿಕೊಳ್ಳಬೇಕು. ಕಠಿಣ ಕೆಲಸ (ಹಾರ್ಡ್ ವರ್ಕ್) ಮಾಡುವವರಿಗಿಂತ ಬುದ್ಧಿವಂತಿಕೆಯಿಂದ (ಸ್ಮಾರ್ಟ್ ವರ್ಕ್) ಚುರುಕಾಗಿ ಕೆಲಸ ಮಾಡುವವರಿಗೆ ಇಂದಿನ ಕಾಲದಲ್ಲಿ ಹೆಚ್ಚಿಗೆ ಪ್ರಾಧ್ಯಾನತೆ ನೀಡಲಾಗುತ್ತಿದೆ. ಹಾಗಾಗಿ ನಮ್ಮ ಬುದ್ಧಿವಂತಿಕೆಯನ್ನು ಹೆಚ್ಚಾಗಿ ಹರಿತಗೊಳ್ಳಬೇಕಾಗಿದೆ.

ಬಾಲ್ಯದಲ್ಲಿದ್ದಾಗ ಮನೆ ಮುಂದೆ ಚಾಕು, ಮಚ್ಚು, ಕತ್ತಿಯನ್ನು ಸಾಣೆ ಹಿಡಿಯಲು ಬರುತ್ತಲಿದ್ದರು. ಮೊಂಡಾಗಿರುವ ವಸ್ತುಗಳಿಗೆ ಸಾಣೆ ಹಿಡಿದಷ್ಟು ಅವು ತನ್ನ ತನವನ್ನು ಬದಲಿಸಿಕೊಂಡು ಮೊನಚಾಗಿ ಮಾರ್ಪಾಡುಗೊಂಡು ಉಪಯೋಗಕ್ಕೆ ಬರುವಂತಾಗುತ್ತಿತ್ತು. ಹೀಗೆ ನಾವು ಕೂಡ ನಮ್ಮ ಬುದ್ಧಿಯನ್ನು ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳಬೇಕು. ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ನಮ್ಮನ್ನು ನಾವು ಬದಲಿಸಿಕೊಳ್ಳದಿದ್ದರೆ (ಅಪ್ಡೇಟ್) ಹಿಂದುಳಿಯಬೇಕಾಗುತ್ತದೆ.

ನಮ್ಮಲ್ಲಿ ಎಷ್ಟೋ ಜನ ನಮ್ಮ ಸಾಮರ್ಥ್ಯಕ್ಕೆ ತಕ್ಕ ಕೆಲಸ ಸಿಗುತ್ತಿಲ್ಲ, ತಕ್ಕ ವೇತನ ಸಿಗುತ್ತಿಲ್ಲವೆಂದು ಪರದಾಡುವ, ಗೊಣಗಾಡುವುದನ್ನು ನೋಡಿರುತ್ತೇವೆ. ನಾವು ಮಾಡುವ ಕೆಲಸದಲ್ಲಿ ಪರಿಪೂರ್ಣತೆಯನ್ನು ಕಂಡುಕೊಳ್ಳದೆ ಕಡಿಮೆ ಸಮಯದಲ್ಲಿ ದಕ್ಷವಾಗಿ ಕೆಲಸವನ್ನು ನಿರ್ವಹಿಸುವ ಸೂಕ್ಷ್ಮತೆಯನ್ನು ಅರಿತುಕೊಳ್ಳದೆ ಪರಿತಪಿಸುತ್ತಾರೆ. ನಮ್ಮನ್ನು ನಾವು ಬದಲಿಸಿಕೊಳ್ಳದೇ ನಮ್ಮ ಬೆಲೆ ಹೆಚ್ಚಾಗಲಾರದು. ಇದನ್ನು ಹೇಳುವಾಗ ನಮ್ಮ ತಂದೆ ಅವರ ಜೀವನದಲ್ಲಿ ನಡೆದ ಪ್ರತಿ ಸಾರಿ ನಮಗೆ ಹೇಳುತ್ತಲಿದ್ದ ಪ್ರಸಂಗ ನೆನಪಿಗೆ ಬರುತ್ತದೆ.

ಪ್ರಸಂಗ: ನಮ್ಮ ತಂದೆ ಅಡುಗೆ ಭಟ್ಟರು. ಒಮ್ಮೆ ನಮ್ಮ ತಂದೆಯ ಕಾಲದಲ್ಲಿ ಹೋಟೆಲ್‌ನಲ್ಲಿ ಅಡುಗೆ ಭಟ್ಟರ ಕೆಲಸಕ್ಕೆ ಸಂದರ್ಶನವನ್ನು ಕರೆದಿದ್ದರು. ಎಲ್ಲರಂತೆ ಒಳ್ಳೆಯ ವೇತನ ಸಿಗಬಹುದೆಂಬ ನಿರೀಕ್ಷೆಯಲ್ಲಿ ನಮ್ಮ ತಂದೆ ಹೋಗಿದ್ದರು. ಆ ಸಂದರ್ಶನದಲ್ಲಿ ಐದು ನಿಮಿಷದಲ್ಲಿ ಟೀ ಸಿದ್ಧಪಡಿಸುವಂತೆ ತಿಳಿಸಲಾಗಿತ್ತು. ಬಂದಿದ್ದವರೆಲ್ಲ ಆಗಿನ ಕಾಲದ ಸೀಮೆಎಣ್ಣೆಯ ಸ್ಟೌ ಅನ್ನು ಹಚ್ಚುವುದರಲ್ಲಿಯೇ ಸಮಯವನ್ನು ಕಳೆಯುತ್ತಿದ್ದರು. ನಮ್ಮ ತಂದೆ ಸರದಿ ಬಂದಾಗ ಅವರು ಉಳಿದವರಂತೆ ಪ್ರಯತ್ನ ಮಾಡದೇ ಕಡ್ಡಿ ಪೆಟ್ಟಿಗೆಯನ್ನು ತೆಗೆದು ಕಡ್ಡಿಗಳಲ್ಲಿ ಟೀ ಎಂಬ ಅಕ್ಷರವನ್ನು ಸಿದ್ಧಪಡಿಸಿ ತೋರಿಸಿದರಂತೆ. ಅಲ್ಲಿದ್ದವರಿಗೆಲ್ಲ ಇದು ಸೋಜಿಗವನ್ನುಂಟುಮಾಡಿ ಹೀಗೇಕೆ ಮಾಡಿದರೆಂದು ಕೇಳಿದಾಗ 5 ನಿಮಿಷದಲ್ಲಿ ಟೀ ಮಾಡಲು ಸಾಧ್ಯವಿಲ್ಲ. ಹೀಗೆ ಮಾಡಿದರೆ ಮಾಡಬಹುದು ಎಂದು ಉತ್ತರ ಹೇಳಿದರಂತೆ. ಅಲ್ಲಿದ್ದವರಿಗೆ ಉತ್ತರದಿಂದ ಸಂತೋಷವಾಗಿ ಒಳ್ಳೆಯ ವೇತನದೊಂದಿಗೆ ಹೋಟಲ್‌ನಲ್ಲಿ ಕೆಲಸವನ್ನು ನೀಡಿದರಂತೆ. ನಮ್ಮ ತಂದೆ ಹೆಚ್ಚು ಓದಿದವರಲ್ಲ ಆದರೆ ಸಮಾಜದಲ್ಲಿ ಹೇಗೆ ಬದುಕಬೇಕೆಂಬ ಅಂಶವನ್ನು ತಿಳಿದುಕೊಂಡಿದ್ದವರು. ಹಾಗಾಗಿ ಬುದ್ಧಿವಂತಿಕೆ ಎಂಬುದು ಇಂದಿನ ಕಾಲದಲ್ಲಿ ತುಂಬಾ ಮುಖ್ಯವಾಗಿರುತ್ತದೆ.

ಜೀವನ ಅನುಭವಗಳ ಪಾಠಶಾಲೆ: ಜೀವನ ಅನುಭವಗಳ ಪಾಠಶಾಲೆ ಇದ್ದಂತೆ. ಪ್ರತಿದಿನವೂ ಒಂದಲ್ಲ ಒಂದು ಹೊಸ ಹೊಸ ಪಾಠಗಳನ್ನು ಕಲಿಸಿಕೊಡುತ್ತಲೇ ಇರುತ್ತದೆ. ಆ ಅನುಭವಗಳ ಪಾಠಶಾಲೆಯಲ್ಲಿ ಕಲಿಯುವ ವಿಚಾರಗಳು ವಿಭಿನ್ನ, ವಿಶಿಷ್ಟವಾಗಿರುತ್ತದೆ. ಕಲಿಕೆಯ ಹಲವು ಅವಕಾಶಗಳನ್ನು ಜೀವನ ತಂದೊಡ್ಡುತ್ತದೆ, ಯಾವ ವಿಶ್ವವಿದ್ಯಾನಿಲಯವು ಕಲಿಸದಿದ್ದ ಪಾಠಗಳನ್ನು ಜೀವನ ಕಲಿಸುತ್ತದೆ. ನಮಗೆ ಬೇಕಾದ, ಬೇಡದಿರುವ ಎಲ್ಲಾ ಅನುಭವಗಳನ್ನು ಬದುಕು ನೀಡುತ್ತದೆ.ಹೊಸತನವನ್ನು ಕಲಿತಷ್ಟು ನಾವು ಮತ್ತಷ್ಟು, ಮಗದಷ್ಟು ಕಲಿಯುವ ಅವಕಾಶಗಳು ಸಿಗುತ್ತವೆ. ಆದ್ದರಿಂದ ಸಾಧ್ಯವಾದಷ್ಟು ಹೊಸತನಗಳಿಗೆ ನಮ್ಮನ್ನು ನಾವು ಹೊಂದಾಣಿಕೆ ಮಾಡಿಕೊಳ್ಳುವುದನ್ನು ಕಲಿಯಬೇಕು. ಜೀವನ ಕಲಿಸುವ ಪಾಠಗಳನ್ನು ಮೈಗೂಡಿಸಿಕೊಳ್ಳಬೇಕು.

ಆಲೋಚಿಸುವ ಗುಣ ಬದಲಾಗಬೇಕು: ಎಲ್ಲರೂ ಹೋಗುವ ದಾರಿಯಲ್ಲಿ ನಾವು ಹೋದರೆ ಬೆಲೆ ಇರುವುದಿಲ್ಲ ನಮ್ಮದೇ ಆದ ದಾರಿಯನ್ನು ನಾವು ನಿರ್ಮಾಣ ಮಾಡಿಕೊಂಡರೆ ಒಳಿತು. ಸ್ಪರ್ಧಾತ್ಮಕವಾಗಿರುವ ಈ ಜಗದಲ್ಲಿ ವಿಭಿನ್ನವಾಗಿ ಆಲೋಚಿಸುವ ಗುಣ ನಮ್ಮದಾಗಬೇಕು. ನನಗೆ ಇದನ್ನು ಹೇಳುವಾಗ ಹಿಂದೊಮ್ಮೆ ಚಲನಚಿತ್ರ ನಟರಾದ ರಮೇಶ್ ಅರವಿಂದ್ ಹೇಳಿದ್ದ ಕಥೆಯೊಂದು ನೆನಪಿಗೆ ಬರುತ್ತದೆ.

ಕಥೆ: ಸಣ್ಣ–ಸಣ್ಣ ಚೂರುಗಳಾಗಿ ಹರಡಿ ಹೋಗಿದ್ದ ಪ್ರಪಂಚದ ಭೂಪಟವನ್ನು ಹುಡುಗನೊಬ್ಬ ಸರಿಪಡಿಸುವ ಕೆಲಸವನ್ನು ಮಾಡುತ್ತಿದ್ದ. ಮಗನ ಈ ಕೆಲಸವನ್ನು ನೋಡಿದ ತಂದೆ ಪ್ರಪಂಚದ ಭೂಪಟವನ್ನು ಸರಿಪಡಿಸಲು ಸಾಧ್ಯವಿಲ್ಲ ಬೇರೆ ಕೆಲಸ ಮಾಡು ಹೋಗು ಎಂದು ಬೈದು ಹೊರಹೋದರು. ತಮ್ಮ ಕೆಲಸ ಮುಗಿಸಿಕೊಂಡು ಸ್ವಲ್ಪ ಸಮಯ ದಲ್ಲಿ ಹಿಂದಿರುಗಿದಾಗ ಮಗ ಪ್ರಪಂಚದ ಭೂಪಟವನ್ನು ಸರಿಪಡಿಸಿದ್ದ. ಮಗನ ಈ ಕೆಲಸವನ್ನು ನೋಡಿ ತಂದೆಗೆ ಆಶ್ಚರ್ಯವಾಗುತ್ತದೆ. ಹೇಗೆ ಇದನ್ನು ಮಾಡಿದೆ ಎಂದು ಪ್ರಶ್ನಿಸಿದಾಗ ಮಗ ಈ ಉತ್ತರ ನೀಡಿದ – ಅಪ್ಪ ನೀವು ಹೇಳಿದ್ದು ನಿಜ ಪ್ರಪಂಚದ ಭೂಪಟವನ್ನು ಸರಿಪಡಿಸಲು ಸಾಧ್ಯವಿಲ್ಲ. ಆದರೆ, ಚಿತ್ರದ ಹಿಂದೆ ಮನುಷ್ಯನ ಚಿತ್ರವೂ ಇತ್ತು ಚದುರಿ ಹೋಗಿರುವ ಆ ಮನುಷ್ಯನ ಚಿತ್ರವನ್ನು ಸರಿಪಡಿಸುವ ಕೆಲಸವನ್ನು ಮಾಡಿದೆ. ಮೂಗು, ಬಾಯಿ, ಹಣೆ, ಕೈ, ಕಾಲು ಈ ರೀತಿ ಎಲ್ಲವನ್ನು ಸರಿಯಾಗಿ ಜೋಡಿಸಿಟ್ಟೆ. ನಂತರ ಅದನ್ನು ಹಿಂತಿರುಗಿಸಿಟ್ಟೆ ಆಗ ಪ್ರಪಂಚದ ಭೂಪಟ ಸಿದ್ಧವಾಯಿತು ಎಂದು ಉತ್ತರ ನೀಡಿದನಂತೆ.

ಇಲ್ಲಿ ನಾವು ಅರ್ಥಮಾಡಿಕೊಳ್ಳಬೇಕಾದ ಅಂಶವೊಂದಿದೆ. ತಂದೆಯ ಮಾತಿನಂತೆ ಮಗ ಪ್ರಯತ್ನವನ್ನು ಕೈ ಬಿಟ್ಟಿದ್ದರೆ ಪ್ರಯತ್ನದಲ್ಲಿ ಜಯಶೀಲನಾಗುತ್ತಿರಲಿಲ್ಲ. ಯೋಚಿಸುವ ರೀತಿಯನ್ನು ಬದಲಿಸಿಕೊಂಡ ಪರಿಣಾಮದಿಂದ ಪ್ರಪಂಚದ ಭೂಪಟ ಸಿದ್ಧವಾಗಿತ್ತು.

ಹೀಗೆ ಪ್ರತಿಯೊಬ್ಬರು ಬದಲಾಗುತ್ತಿರುವ ಸನ್ನಿವೇಶಗಳಿಗೆ ತಕ್ಕಂತೆ ನಮ್ಮ ಆಲೋಚನೆಗಳನ್ನು ಬದಲಿಸಿಕೊಂಡು ಕಾರ್ಯೋನ್ಮುಖವಾಗಿ ನಡೆದರೆ ಇತರಿಗಿಂತ ಹೆಚ್ಚು ಅವಕಾಶಗಳು ನಮ್ಮದಾಗುತ್ತವೆ. ಕಾಲ ಸರಿ ಇಲ್ಲ, ಪರಿಸ್ಥಿತಿ ಚೆನ್ನಾಗಿಲ್ಲ, ಪ್ರತಿಭೆಗೆ ಮನ್ನಣೆ ಇಲ್ಲ ಎಂಬ ದೂರುಗಳನ್ನು ನೀಡುವ ಮೊದಲು ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ನಮ್ಮನ್ನು ನಾವು ಮಾರ್ಪಡಿಸಿಕೊಂಡರೆ ಹೆಚ್ಚೆಚ್ಚು ಅವಕಾಶಗಳು ನಮಗೆ ಸಿಗುವುದರಲ್ಲಿ ಅನುಮಾನವೇ ಇಲ್ಲ. ಅವಕಾಶಗಳನ್ನು ಸದಾವಕಾಶಗಳನ್ನಾಗಿ ಮಾರ್ಪಡಿಸಿಕೊಂಡು ಕಾಲಕ್ಕೆ ತಕ್ಕಂತೆ ನಮ್ಮನ್ನು ನಾವು ಬದಲಿಸಿಕೊಂಡರೆ ಖಂಡಿತ ವಾಗಿಯೂ ನಮ್ಮ ಪರಿಸ್ಥಿತಿ ಬದಲಾಗುತ್ತದೆ. ಬದಲಾದ ಕಾಲಕ್ಕೆ ತಕ್ಕಂತೆ ನಾವು ಕೂಡ ಬದಲಾಗಿ ಸಮೃದ್ಧ ಜೀವನ ನಡೆಸಬಹುದಾಗಿರುತ್ತದೆ. ಯಾವುದೂ ಇದ್ದಂತೆ ಇಲ್ಲ ನಮ್ಮ ಮೇಷ್ಟ್ರು ಇದ್ದಂತೆ ಈಗಿನವರು ಇಲ್ಲ, ವಿದ್ಯಾರ್ಥಿಗಳು ಸಹ ಅಂದು ಇದ್ದಂತೆ ಇಂದಿಲ್ಲ. ಅಂದು ಇದ್ದಂತೆ ಇಂದು ವ್ಯಕ್ತಿಗಳು ಇಲ್ಲ ವ್ಯಕ್ತಿತ್ವವೂ ಇಲ್ಲ. ಸಮಾಜ ತುಂಬಾ ಬದಲಾಗಿದೆ. ಮನುಷ್ಯನ ಮನಸ್ಸು ತುಂಬಾ ಬದಲಾಗಿದೆ. ಎಲ್ಲವೂ ಕೊಂಚ ಕೊಂಚವೇ ತನ್ನ ಸ್ಥಿತಿ– ಗತಿಗಳ ಅಳತೆಗೋಲಲ್ಲಿ ಬದಲಾವಣೆಯ ಬೆನ್ನತ್ತಿ ಬಂದ ಎಲ್ಲವನ್ನು ಬದಲಾವಣೆಗೆ ನೂಕಿ ತಾನೇ ಬದಲಾಗಿ ಬದಲಾವಣೆಯ ಪದದ ಮೇಲೆ ಆರೋಪ ಹೊರೆಸಿ ನ್ಯಾಯಾಧೀಶನ ಸಿಂಹಾಸನದಲ್ಲಿ ಕಾಲವೆಂಬ ಮಾಯಾವಿ ಕೂತು ಎಲ್ಲವನ್ನೂ ಎಲ್ಲರನ್ನೂ ತನ್ನ ಇಚ್ಛೆಯಲ್ಲಿಯೇ ಆಡಿಸುತ್ತಿರುವನು.

ಜಾತಿ ಗಣತಿ ವರದಿ ರಗಳೆ

ದತ್ತಾಂಶಗಳ ಮರು ಪರಿಶೀಲನೆಗೆ ಸರ್ಕಾರ ನಿರ್ಧಾರ

- ಸಚಿವ ಮುನಿಯಪ್ಪ, ನ್ಯಾಯಮೂರ್ತಿ ನಾಗಮೋಹನ್‌ದಾಸ್ ನೇತೃತ್ವದ ಪ್ರತ್ಯೇಕ ಸಮಿತಿ ರಚನೆ
- ಜೊತೆಗೆ ಕಾಂತರಾಜ್ ವರದಿ ದತ್ತಾಂಶ ಮರು ಪರಿಶೀಲನೆಗೆ ಸಂಪುಟ ಉಪಸಮಿತಿ ರಚನೆ

ಬೆಂಗಳೂರು, ಏ.18(ಕೆಎಂಶಿ)– ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷಾ ವರದಿಯ ಅಂಕಿ–ಅಂಶಗಳ ಸೋರಿಕೆಯಿಂದ ಎದುರಾದ ವಿರೋಧಕ್ಕೆ ಮಣಿದಿರುವ ರಾಜ್ಯ ಸರ್ಕಾರ ದತ್ತಾಂಶಗಳ ಮರುಪರಿಶೀಲನೆಗೆ ಮುಂದಾಗಿದೆ.

ವರದಿ ಅನುಷ್ಠಾನ ಸಂಬಂಧ ಗುರುವಾರ ಸಂಜೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಂತ್ರಿಗಳಿಂದಲೇ ದತ್ತಾಂಶಗಳ ಬಗ್ಗೆ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ.

ಮರುಪರಿಶೀಲನೆಗೂ ಮುನ್ನ, ಪರಿಶಿಷ್ಟ ಜಾತಿ ಹಾಗೂ ವರ್ಗದ ಒಳಮೀಸಲಾತಿ ಗೊಂದಲ ನಿವಾರಿಸಲು ತಜ್ಞರ ಸಮಿತಿ ರಚಿಸಿರುವಂತೆ ಇಲ್ಲಿಯೂ ಅದೇ ಮಾದರಿ ಅನುಸರಿಸಲು ನಿರ್ಧರಿಸಲಾಗಿದೆ.

ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಮುನಿಯಪ್ಪ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ಹಾಗೂ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಸಮಿತಿ ರಚಿಸಲಾಗಿದೆ. ಇದೇ ಮಾನದಂಡ ಇಟ್ಟುಕೊಂಡು ಕಾಂತರಾಜ್ ವರದಿಯಲ್ಲಿನ ದತ್ತಾಂಶಗಳ ಮರುಪರಿಶೀಲನೆಗೆ ಸಚಿವ ಸಂಪುಟ ಉಪಸಮಿತಿ ರಚಿಸಿ, ಅವರಿಂದಲೂ ಶಿಫಾರಸು ಪಡೆಯಲಿದೆ.

ಸಂಪುಟದ ಉಪಸಮಿತಿ ಶಿಫಾರಸಿನ ಮೇರೆಗೆ ದತ್ತಾಂಶಗಳ ಮರುಪರಿಶೀಲನೆಗೆ ಮತ್ತೊಂದು ಸಮಿತಿ ರಚಿಸುವ ಮೂಲಕ ವರದಿ ಗೊಂದಲಕ್ಕೆ ತಾತ್ಕಾಲಿಕ ಇತಿಶ್ರೀ ಹಾಡಲು ಸರ್ಕಾರ ಮುಂದಾಗಿದೆ.

ಜಾತಿ ಗಣತಿ ವರದಿ ದತ್ತಾಂಶಕ್ಕೆ ಯಾವ ಸಚಿವರದ್ದು ವಿರೋಧವಿಲ್ಲ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ಸಾಮಾಜಿಕ, ಆರ್ಥಿಕ ಸಮೀಕ್ಷಾ ವರದಿಯಲ್ಲಿನ ದತ್ತಾಂಶಕ್ಕೆ ಯಾವ ಸಚಿವರಿಂದಲೂ ವಿರೋಧ ವ್ಯಕ್ತವಾಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗುರುವಾರ ನಡೆದ ವಿಶೇಷ ಸಂಪುಟ ಸಭೆಯಲ್ಲಿ ಈ ವಿಷಯ ಚರ್ಚೆಯಾಯಿತು, ಆದರೆ, ಚರ್ಚೆ ಅಪೂರ್ಣ ಗೊಂಡಿದ್ದು, ಮೇ 2ರಂದು ಮತ್ತೆ ಸಭೆ ಮುಂದೆ ತರಲಾಗುವುದು ಎಂದಿದ್ದಾರೆ.

ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ಸಚಿವರ ನಡುವೆ ಯಾವುದೇ ಮಾತಿನ ಚಕಮಕಿ ನಡೆದಿಲ್ಲ, ಅವರುಗಳು ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಅದನ್ನೇ ನೀವುಗಳು ಗಲಭೆ ಎಂಬಂತೆ ಬಿಂಬಿಸಿದ್ದೀರಿ ಎಂದರು.

ಸುದ್ದಿಗಾರರೊಂದಿಗೆ ಪ್ರತ್ಯೇಕವಾಗಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವರದಿ ಕುರಿತು ವಿಚಾರ ವಿನಿಮಯ ನಡೆದಿದೆ, ಕೆಳಧ್ವನಿ, ಮೇಲ್‌ಧ್ವನಿ ಎಂಬುದೆಲ್ಲಾ ಏನೂ ಇಲ್ಲ, ಎಲ್ಲಾ ಮಾಧ್ಯಮಗಳ ಸೃಷ್ಟಿ, ಎಲ್ಲರೂ ತಮ್ಮ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ ಎಂದರು.

ದತ್ತಾಂಶಗಳ ಬಗ್ಗೆ ಸಂಪುಟದಲ್ಲೇ ತೀವ್ರ ವಿರೋಧ ವ್ಯಕ್ತವಾಗುವುದೆಂಬ ನಿರೀಕ್ಷೆ ಇರಲಿಲ್ಲ, ಆದರೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಈಶ್ವರ್ ಖಂಡ್ರೆ, ಎಸ್.ಎಸ್.ಮಲ್ಲಿಕಾರ್ಜುನ್, ಶಿವಾನಂದ ಪಾಟೀಲ್ ಹಾಗೂ ಚಲುವರಾಯಸ್ವಾಮಿ ಅಂಕಿ–ಅಂಶಗಳನ್ನು ಮುಂದಿಟ್ಟುಕೊಂಡು ವಿರೋಧಿಸಿ, ಗಟ್ಟಿಧ್ವನಿಯಲ್ಲಿ ವರದಿ ಒಪ್ಪದಿರುವಂತೆ ಆಗ್ರಹಪಡಿಸಿದರು.

ವರದಿ ಪರವಾಗಿ ಕೆಲವು ಸಚಿವರು ಬೆಂಬಲಿಸಿ ಮಾತನಾಡಿದರೂ, ಈ ಸಚಿವರು ತಮಗೆ ಒದಗಿಸಿದ್ದ ದಾಖಲೆಗಳನ್ನೇ ತೋರಿಸಿ ಪ್ರತಿಭಟಿಸಿ, ಜಯಪ್ರಕಾಶ್ ಹೆಗ್ಡೆ ಅವರು ಕಾಂತರಾಜ್ ವರದಿ ಬಗ್ಗೆ ಎತ್ತಿರುವ ಆಕ್ಷೇಪಗಳನ್ನೇ ಅಸ್ತ್ರವಾಗಿಸಿಕೊಂಡು ಮುಂದಿನ ಕ್ರಮಗಳಿಗೆ ತಾತ್ಕಾಲಿಕ ತಡೆ ಒಡ್ಡಿದರು.

ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಸಿದ್ದರಾಮಯ್ಯ, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ವರದಿ ಜಾರಿ ಮಾಡುವಂತೆ ಸೂಚಿಸಿದ್ದು, ಸಣ್ಣ–ಪುಟ್ಟ ದೋಷಗಳಿದ್ದರೆ ಸರಿಪಡಿಸಿ ಕೊಳ್ಳೋಣ ಎಂದು ಸಮಜಾಯಿಷಿಗೆ ಮುಂದಾದರು.

ತಕ್ಷಣವೇ ಶಿವಕುಮಾರ್ ಮಧ್ಯೆಪ್ರವೇಶಿಸಿ, ಮೀಸಲಾತಿ ಕಲ್ಪಿಸಲು ನಮ್ಮ ವಿರೋಧ ಇಲ್ಲ, ಕೇವಲ ಒಕ್ಕಲಿಗ, ವೀರಶೈವ/ಲಿಂಗಾಯತ ಸಮುದಾಯದ ಅಂಕಿ–ಅಂಶಗಳಷ್ಟೇ ಅಲ್ಲ, ಇತರೆ ಸಮುದಾಯಗಳಿಂದಲೂ ಅಂಕಿ–ಸಂಖ್ಯೆಗೆ ಅಪಸ್ವರ ಎದ್ದಿದೆ, ನಾವು ದುಡುಕಿದರೆ, ಈ ಹಿಂದೆ ಮೊಯಿಲಿ ನೇತೃತ್ವದಲ್ಲಿ ವಿಧಾನಸಭಾ ಚುನಾವಣೆ ಎದುರಿಸಿದಾಗ ಪಕ್ಷಕ್ಕೆ ಆದ ಸ್ಥಿತಿಯೇ ಬರಲಿದೆ.

ಮೀಸಲಾತಿ ಕಲ್ಪಿಸುವ ವಿಷಯದಲ್ಲಿ ಪಕ್ಷದ ನಿಲುವಿನಲ್ಲಿ ಬದಲಾವಣೆ ಇಲ್ಲ, ಆದರೆ, ಹೆಗ್ಡೆ ಅವರೇ ಹೇಳಿರುವಂತೆ ತಪ್ಪುಗಳನ್ನು ತಿದ್ದಿ ಎಲ್ಲರಿಗೂ ನ್ಯಾಯ ಕೊಡಿಸೋಣ.

ದತ್ತಾಂಶ ಮರುಪರಿಶೀಲನೆ ಆಗದ ಹೊರತು ವರದಿ ಅನುಷ್ಠಾನ ಸಾಧ್ಯವಿಲ್ಲ. ಒಳಮೀಸಲಾತಿಗೆ ಯಾವ ರೀತಿ ಮಾನದಂಡ ಅನುಸರಿಸಿದ್ದಿರೋ ಅದನ್ನೇ ಇಲ್ಲಿಯೂ ಅನುಸರಿಸಿ ನಂತರ ಸರ್ಕಾರ ತೀರ್ಮಾನಿಸಲಿ ಎಂದು ಗಟ್ಟಿಧ್ವನಿಯಲ್ಲಿ ಹೇಳಿದರು.

ಉಪಮುಖ್ಯಮಂತ್ರಿ ಸೇರಿದಂತೆ ಕೆಲವು ಸಚಿವರು ವ್ಯಕ್ತಪಡಿಸಿದ ನಿಲುವಿಗೇ ಅಂಟಿಕೊಂಡಿದ್ದರಿಂದ ಮಂತ್ರಿಮಂಡಲದಲ್ಲೇ ವರದಿಗೆ ಭಿನ್ನಾಭಿಪ್ರಾಯ ವ್ಯಕ್ತವಾದಾಗ ಮಧ್ಯೆ ಪ್ರವೇಶಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಮತ್ತೊಂದು ಸಭೆ ಮಾಡೋಣ, ಆ ಸಭೆಗೆ ಬರುವ ಮುನ್ನ ಸಚಿವರು ಲಿಖಿತ ವರದಿ ನೀಡಲಿ ನಂತರ ಯಾವ ಸಮಾಜಕ್ಕೂ ಅನ್ಯಾಯವಾಗದಂತೆ ತೀರ್ಮಾನ ಕೈಗೊಳ್ಳೋಣ ಎಂದು ವಿಷಯ ತಿಳಿಗೊಳಿಸಿದರು.

ಜಾತಿಗಣತಿ ವರದಿಯಲ್ಲಿ ಆರಾಧ್ಯ ಸಮುದಾಯದ ಹೆಸರು ನಾಪತ್ತೆ

ಆರಾಧ್ಯ ಮಹಾಸಭಾದಿಂದ ಕಳವಳ

ಮೈಸೂರು, ಏ.18(ಜಿಎ)–ಆರಾಧ್ಯ ಸಮುದಾಯಕ್ಕೆ ಸಾವಿರಾರು ವರ್ಷಗಳ ಪರಂಪರೆ ಹೊಂದಿದ್ದು, ರಾಜ್ಯಾದ್ಯಂತ ಸುಮಾರು ಲಕ್ಷ ಜನಸಂಖ್ಯೆ ಹೊಂದಿದೆ. ಹೀಗಿದ್ದರೂ ಜಾತಿವಾರು ಜನಗಣತಿಯಲ್ಲಿ ಈ ಸಮುದಾಯದ ಹೆಸರೇ ಪಟ್ಟಿಯಲ್ಲಿಲ್ಲ. ಇದರಿಂದಾಗಿ ಸಮುದಾಯ ಅನೇಕ ರೀತಿಯ ಸಮಸ್ಯೆ ಎದುರಿಸಬೇಕಾಗಿ ಬಂದಿದೆ ಎಂದು ಆರಾಧ್ಯ ಮಹಾಸಭಾ ಅಧ್ಯಕ್ಷ ನಾಗಭೂಷಣ ಆರಾಧ್ಯ ಕಳವಳ ವ್ಯಕ್ತಪಡಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1891ರಲ್ಲಿ ಅಂದಿನ ಬ್ರಿಟಿಷ್ ಸರ್ಕಾರದ ಜನಗಣತಿಯಲ್ಲಿಯೂ ಈ ಸಮುದಾಯವನ್ನು ಉಪ ಪಂಗಡಕ್ಕೆ ಸೇರಿಸಿದ ಉದಾಹರಣೆ ಇದೆ. ಅಲ್ಲದೆ 2008ರ ಜಾತಿ ಜನಗಣತಿ ವರದಿಯಲ್ಲಿಯೂ ಉಲ್ಲೇಖಿತವಾಗಿದೆ. ಹೀಗಿದ್ದರೂ ಈಗ ಪ್ರಕಟವಾಗಿರುವ ಪಟ್ಟಿಯಲ್ಲಿಲ್ಲ. 2015ರಲ್ಲಿ ಕಾಂತರಾಜು ಆಯೋಗದ ಸಭೆಯಲ್ಲಿ ಸಮುದಾಯದವರು ಪಾಲ್ಗೊಂಡು ತಮ್ಮ ಸಮುದಾಯಕ್ಕೆ ಪ್ರಾತಿನಿಧ್ಯ ಬೇಕೆಂದು ದಾಖಲೆ ಪತ್ರಗಳೊಡನೆ ಮನವಿ ಸಲ್ಲಿಸಿದ್ದೇವೆ. ಆದರೂ ಸಹಾ ಈಗ ಕೈಬಿಡಲಾಗಿದೆ. ಹೀಗಾಗಿ ಸರ್ಕಾರಕ್ಕೆ ಮತ್ತೊಮ್ಮೆ ಮನವಿ ಮಾಡುತ್ತಿದ್ದು, ಒಂದು ವೇಳೆ ಉಪ ಪಂಗಡವೆಂಬ ಪಟ್ಟಿಗೆ ಮತ್ತೆ ಸೇರಿಸದಿದ್ದಲ್ಲಿ ನ್ಯಾಯಾಲಯ ಮೂಲಕ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ನಟರಾಜ್ ಆರಾಧ್ಯಕ, ವಿ.ಪಿ.ಆರಾಧ್ಯ, ಭೋಗಮಲ್ಲ ಆರಾಧ್ಯ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ದಾರಿ ತಪ್ಪಿದ ಅಧಿಕಾರಿಗಳು

ರಸ್ತೆ ಬದಿಯ ಸಾಲು ಮರಗಳ ಕಡಿಯುವ ವಿಚಾರದಲ್ಲಿ ರಾಜಕೀಯ ಇಚ್ಛಾಶಕ್ತಿ, ಸಾರ್ವಜನಿಕ ಸಮಾಲೋಚನೆ ಅಗತ್ಯ


ಬಾಪು ಸತ್ಯನಾರಾಯಣ, ಮುಖ್ಯ ಇಂಜಿನಿಯರ್ (ನಿವೃತ್ತ)


ಮೇಜರ್ ಜನರಲ್ (ನಿವೃತ್ತ) ಒಂಭತ್ಕೆರೆ, ಪರಿಸರವಾದಿ



ಮಾನ್ಯರೇ,

ಏಪ್ರಿಲ್ 13ರಂದು 'ಸ್ಟಾರ್ ಆಫ್ ಮೈಸೂರ್' ಮತ್ತು ಏಪ್ರಿಲ್ 14ರಂದು 'ಮೈಸೂರು ಮಿತ್ರ'ದಲ್ಲಿ ಸುದ್ದಿ ಪ್ರಕಟವಾಗಿರುವಂತೆ ಮೈಸೂರು ಮಹಾನಗರ ಪಾಲಿಕೆಯು ಅರಣ್ಯ ಇಲಾಖೆ ಸಹಕಾರದೊಂದಿಗೆ ನೆಕ್ಸಸ್ ಮಾಲ್ ಮತ್ತು ಎಸ್‌ಪಿ ಕಚೇರಿ ನಡುವಿನ ಹೈದರ್ ಅಲಿ ರಸ್ತೆಯನ್ನು ಅಗಲೀಕರಣಗೊಳಿಸುವ ಉದ್ದೇಶದಿಂದ ಇಲ್ಲಿದ್ದ ಮೂರು ಡಜನ್‌ಗೂ ಅಧಿಕ ಮರಗಳನ್ನು ನಿರ್ದಯವಾಗಿ ಕಡಿಯಲಾಗಿದೆ. ಹಚ್ಚ ಹಸಿರಿನಿಂದ ಕೂಡಿದ್ದಂತಹ ಮರಗಳನ್ನು ಹೀಗೆ ಕಡಿದು ಹಾಕಿರುವುದು ಪ್ರಕೃತಿ ಮೇಲೆ ಎಸಗಿದ ದೌರ್ಜನ್ಯವೇ ಸರಿ.

ನಿರಂತರವಾಗಿ ಹೆಚ್ಚುತ್ತಿರುವ ವಾಹನ ಸಂಖ್ಯೆಗೆ ಅನುಗುಣವಾಗಿ ಪ್ರಕೃತಿಯನ್ನು ಬಲಿಕೊಟ್ಟು ರಸ್ತೆಗಳನ್ನು ಅಗಲೀಕರಣಗೊಳಿಸುವುದು ಮುಂದುವರಿಯುತ್ತದೆ ಎಂಬುದು ಈ ಕ್ರಮದ ಅರ್ಥವೇ? **ಸುಲಭ ಪರಿಹಾರಗಳಿಲ್ಲ ಎಂದು ಒಪ್ಪಿಕೊಂಡರೂ ಪ್ರಶ್ನೆ ಉಳಿಯುತ್ತದೆ; ಅದೇಂದರೆ, ಪಾಲಿಕೆಯು ಪರ್ಯಾಯ ವಿಧಾನಗಳನ್ನು ಶೋಧಿಸಿದೆಯೇ?**

ಪಾಲಿಕೆ ಅಧಿಕಾರಿ ವರ್ಗ ನಿಜವಾಗಿಯೂ ಪರ್ಯಾಯ ವಿಧಾನಗಳ ಬಗ್ಗೆ ಚಿಂತಿಸಿದ್ದರೆ, ಹೆಚ್ಚು ಸುಸ್ಥಿರ ಪರಿಹಾರಗಳನ್ನು ಕಂಡುಕೊಳ್ಳಬಹುದಿತ್ತು. ಇಲ್ಲಿ ನಿಜಕ್ಕೂ ಅಗತ್ಯವಿರುವುದು ಸಕಾರಾತ್ಮಕ ಚಿಂತನೆ, ಪ್ರಕೃತಿ ಸ್ನೇಹಿ ಆಲೋಚನೆ ಹಾಗೂ ರಾಜಕೀಯ ಇಚ್ಛಾಶಕ್ತಿ ಮತ್ತು ಮುಂದುವರಿದ ನಗರ ಯೋಜನೆಯ ಸಂಯೋಜನೆಯಾಗಿದೆ. ಸಾರ್ವಜನಿಕ ಸಾರಿಗೆಯನ್ನು ಉತ್ತೇಜಿಸುವುದು, ವಾಹನಗಳ ಸಂಚಾರ ವಿಧಾನ ಅವಲೋಕಿಸುವುದು ಮತ್ತು ಅತಿಯಾದ ವಾಹನ ಬಳಕೆ ನಿರ್ಬಂಧಿಸುವಂತಹ ತಂತ್ರಗಾರಿಕೆಗಳು ಬಹಳ ದೂರದ ಆಲೋಚನೆಯಾಗಬಹುದು.

ದೀರ್ಘಾವಧಿ ಪರಿಣಾಮಗಳನ್ನು ಪರಿಗಣಿಸದೆ ಸುಲಭ ಪರಿಹಾರಗಳನ್ನು ಆಶ್ರಯಿಸುವ ಬದಲಾಗಿ ವಿಕಸನಗೊಳ್ಳುತ್ತಿರುವ ಸಂಚಾರ ಮಾದರಿಗಳನ್ನು ನಿರಂತರವಾಗಿ ವಿಶ್ಲೇಷಿಸುವ ಮತ್ತು ಹೊಸ ಪ್ರಾಯೋಗಿಕ ತಂತ್ರಗಳನ್ನು ಅಭಿವೃದ್ಧಿಪಡಿಸುವ ಇಚ್ಛಾಶಕ್ತಿ ಇರಬೇಕು. ಸಂಚಾರ ದಟ್ಟಣೆ ಯಾವಾಗಲೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಸಣ್ಣ ಕ್ರಮಗಳ ಜಾರಿ ಮೂಲಕ ದಟ್ಟಣೆಯನ್ನು ಗಮನಾರ್ಹವಾಗಿ ಸುಧಾರಿಸಬಹುದು. ಅಲ್ಲದೆ, ನಗರದ ಮೂಲಸೌಕರ್ಯದ ಮೇಲಿನ ಒತ್ತಡವನ್ನು ಸಹ ಕಡಿಮೆ ಮಾಡಬಹುದು.

–ಹೆಚ್.ಆರ್.ಬಾಪು ಸತ್ಯನಾರಾಯಣ, ಸರಸ್ವತಿಪುರಂ.

ಟಿಪ್ಪಣಿ: ಮೈಸೂರಿನ ಹಿರಿಯ ನಾಗರಿಕರಾದ ಹೆಚ್.ಆರ್. ಬಾಪು ಸತ್ಯನಾರಾಯಣ ಅವರು ಉನ್ನತ ಮಟ್ಟದ ಇಂಜಿನಿಯರ್ (ಬಿಇ, ಸಿಇ, ಎಫ್‌ಐಇ, ಎಫ್‌ಐವಿ, ಎಂಐಆರ್‌ಸಿ), ಮುಖ್ಯ ಇಂಜಿನಿಯರ್ (ನಿವೃತ್ತ) ಮತ್ತು ಕನ್ಸಲ್ಟೆಂಟ್/ಆರ್ಬಿಟರ್. ಇವರು ತಮ್ಮ ಅಪಾರ ಅನುಭವದಿಂದ ವಿಚಾರ ಮಂಡಿಸಿದ್ದಾರೆ. ನಮ್ಮ ನಗರದ ಪ್ರಸ್ತುತದ ಆಡಳಿತ ವರ್ಗವು ಇಂತಹ ಕಾಳಜಿಯುಳ್ಳ ಹಿರಿಯ ನಾಗರಿಕರ ಸಲಹೆಗಳನ್ನು ಆಲಿಸಿ, ಅವರ ಜೊತೆಗಿನ ಸಮಾಲೋಚನೆಯಿಂದ ಪ್ರಯೋಜನ ಪಡೆಯುವುದು ಉತ್ತಮ.

ಲಲಿತ ಮಹಲ್ ಅರಮನೆ ರಸ್ತೆಗೆ ಸಂಬಂಧಿಸಿದಂತಹ ಇದೇ ರೀತಿಯ ಪ್ರಕರಣದಲ್ಲಿ ರಸ್ತೆ ಅಗಲೀಕರಣಕ್ಕಾಗಿ ನೂರಾರು ಮರಗಳನ್ನು ಕಳೆದುಕೊಳ್ಳುವ ಅಪಾಯವಿತ್ತು. ಮೇಜರ್ ಜನರಲ್ (ನಿವೃತ್ತ) ಎಸ್.ಜಿ.ಒಂಭತ್ಕೆರೆ ನೇತೃತ್ವದ ಪರಿಸರವಾದಿ ಕಾರ್ಯಕರ್ತರು ನಡೆಸಿದ ನಿರಂತರ ಪ್ರತಿಭಟನೆ ಹಾಗೂ ಸಮಾಲೋಚನೆಯ ಪರಿಣಾಮವಾಗಿ ಮರಗಳನ್ನು ಉಳಿಸಿಕೊಳ್ಳಲಾಯಿತು. **ಹೆಚ್.ಆರ್.ಬಾಪು ಸತ್ಯನಾರಾಯಣ ಅವರು ತಮ್ಮ ಪತ್ರದಲ್ಲಿ ಉಲ್ಲೇಖಿಸಿದಂತೆ ಈ ಪ್ರಕರಣದಲ್ಲೂ ಪರ್ಯಾಯ ರೀತಿಯಲ್ಲಿ ರಸ್ತೆಯನ್ನು ಅಗಲೀಕರಣ ಮಾಡಬಹುದಿತ್ತು.**

ನಿನ್ನೆ, ನಾನು ಲಲಿತ ಮಹಲ್ ಅರಮನೆ ರಸ್ತೆಯ ಪ್ರಕರಣವನ್ನು ನೆನಪಿಸಿಕೊಂಡು ಜನರಲ್ ಒಂಭತ್ಕೆರೆ ಅವರಿಗೆ ಕಳುಹಿಸಿದ ವಾಟ್ಸಾಪ್ ಸಂದೇಶದಲ್ಲಿ ಈ ರೀತಿ ಬರೆದೆ :

"**ಜನರಲ್:** ನಾನು ಸಂತಸದಿಂದ ನೆನಪಿಸಿಕೊಳ್ಳುತ್ತೇನೆ. ಲಲಿತಮಹಲ್ ಪ್ಯಾಲೆಸ್ ರಸ್ತೆಯಲ್ಲಿನ ನೂರಾರು ಮರಗಳು ನಾಶವಾಗುತ್ತಿದ್ದವು. ಹಾಗೆಯೇ ಪೊಲೀಸ್ ಭವನದ ಬಳಿಯ ಮರಗಳನ್ನು ಹೊಂದಿರುವ ಉದ್ಯಾನವನವೂ ಕಣ್ಮರೆಯಾಗುತ್ತಿತ್ತು. ಜೊತೆಗೆ, ಪೊಲೀಸ್ ಭವನವು ರಸ್ತೆಯ ಪಕ್ಕದಲ್ಲಿಯೇ ಅವ್ಯವಸ್ಥಿತ ರೀತಿ ನಿರ್ಮಾಣವಾಗುತ್ತಿತ್ತು.

ಐಪಿಎಸ್ ಅಧಿಕಾರಿ ಕೆಂಪಯ್ಯ (ನಿವೃತ್ತ) ನಿಮ್ಮ ಮಾತನ್ನು ಅರ್ಥಮಾಡಿಕೊಂಡು ಸದರಿ ಭವನದ ನಿರ್ಮಾಣವನ್ನು ಒಳಾವರಣಕ್ಕೆ ಸ್ಥಳಾಂತರ ಮಾಡಿದರು. ರಸ್ತೆ ಅಗಲೀಕರಣ ಕುರಿತಂತೆ ನಿಮ್ಮ ಆಕ್ಷೇಪಣೆಗೆ ನನ್ನ ವಿರೋಧವೂ ಇತ್ತು. ಆದರೆ, ಕೊನೆಗೆ ಈ ಸಮಸ್ಯೆಗೆ ಒಂದು ಮರವನ್ನೂ ಕಡಿಯದೆ ಪರಿಹಾರ ಕಂಡುಕೊಂಡರು. ಆ ಮರಗಳು ಉಳಿದ ತೃಪ್ತಿ ಇಂದು ನಮಗೆ ಇದೆ. ನಾನು ಲಲಿತ ಮಹಲ್ ಅರಮನೆ ರಸ್ತೆಯನ್ನು ಪ್ರತಿನಿತ್ಯವೂ ಹಲವು ಬಾರಿ ಬಳಸುತ್ತಿರುವ ಹಿನ್ನೆಲೆಯಲ್ಲಿ ನಿಮ್ಮ ಅಂದಿನ ಕೊಡುಗೆಗಾಗಿ ನಿಮಗೆ ವಂದಿಸುತ್ತೇನೆ.

–ಕೆ.ಬಿ.ಗಣಪತಿ, ಸಂಸ್ಥಾಪಕ ಸಂಪಾದಕರು, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್'.

ಮರಗಳ ಹನನ ವಿರೋಧಿಸಿ ಮೌನ ಸಂದೇಶ


'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕ ವಿಕ್ರಂ ಮುತ್ತಣ್ಣ ಅವರೊಂದಿಗೆ ಮೊಂಬತ್ತಿ ಬೆಳಗಿದ ಪರಿಸರ ಪ್ರೇಮಿಗಳು



ಶಾಸಕ ಟಿ.ಎಸ್.ಶ್ರೀವತ್ಸ, ರಘುಲಾಲ್ ಕಂಪನಿ ಮಾಲೀಕರಾದ ರಾಘವನ್, ಲೆಟ್ಸ್ ಡೂ ಇಟ್ ಮೈಸೂರು ಸಂಸ್ಥೆಯ ಬಿ.ಎಸ್.ಪ್ರಶಾಂತ್ ಇತರರು ಮರಗಳ ಹನನ ಖಂಡಿಸಿ ಮೌನ ಪ್ರತಿಭಟನೆ ನಡೆಸಿದರು



ಒಡನಾಡಿ ಸೇವಾ ಸಂಸ್ಥೆ ಹಾಗೂ ಮೈಸೂರಿನ ಹಿರಿಯ ನಾಗರಿಕರು ಮರಗಳ ಉಳಿವಿಗಾಗಿ ಮನವಿ ಮಾಡಿದರು


ಮರಗಳ ಮಾರಣಹೋಮ ಖಂಡಿಸಿ ತಲೆಗೆ ಕಪ್ಪುಪಟ್ಟಿ ಕಟ್ಟಿಕೊಂಡು ಪ್ರತಿಭಟಿಸಿದ ಮರಗಳ ಸ್ನೇಹಿತರು

ಪ್ರಭಾವಿ 'ಕೈ'ಗಳಿಂದ ಮೈಸೂರು ನಗರ ಪಾಲಿಕೆ ಪಾಲನೆ!



ಮೈಸೂರು, ಏ.18– ಮೈಸೂರಲ್ಲಿ ರಾತ್ರೋರಾತ್ರಿ ನಡೆದ ಮರಗಳ ಮಾರಣಹೋಮ, ಸಾರ್ವಜನಿಕರಲ್ಲಿ ಹಲವು ಅನುಮಾನಗಳನ್ನು ಹುಟ್ಟುಹಾಕಿದೆ.

ಹೈದರಾಲಿ ರಸ್ತೆಯನ್ನು ಎಸ್ಪಿ ಕಚೇರಿಯಿಂದ ಕಾಳಿಕಾಂಬ ದೇವಾಲಯದವರೆಗೆ ಅಗಲೀಕರಣಗೊಳಿಸಿ, ಅಭಿವೃದ್ಧಿಪಡಿಸುವ ಉದ್ದೇಶಕ್ಕೆ ನಿಯಮಾನುಸಾರವೇ ಸುಮಾರು 45 ಮರಗಳನ್ನು ಕಡಿದಿರುವುದಾಗಿ ಆಡಳಿತ ವರ್ಗ ಸಮರ್ಥಿಸಿಕೊಂಡಿದೆ. ಆದರೆ ಈ ನಿರ್ದಯಿ ಧೋರಣೆಯನ್ನು ಪರಿಸರ ಪ್ರೇಮಿಗಳಷ್ಟೇ ಅಲ್ಲದೆ ಮೈಸೂರಿಗರೆಲ್ಲರೂ ಖಂಡಿಸಿ, ತಮ್ಮದೇ ಆದ ರೀತಿಯಲ್ಲಿ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದಾರೆ. ಇದರ ನಡುವೆ ಆಡಳಿತ ವರ್ಗದಲ್ಲಿರುವ ಅಸ್ಪಷ್ಟ ಹಾಗೂ ಅಪರಿಪೂರ್ಣ ಮಾಹಿತಿ ಸಾಕಷ್ಟು ಅನುಮಾನಗಳನ್ನು ಮೂಡಿಸುತ್ತಿದೆ.

ಅಸಲಿಗೆ ನಗರ ಪಾಲಿಕೆ ಅಧಿಕಾರಿಗಳಿಗೆ ಹೈದರಾಲಿ ರಸ್ತೆಯ ಅಂತರ–ಅಗಲವೇ ತಿಳಿದಿಲ್ಲ. ಹೈದರಾಲಿ ರಸ್ತೆಯನ್ನು ಎಲ್ಲಿಯವರೆಗೆ ಗುರುತಿಸಲಾಗಿದೆ ಎಂದು ಯಾರೂ ಸ್ಪಷ್ಟವಾಗಿ ತಿಳಿಸುತ್ತಿಲ್ಲ. ಒಬ್ಬರು ಎಫ್‌ಟಿಎಸ್ ವೃತ್ತದಿಂದ ಎಸ್ಪಿ ಕಚೇರಿವರೆಗೆ ಹೈದರಾಲಿ ರಸ್ತೆ ಇದೆ ಎಂದರೆ, ಮತ್ತೊಬ್ಬರು ಯೋಜನಾ ವಿಭಾಗದ ಅಧಿಕಾರಿಗಳನ್ನು ಕೇಳಬೇಕು ಎನ್ನುತ್ತಾರೆ. ಇನ್ನೊಬ್ಬ ಅಧಿಕಾರಿ ಮುಡಾ ಕಡೆಗೆ ಬೊಟ್ಟು ಮಾಡುತ್ತಾರೆ. ರಸ್ತೆ ಬಗ್ಗೆ ಅಧಿಕಾರಿಗಳಲ್ಲೇ ಸ್ಪಷ್ಟತೆ ಇಲ್ಲ.

ರಸ್ತೆ ಅಭಿವೃದ್ಧಿಪಡಿಸುವುದಾದರೆ ಒಂದು ಕಡೆಯಿಂದ ಕಾಮಗಾರಿ ನಡೆಸಬೇಕು. ಹೀಗೆ ಮಾಡದೆ ಏಕಾಏಕಿ ಕರ್ನಾಟಕ ಪೊಲೀಸ್ ಅಕಾಡೆಮಿ(ಕೆಪಿಎ) ಭಾಗದ ಬೃಹತ್ ಮರಗಳಿಗೆ ಕೊಡಲಿ ಹಾಕಿದ್ದು ಏಕೆ?. ಇದರ ಹಿಂದೆ ಕಾಣದ ಪ್ರಭಾವಿ ಕೈಗಳಿವೆ. ಆ ಪ್ರಭಾವಿಗಳ ಅನುಕೂಲಕ್ಕಾಗಿ ಇಷ್ಟೆಲ್ಲಾ ಕಸರತ್ತು ನಡೆಸಿದ್ದಾರೆ. ಸ್ಥಳೀಯ ಜನಪ್ರತಿನಿಧಿಗಳಿಲ್ಲದ ವೇಳೆ ಪಾಲಿಕೆ ಅಧಿಕಾರಿಗಳೇ ದಿಢೀರ್ ನಿರ್ಧಾರ ಕೈಗೊಳ್ಳುತ್ತಿದ್ದಾರೆ. ನಗರದ ವಿವಿಧೆಡೆ ಇಂತಹ ಕೆಲಸಗಳಾಗುತ್ತಿವೆ. ಅಧಿಕಾರಿಗಳನ್ನು ಕೀಲಿ ಕೊಡುವ ಬೊಂಬೆಗಳಂತೆ ಬಳಸಿಕೊಳ್ಳಲಾಗುತ್ತಿದೆ. ಮರಗಳ ಮಾರಣಹೋಮದ ಹಿಂದಿರುವ ಸತ್ಯ ಒಂದಲ್ಲಾ ಒಂದು ದಿನ ಬಯಲಾಗುತ್ತದೆ ಎಂದು ಸಾರ್ವಜನಿಕರಲ್ಲಿ ಚರ್ಚೆಯಾಗುತ್ತಿದೆ.

ಹನನ ಮಾಡಿರುವ 40 ಮರಗಳ ಜಾಗದಲ್ಲಿ 400 ಗಿಡ ನೆಡಲು ಪಾಲಿಕೆ ನಿರ್ಧಾರ!

5 ಕೋಟಿ ರೂ. ಅಂದಾಜು ವೆಚ್ಚದಲ್ಲಿ 0.36 ಕಿ.ಮೀ. ರಸ್ತೆ ಅಗಲೀಕರಿಸುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ

ಮೈಸೂರು, ಏ.18(ಆರ್‌ಕೆ)– ಮೈಸೂರಿನ ಹೈದರ್ ಅಲಿ ರಸ್ತೆಯಲ್ಲಿದ್ದ ಸುಮಾರು 50 ವರ್ಷಗಳ 40 ಮರಗಳನ್ನು ಹನನ ಮಾಡಿ ಮೈಸೂರಿನ ನಜರ್‌ಬಾದ್‌ನ ಎಸ್ಪಿ ಕಚೇರಿ ವೃತ್ತದವರೆಗೆ ಈ ರಸ್ತೆ ಅಗಲೀಕರಣ ಕಾಮಗಾರಿಗೆ ಮೈಸೂರು ಮಹಾನಗರ ಪಾಲಿಕೆ ಈಗ ಮುಂದಾಗಿದೆ.

ಮೈಸೂರು ನಗರದ ಸಮಗ್ರ ಅಭಿವೃದ್ಧಿ ಯೋಜನೆ (Comprehensive Development Plan-CDP)ಯನ್ವಯ ಕಾಳಿಕಾಂಬ ದೇವಸ್ಥಾನದ ಜಂಕ್ಷನ್‌ನಿಂದ ಎಸ್ಪಿ ಕಚೇರಿ ಸರ್ಕಲ್‌ವರೆಗೆ 360 ಮೀ. (0.36 ಕಿ.ಮೀ.) ಉದ್ದದ ಪ್ರಸ್ತುತ 30 ಅಡಿ ಅಗಲದ ಹೈದರ್ ಅಲಿ ರಸ್ತೆಯನ್ನು 30 ಮೀ. (90 ಅಡಿ)ಗೆ ವಿಸ್ತರಿಸಿ ಅಭಿವೃದ್ಧಿಪಡಿಸಲು ಮೈಸೂರು ಮಹಾನಗರ ಪಾಲಿಕೆಯು ಕಾಮಗಾರಿಯನ್ನು ಕೈಗೊಂಡಿದೆ.

ಹಾಗಾಗಿ ರಸ್ತೆಯ ಇಕ್ಕೆಲಗಳಲ್ಲಿರುವ 40 ಮರಗಳನ್ನು ರಾತ್ರೋರಾತ್ರಿ ಕಡಿದುರುಳಿಸಿರುವ ಪಾಲಿಕೆ ಅಧಿಕಾರಿಗಳು, 40 ಮರಗಳ ಬದಲಿಗೆ 1:10 ಪ್ರಕಾರ 400 ಗಿಡಗಳನ್ನು ನೆಟ್ಟು ಬೆಳೆಸುವ ಉದ್ದೇಶಿಸಿದೆ. ಆದರೆ, 400 ಮರಗಳನ್ನು ಇದೊಂದೇ ರಸ್ತೆಯಲ್ಲಿ ಬೆಳೆಸಲು ಸಾಧ್ಯವೇ?

ಮೊಹಮದ್ ಸೇಠ್ ಬ್ಲಾಕ್ (ಹೈದರ್ ಅಲಿ ರಸ್ತೆ) ನೆಕ್ಸಸ್ ಮಾಲ್‌ನಿಂದ ವೆಂಕಟಲಿಂಗಯ್ಯ ಸರ್ಕಲ್ (ಎಸ್ಪಿ ಕಚೇರಿ ಸರ್ಕಲ್)ವರೆಗಿದ್ದ 40 ಮರಗಳನ್ನು ಕಡಿದು ಉರುಳಿಸಲಾಗಿದೆ. ಸಿಡಿಪಿ ಪ್ರಕಾರ ಈ ಹೈದರ್ ಅಲಿ ರಸ್ತೆಯು 30 ಮೀ. (90 ಅಡಿ) ಅಗಲವಿರಬೇಕು. ಆದರೆ ಪ್ರಸ್ತುತ



ಕೇವಲ 30 ಅಡಿ (10 ಮೀ.) ಮಾತ್ರ ಇರುವುದರಿಂದ ಸುಗಮ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂಬುದು ಮೈಸೂರು ಮಹಾನಗರ ಪಾಲಿಕೆ ವಾದವಾಗಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಮೈಸೂರು ಮಹಾನಗರ ಪಾಲಿಕೆ ಕಾರ್ಯಪಾಲಕ ಇಂಜಿನಿಯರ್ ಮಧುಸೂದನ್, ಲಷ್ಕರ್ ಮೊಹಲ್ಲಾದ ಫೈವ್ ಲೈಟ್ ಸರ್ಕಲ್‌ನಿಂದ ಕಾಳಿಕಾಂಬ ದೇವಸ್ಥಾನದ ಜಂಕ್ಷನ್‌ವರೆಗೆ ಮತ್ತು ಎಸ್ಪಿ ಆಫೀಸ್ ಸರ್ಕಲ್‌ನಿಂದ ಗೋಪಾಲಗೌಡ ಸ್ಮಾರಕ ಆಸ್ಪತ್ರೆ ಸರ್ಕಲ್‌ವರೆಗೆ ಈ ರಸ್ತೆ ಸುಮಾರು 100 ಅಡಿ ಅಗಲವಿದೆ. ಆದರೆ, ಕಾಳಿಕಾಂಬ ದೇವಸ್ಥಾನದಿಂದ ಎಸ್ಪಿ ಕಚೇರಿ ಸರ್ಕಲ್‌ವರೆಗೆ ಮಾತ್ರ ಕೇವಲ 30 ಅಡಿ ಅಗಲವಿದ್ದು, ಸಿಡಿಪಿಯನ್ವಯ ಈ ರಸ್ತೆಯನ್ನು 30 ಮೀ. ಅಗಲಕ್ಕೆ ವಿಸ್ತರಿಸಬೇಕಾಗಿದೆ ಎಂದರು.

ರಸ್ತೆ ಅಗಲೀಕರಣ ಕಾಮಗಾರಿಗಾಗಿ ಎನ್‌ಆರ್ ಶಾಸಕರ ವಿಶೇಷ ರಾಜ್ಯ ಹಣಕಾಸು ಆಯೋಗ (ಎಸ್‌ಎಸ್‌ಎಫ್‌ಸಿ)ದ 5 ಕೋಟಿ ರೂ. ಅನುದಾನದಲ್ಲಿ ಹೈದರ್ ಅಲಿ ರಸ್ತೆ ಅಗಲೀಕರಣ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ 2024ರ ಡಿಸೆಂಬರ್ 3ರಂದು ದೊರೆತಿದ್ದು, ಟೆಂಡರ್ ಮೂಲಕ ಶೇ. 18 ಜಿಎಸ್‌ಟಿ ಮೊತ್ತ ಸೇರಿ 4,94,67,181 ರೂ.ಗಳಿಗೆ ಮೈಸೂರಿನ ಆಲನಹಳ್ಳಿಯ ಸಿ. ವೆಂಕಟಪ್ಪ ಎಂಬ ಗುತ್ತಿಗೆದಾರನಿಗೆ ಕಾಮಗಾರಿ ವಹಿಸಲಾಗಿದ್ದು, 2024ರ ಡಿಸೆಂಬರ್ 21ರಂದು ಕಾರ್ಯಾದೇಶ (ವರ್ಕ್ ಆರ್ಡರ್)ವನ್ನೂ ನೀಡಲಾಗಿದೆ ಎಂದು ಮಧುಸೂದನ್ ಹೇಳಿದ್ದಾರೆ.

6 ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರನಿಗೆ ತಿಳಿಸಲಾಗಿದೆ. ಕಾಮಗಾರಿ ಆರಂಭಿಸಲು ಅಗತ್ಯ ಜಾಗವನ್ನು ಗುತ್ತಿಗೆದಾರರಿಗೆ ಬಿಟ್ಟುಕೊಡಬೇಕಾಗಿರುವುದರಿಂದ ಅರಣ್ಯ ಇಲಾಖೆಗೆ 2025ರ ಮಾರ್ಚ್ 20ರಂದು ಮನವಿ ಸಲ್ಲಿಸಿ ಹೈದರ್ ಅಲಿ ರಸ್ತೆಯಲ್ಲಿ ನೆಕ್ಸಸ್ ಮಾಲ್ ಜಂಕ್ಷನ್‌ನಿಂದ ಎಸ್ಪಿ ಕಚೇರಿ ಸರ್ಕಲ್‌ವರೆಗೆ ಇಕ್ಕೆಲಗಳಲ್ಲಿರುವ 40 ಮರಗಳನ್ನು ತೆರವುಗೊಳಿಸಲು ಅನುಮತಿ ಕೋರಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

ಈ 40 ಮರಗಳ ಬದಲಿಗೆ ಅದರ 10 ಪಟ್ಟು ಅಂದರೆ 400 ಗಿಡಗಳನ್ನು ನೆಡಲು ಗಿಡವೊಂದಕ್ಕೆ 417.27 ರೂ.ನಂತೆ 1,64,508 ರೂ., ಮರಗಳ ಮೌಲ್ಯಮಾಪನ ಮತ್ತು ಇತರ ತೆರಿಗೆ, 2,25,000 ರೂ, ಮೌಲ್ಯದ ಮೇಲೆ ಶೇ. 12ರಷ್ಟು ಅಭಿವೃದ್ಧಿ ಶುಲ್ಕ, ಜಿಎಸ್‌ಟಿ ಶೇ. 18ರಂತೆ 27,237, ಆದಾಯ ತೆರಿಗೆ ಶೇ. 2.5, 6,300 ರೂ.ಗಳನ್ನು ಡಿಡಿ ಮೂಲಕ ಪಾವತಿಸಿ 2025ರ ಮಾರ್ಚ್ 25ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಮರಗಳನ್ನು ತೆರವುಗೊಳಿಸಲು ಅನುಮತಿ ಪಡೆದುಕೊಂಡಿದ್ದೇವೆ ಎಂದು ಮಧುಸೂದನ್ ತಿಳಿಸಿದ್ದಾರೆ.

40 ಮರ ಕಡಿದ ಜಾಗದಲ್ಲಿ 400 ಮರಗಳ ನೆಡಲಾಗದು!

ಮೈಸೂರು, ಏ.18(ಎಂಟಿವೈ)– ಕರ್ನಾಟಕ ಅರಣ್ಯ ನಿಯಮದಂತೆ 3 ಮೀಟರ್ ಅಂತರಕ್ಕೆ ಒಂದು ಗಿಡದಂತೆ ಒಂದು ಕಿ.ಮಿ ವ್ಯಾಪ್ತಿಯಲ್ಲಿ 350 ಗಿಡ ನೆಡ ಬಹುದಷ್ಟೆ ಎಂದು ಡಿಸಿಎಫ್ ಡಾ.ಕೆ. ಎನ್.ಬಸವರಾಜ್ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಹೈದರ್ ಅಲಿ ರಸ್ತೆಯ ಅಗಲೀಕರಣಕ್ಕಾಗಿ ಎಸ್ಪಿ ಕಚೇರಿ ವೃತ್ತದಿಂದ ಕಾಳಿಕಾಂಬ ವೃತ್ತದವರೆಗೂ 40 ಮರ ಕಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ರಸ್ತೆಯಲ್ಲಿ ಮೈಸೂರು ಮಹಾನಗರ ಪಾಲಿಕೆ 400 ಗಿಡ ನೆಡುವುದಾಗಿ ತಿಳಿಸಿದೆ. ಪಾಲಿಕೆಯ ಈ ಘೋಷಣೆಯೂ ಪರಿಸರ ಪ್ರೇಮಿಗಳ ಟೀಕೆಗೆ ಗುರಿಯಾಗಿದೆ. ಹಾಗಾಗಿ ಎಷ್ಟು ಅಂತರದಲ್ಲಿ ಗಿಡ ನೆಡಬಹುದು ಎಂಬ ನೈಜ ಮಾಹಿತಿಯನ್ನು 'ಮೈಸೂರು ಮಿತ್ರ' ಅರಣ್ಯಾಧಿಕಾರಿಗಳಿಂದಲೇ ಪಡೆದಿದೆ.


ಡಾ. ಬಸವರಾಜ್

ಈ ಕುರಿತು ಡಿಸಿಎಫ್ ಡಾ.ಕೆ.ಎನ್. ಬಸವರಾಜ ಮಾತನಾಡಿ, ಅರಣ್ಯ ನಿಯಮದಂತೆ ಅನುಮತಿ ಪಡೆದು ಮರ ಕಡಿಯುವ ವೇಳೆ ಅರಣ್ಯ ಇಲಾಖೆಗೆ ಅಷ್ಟೇ ಸಂಖ್ಯೆಯ ಮರ ಬೆಳೆಸಲು ಶುಲ್ಕ ಪಾವತಿಸಬೇಕಾಗಿದೆ. ಹೈದರ ಅಲಿ ರಸ್ತೆಯಲ್ಲಿ 40 ಮರ ಕಡಿದಿದ್ದಕ್ಕೆ 400 ಗಿಡ ನೆಡುವ ಸಂಬಂಧ ಶುಲ್ಕ ಪಾವತಿಸಲಾಗಿದೆ. ಇಲಾಖೆ, ನೆಟ್ಟ 400 ಗಿಡಗಳಲ್ಲಿ ಮುಂದಿನ 10 ವರ್ಷದ ಅವಧಿಯಲ್ಲಿ ಕನಿಷ್ಠ 40 ಆದರೂ ಮರವಾಗಲಿ ಎಂಬುದು ನಮ್ಮ ಆಶಯವಾಗಿದೆ. ಸಂಗ್ರಹಿಸಲಾದ ಶುಲ್ಕದಲ್ಲಿ ಎಲ್ಲಿ ಮರ ಕಡಿಯಲಾಗಿರುತ್ತದೆಯೋ ಆ ಸ್ಥಳದಲ್ಲಿ ಗಿಡ ನೆಡಲು ಮೊದಲ ಆದ್ಯತೆ ನೀಡಲಾಗುತ್ತದೆ. ಉಳಿದ ಗಿಡಗಳನ್ನು ಬೇರೆ ಬೇರೆ ಸ್ಥಳದಲ್ಲಿ ನೆಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಇಲಾಖೆಯ ನಿಯಮಾನುಸಾರ ಒಂದು ಗಿಡಕ್ಕೂ ಮತ್ತೊಂದು ಗಿಡಕ್ಕೂ 3 ಮೀಟರ್ ಅಂತರ ಇರಬೇಕು. ಒಂದು ಕಿ.ಮೀ. ವ್ಯಾಪ್ತಿಯಲ್ಲಿ 350 ಗಿಡಗಳನ್ನು ಮಾತ್ರ ನೆಡಬಹುದು ಎಂದು ತಿಳಿಸಿದರು.

ಮೈಸೂರು ಮಿತ್ರ ಶನಿವಾರ 19 ಏಪ್ರಿಲ್ 2025

ಮರಗಳ ಹನನ ಖಂಡಿಸಿ ಮೌನ ಸಂದೇಶ



ಮೈಸೂರಿನ ಹೈದರಾಲಿ ರಸ್ತೆಯಲ್ಲಿ 40 ಮರಗಳ ಕಡಿದಿರುವುದನ್ನು ಖಂಡಿಸಿ ಶುಕ್ರವಾರ ಸಂಜೆ ನಡೆದ ಕ್ಯಾಂಡಲ್ ಲೈಟ್ ಮೌನ ಪ್ರತಿಭಟನೆಯಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ನಗರ ಪಾಲಿಕೆ ಮಾಜಿ ಸದಸ್ಯರಾದ ಮಾ ವಿ ರಾಮ್‌ಪ್ರಸಾದ್, ಎ.ಯು. ಸುಬ್ಬಯ್ಯ ಸೇರಿದಂತೆ ಬಿಜೆಪಿ ಮುಖಂಡರು, ಕಾರ್ಯಕರ್ತರು, ವಿವಿಧ ಪರಿಸರ ಸಂಘಟನೆ ಮುಖಂಡರು, ಪರಸರ ಪ್ರೇಮಿಗಳು ಭಾಗವಹಿಸಿದ್ದರು.


ಗುತ್ತಿಗೆದಾರರಿಗೆ 2 ವರ್ಷದ ಬಾಕಿ ಹಣ ಬಿಡುಗಡೆ

- ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಮಾಹಿತಿ
- ಯಾವುದೇ ತಾರತಮ್ಯ ಇಲ್ಲದೆ ಪಾರದರ್ಶಕ ರೀತಿ ಹಂಚಿಕೆ

ಬೆಂಗಳೂರು, ಏ. 18(ಕೆಎಂಶಿ)– ಗುತ್ತಿಗೆದಾರರಿಗೆ ಕಳೆದ ಎರಡು ಆರ್ಥಿಕ ವರ್ಷದ 1,566 ಕಾಮಗಾರಿಗಳ ಸಂಪೂರ್ಣ ಬಾಕಿ ಹಣ ಬಿಡುಗಡೆ ಮಾಡಲಾಗಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಇಂದಿಲ್ಲಿ ತಿಳಿಸಿದ್ದಾರೆ.

ಗುತ್ತಿಗೆದಾರರಿಗೆ ಯಾವುದೇ ತಾರತಮ್ಯ ಹಾಗೂ ಹಸ್ತಕ್ಷೇಪ ಇಲ್ಲದೆ ಪಾರದರ್ಶಕವಾಗಿ ಹಣ ಬಿಡುಗಡೆ ಮಾಡಲಾಗಿದೆ, ಗುತ್ತಿಗೆದಾರರಲ್ಲಿ ಉಂಟಾಗಿದ್ದ ಗೊಂದಲಗಳನ್ನು ನಿನ್ನೆ ನಡೆದ ಸಭೆಯಲ್ಲಿ ಪರಿಹರಿಸಲಾಗಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಸಚಿವರು, 2023–24ನೇ ಆರ್ಥಿಕ ವರ್ಷದಲ್ಲಿ ಬಿಜೆಪಿ ಸರ್ಕಾರ ಪ್ರಾರಂಭಿಸಿದ್ದ, 12,693 ಕೋಟಿ ರೂ. ಮೌಲ್ಯದ 15,549 ಕಾಮಗಾರಿಗಳನ್ನು ಮುಂದುವರೆಸಿ, ಹಳೆಯ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು.

ತೊಂದರೆಯಲ್ಲಿದ್ದ 2000 ಗುತ್ತಿಗೆದಾರರ ಪೈಕಿ 639 ಮಂದಿಯ ಬಾಕಿ ಸಂಪೂರ್ಣ ಹಣ ಬಿಡುಗಡೆ ಮಾಡಲಾಗಿದ್ದು, ಉಳಿದ 1,361 ಗುತ್ತಿಗೆದಾರರಿಗೆ ಭಾಗಶಃ ಹಣ ಬಿಡುಗಡೆ ಮಾಡಲಾಗಿದೆ.



2024–25ರ ಆರ್ಥಿಕ ಸಾಲಿನಲ್ಲಿ 9,974.34 ಕೋಟಿ ರೂ. ಮೌಲ್ಯದ 13,913 ಸ್ಪಿಲ್ ಓವರ್ ಕಾಮಗಾರಿಗಳು ಚಾಲ್ತಿಯಲ್ಲಿದ್ದು, ಕಾಮಗಾರಿಗಳ ಅಗಾಧತೆ ಹಾಗೂ ಗುತ್ತಿಗೆದಾರರ ಹಿತಾಸಕ್ತಿ ಕಾಪಾಡಲು ಮುಖ್ಯಮಂತ್ರಿಗಳು ಹೆಚ್ಚುವರಿ ಅನುದಾನ ಮಂಜೂರು ಮಾಡಿದರು.

ಫೆಬ್ರವರಿ 2025ಕ್ಕೆ ಬಾಕಿಯಿದ್ದ ಬಿಲ್ ಹಣ 3,352.06 ಕೋಟಿ ರೂ. ಒಟ್ಟಾರೆ ಕಾಮಗಾರಿ 3,176 ಇದರಲ್ಲಿ 267 ಗುತ್ತಿಗೆದಾರರ ಬಾಕಿ ಸಂಪೂರ್ಣ ಹಣ ಡಿಸೆಂಬರ್‌ನಲ್ಲಿ ಬಿಡುಗಡೆ ಮಾಡಲಾಯಿತು.

ಲಭ್ಯ ಅನುದಾನದಲ್ಲಿ 2,909 ಕಾಮಗಾರಿಗಳಿಗೆ ಭಾಗಶಃ ಹಣ ಬಿಡುಗಡೆ ಮಾಡಿದ್ದು, ಒಟ್ಟಾರೆ 3,176 ಕಾಮಗಾರಿಗಳಿಗೆ ಪಾರದರ್ಶಕವಾಗಿ ಹಣ ಬಿಡುಗಡೆ ಮಾಡಲಾಗಿದೆ. ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರು ಹೆಚ್ಚಾಗಿ ಕಾಮಗಾರಿಗಳನ್ನು ಕೈಗೊಳ್ಳುವಂತಹ ಕೆರೆಗಳ ಅಧುನೀಕರಣ ಲೆಕ್ಕ ಶೀರ್ಷಿಕೆಯಡಿ ಆಯವ್ಯಯದಲ್ಲಿ ಹಂಚಿಕೆಯಾದ ಹಣ 100 ಕೋಟಿ ರೂ. ಹೆಚ್ಚುವರಿಯಾಗಿ 210 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

ಅಣೆಕಟ್ಟು ಪಿಕ್‌ಅಪ್ ಲೆಕ್ಕಶೀರ್ಷಿಕೆಯಡಿ ಆಯವ್ಯಯದಲ್ಲಿ ಹಂಚಿಕೆಯಾದ ಹಣ 120 ಕೋಟಿ ರೂ. ಹೆಚ್ಚುವರಿಯಾಗಿ 335 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಏತನೀರಾವರಿ ಲೆಕ್ಕಶೀರ್ಷಿಕೆಯಡಿ ಆಯವ್ಯಯದಲ್ಲಿ 650 ಕೋಟಿ ರೂ. ಹಂಚಿಕೆಯಾಗಿದ್ದು, ಹೆಚ್ಚುವರಿಯಾಗಿ 252.50 ಕೋಟಿ ರೂ. ಬಿಡುಗಡೆಯಾಗಿದೆ.

ಪಶ್ಚಿಮವಾಹಿನಿ ಲೆಕ್ಕಶೀರ್ಷಿಕೆಯಡಿ ಆಯವ್ಯಯದಲ್ಲಿ 100 ಕೋಟಿ ರೂ. ಹಂಚಿಕೆಯಾಗಿದ್ದು, ಹೆಚ್ಚುವರಿಯಾಗಿ 100 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

ಸಣ್ಣ ಹಾಗೂ ಮಧ್ಯಮ ಗುತ್ತಿಗೆದಾರರು ಹೆಚ್ಚಾಗಿರುವ ಲೆಕ್ಕಶೀರ್ಷಿಕೆಗಳಿಗೆ ಹೆಚ್ಚುವರಿಯಾಗಿ ಲಭ್ಯವಾದ ಹಣದಲ್ಲಿ ಶೇಕಡಾ 55ಕ್ಕೂ ಹೆಚ್ಚು ಮೀಸಲಿಡಲಾಗಿದೆ ಎಂದರು. ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿವೆ. ಅಂತಹ ಘಟನೆಗಳಿದ್ದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ದೂರು ಸಲ್ಲಿಸುವಂತೆಯೂ ತಿಳಿಸಲಾಗಿದೆ.

ಗುತ್ತಿಗೆದಾರರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಭೆಯಲ್ಲಿ ಎಲ್ಲಾ ಗೊಂದಲಗಳನ್ನು ನಿವಾರಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಶೀಘ್ರ ಪೂರ್ಣಗೊಳಿಸುವ ಮನವಿ ಪರಿಶೀಲಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಲಾಗಿದೆ.

ಇಲಾಖೆಯಲ್ಲಿ ಯಾರ ಹಸ್ತಕ್ಷೇಪವೂ ಇಲ್ಲ, ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರ ಹಿತರಕ್ಷಣೆ ಜೊತೆಗೆ ಕಾಮಗಾರಿಗಳು ಸುಗಮವಾಗಿ ಮುಂದುವರೆಯುವ ಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂದರು.

ಮರಗಳ ಅವಶೇಷಕ್ಕೆ ಪೂಜೆ



ಮೈಸೂರು, ಏ.18(ಎಂಕೆ)– ಮೈಸೂರಿನ ಹೈದರಾಲಿ ರಸ್ತೆಯ ಕಾಳಿಕಾಂಬ ದೇವಸ್ಥಾನದಿಂದ ಎಸ್‌ಪಿ ಕಚೇರಿ ವೃತ್ತದವರೆಗೆ ಕಡಿದಿರುವ 40 ಮರಗಳ ಬುಡಕ್ಕೆ ಕಾನೂ ವಿದ್ಯಾರ್ಥಿ ವಿಶಾಲ್, ಪೂಜೆ ಸಲ್ಲಿಸಿ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ಮರಗಳ ಬುಡಕ್ಕೆ ಬ್ಯಾಂಡೇಜ್ ಸುತ್ತಿ, ಬಿಳಿ ಬಟ್ಟೆ ಹೊದಿಸಿ, ಅರಿಸಿನ–ಕುಂಕುಮ ಅಚ್ಚಿ, ಹೂ ಇಟ್ಟು ಪೂಜೆ ಸಲ್ಲಿಸಿರುವ ವಿಶಾಲ್, ಈಗಾಗಲೇ ಕಡಿದಿರುವ ಮರಗಳಿಗೆ ಪುನರ್ಜೀವನ ಸಾಧ್ಯವಿಲ್ಲ. ಬದಲಿಗೆ ಗಿಡಗಳನ್ನು ನೆಟ್ಟು ಬೆಳೆಸಬೇಕು. ಇದೇ ರೀತಿ ಮೈಸೂರಿನಲ್ಲಿ ಮರಗಳನ್ನು ಕಡಿಯುತ್ತಿದ್ದರೆ, ವಾತಾವರಣದಲ್ಲಿ ಉಷ್ಣಾಂಶ ಇನ್ನಷ್ಟು ಹೆಚ್ಚಾಗಲಿದೆ.

ಮೈಸೂರಿನಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳು ಸಾಕಷ್ಟು ಇದ್ದು, ನಗರ ಪಾಲಿಕೆ ಮರಗಳನ್ನು ಕಡಿಯುವುದನ್ನು ಬಿಟ್ಟು, ಇತರೆ ಅಭಿವೃದ್ಧಿ ಕೆಲಸಗಳತ್ತ ಗಮನ ಹರಿಸಲಿ. ಹೈದರಾಲಿ ರಸ್ತೆ ಅಗಲೀಕರಣದ ಅವಶ್ಯಕತೆಯೇ ಇಲ್ಲದಿದ್ದರೂ ಇಂತಹ ಹೀನ ಕೃತ್ಯ ಎಸಗಿರುವುದು ಅತ್ಯಂತ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೂರನೇ ಪುಟದಿಂದ

ಮರಗಳ ಹನನ ಅನ್ಯಾಯ...

ಬೆಳಗಿದರು. ಕೆಲ ಕಾಲ ರಸ್ತೆಯಲ್ಲೇ ಕುಳಿತು ಮೌನವಾಗಿ ಪ್ರತಿಭಟಿಸಿದರು. ನಂತರ ಎಸ್‌ಪಿ ಕಚೇರಿ ಮುಂಭಾಗದ ವೃತ್ತದವರೆಗೂ ಮೆರವಣಿಗೆ ನಡೆಸಿದರು.

ಹಾಗೆಯೇ 'ಸ್ಟಾಪ್ ಟ್ರೀ ಕಟ್ಟಿಂಗ್', 'ನಮ್ಮ ಮಕ್ಕಳು ಮೊಮ್ಮಕ್ಕಳಿಗೆ ಶುದ್ಧ ಗಾಳಿ, ನೀರು ಆಹಾರ ನಮ್ಮ ಜವಾಬ್ದಾರಿ ಅಲ್ಲವೆ', 'ಕ್ಲೀನ್ ಸಿಟಿ ಗ್ರೀನ್ ಸಿಟಿ' 'ಭೂಮಿ ಇರುವುದೊಂದೇ ಉಳಿಸೋಣ ಬನ್ನಿ ನಾವೆಂದೇ', 'ಪರಿಸರಕ್ಕೆ ಹಾನಿ ಮಾಡುವ ಯೋಜನೆಗಳು ಬೇಡ ಬೇಡ', 'ಓ ಮನುಜ ನೀನಿಲ್ಲದೆ ನಾನಿರಬಲ್ಲೆ ಆದರೆ ನಾನಿಲ್ಲದೆ ನೀ ಇರಲಾರೆ(ಮರ ಹೇಳಿದಂತೆ)' ಎಂಬಿತ್ಯಾದಿ ಫಲಕಗಳನ್ನು ಪ್ರದರ್ಶಿಸಿ, ಮನುಷ್ಯನ ಉಳಿವಿಗೆ ಗಿಡ–ಮರಗಳು ಎಷ್ಟು ಮುಖ್ಯವೆಂಬುದನ್ನು ಮನವರಿಕೆ ಮಾಡಿಕೊಟ್ಟರು. ಕಡೆಯಲ್ಲಿ ಎಲ್ಲರೂ ಕೈಮೇಲೆತ್ತಿ ಹಸಿರನ್ನು ಉಳಿಸಲು ಪಣ ತೊಡಿ, ನಮಗಾಗಿ ಪರಿಸರ, ಪರಿಸರಕ್ಕಾಗಿ ನಾವು ಎಂಬ ಘೋಷಣೆಯೊಂದಿಗೆ ಹಸಿರು ಮೈಸೂರು ರಕ್ಷಣೆಗೆ ಪಣತೊಟ್ಟರು.

ಮೈಸೂರು ಗ್ರಾಹಕರ ಪರಿಷತ್, ಪರಿಸರ ಬಳಗ, ಲೆಟ್ಸ್ ಡೂ ಇಟ್, ಟೀಂ ಮೈಸೂರ್, ಯುವ ಬ್ರಿಗೇಡ್, ಯೂತ್ ಫಾರ್ ಸೇವಾ, ಆರ್ಯವೈಶ್ಯ ಅಭಿವೃದ್ಧಿ ಸಮಿತಿ, ಕನ್ನಡದ್ ಕನ್ನಡಿ, ಮೈಸೂರು ಹೃದಯವಂತ ಕನ್ನಡಿಗರ ಬಳಗ, ಪ್ರಕೃತಿ ವಕೀಲರ ತಂಡ, ರಾಷ್ಟ್ರೀಯ ಭ್ರಷ್ಟಾಚಾರ ನಿರ್ಮೂಲನೆ ಹಾಗೂ ಕಾರ್ಯಾಚರಣೆ ಸಮಿತಿ, ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘ, ಮೈಸೂರು ಸೈಕ್ಲಿಂಗ್ ಕ್ಲಬ್, ಮೈಸೂರು ಅಥ್ಲೆಟಿಕ್ ಕ್ಲಬ್, ಹ್ಯುಮಾನಿಟೀಸ್ ರಿಲೀಫ್ ಸೊಸೈಟಿ, ಪ್ರಗತಿಪರ ಹೋರಾಟಗಾರರು, ರಾಜ್ಯ ರೈತ ಸಂಘ ಸೇರಿದಂತೆ ಹಲವು ಪರಿಸರ ಸಂಘಟನೆಗಳ ಮುಖಂಡರು, ಸಾವಿರಾರು ಪರಿಸರ ಪ್ರೇಮಿಗಳು ಮಾತ್ರವಲ್ಲದೆ ವಿವಿಧ ರಾಜಕೀಯ ಪಕ್ಷದ ಮುಖಂಡರು, ಕಾರ್ಯಕರ್ತರು ಪ್ರತಿಭಟನೆಗೆ ಬೆಂಬಲ ನೀಡಿದರು.

ಮಕ್ಕಳು, ವಿದ್ಯಾರ್ಥಿಗಳು, ಮಹಿಳೆಯರು ಭಾಗಿ: ಮೈಸೂರಿನಲ್ಲಿ ಮರಗಳ ಉಳಿವಿಗಾಗಿ ನಡೆದ ಮೌನ ಪ್ರತಿಭಟನೆಯಲ್ಲಿ ಮಕ್ಕಳು, ಕಾಲೇಜು ವಿದ್ಯಾರ್ಥಿಗಳು, ಮಹಿಳೆಯರು ಹೀಗೆ ಜಾತಿ, ಧರ್ಮದ ಭೇದವಿಲ್ಲದೆ ಒಂದೇ ಕಡೆ ಸೇರಿದರು. ತಲೆಗೆ ಕಪ್ಪು ಪಟ್ಟಿ ಕಟ್ಟಿ, ಮರಗಳ ಹನನ ನಿಲ್ಲಿಸಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಗುವೊಂದು ಹಿಡಿದಿದ್ದ 'ಸ್ಟಾಪ್ ಟ್ರೀ ಕಟ್ಟಿಂಗ್' (ಮರ ಕಡಿಯುವುದನ್ನು ನಿಲ್ಲಿಸಿ) ಎಂಬ ಬರಹವುಳ್ಳ ಫಲಕವು 'ಪ್ರಜ್ಞಾವಂತ' ಸಮಾಜವನ್ನು ಅಣಕಿಸುವಂತಿತ್ತು.



ವಿಶೇಷಚೇತನರಿಂದ ಮರಗಳನ್ನು ಕಡಿಯದಂತೆ ಮನವಿ

ಪುಟಾಣಿ ಅನಯ ಸೇರಿದಂತೆ ಕೆಲ ಮಕ್ಕಳು, ಈ ರೀತಿ ಮರಗಳನ್ನು ಕಡಿದರೆ, ಭವಿಷ್ಯದಲ್ಲಿ ನಮಗೆ ಆಕ್ಸಿಜನ್ ಇಲ್ಲದಂತಾಗಿ ಎಲ್ಲರೂ ಸಾಯಬೇಕಾಗುತ್ತದೆ. ದಯವಿಟ್ಟು ಮರಗಳನ್ನು ಕಡಿಯುವ ಮುನ್ನ ಯೋಚನೆ ಮಾಡಿ, ನಾವು–ನೀವೆಲ್ಲರೂ ಜೀವಂತವಾಗಿ ಉಳಿಯಬೇಕಾದರೆ ಮರಗಳನ್ನು ಕಡಿಯಬೇಡಿ. ನಮ್ಮ ಭವಿಷ್ಯವನ್ನು ಕಾಪಾಡಿ ಎಂದು ಮರಗಳ ಮೇಲಿನ ಪ್ರೀತಿಯನ್ನು ಅನಾವರಣಗೊಳಿಸಿದರು.

ಸಂಸದ, ಶಾಸಕರ ಸಾಥ್: ಕ್ಯಾಂಡಲ್ ಲೈಟ್ ಪ್ರತಿಭಟನೆಯಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಶಾಸಕ ಟಿ.ಎಸ್.ಶ್ರೀವತ್ಸ ಭಾಗವಹಿಸಿ, ಪರಿಸರ ಸಂರಕ್ಷಣೆಯ ಹೋರಾಟಕ್ಕೆ ನಿಂತಿರುವ ಪರಿಸರ ಪ್ರೇಮಿಗಳೊಂದಿಗೆ ಜೊತೆಯಾದರು. ಕ್ಯಾಂಡಲ್ ಲೈಟ್ ಬೆಳಗಿಸಿ, ಮರಗಳ ಅವಶೇಷಗಳಿಗೆ ಶ್ರದ್ಧಾಂಜಲಿ ಸಲ್ಲಿಸಿ, ಮೈಸೂರಿನ ಸಾಂಸ್ಕೃತಿಕ ಪರಂಪರೆ ಅಡಗಿರುವುದೇ ಹಸಿರಾದ ಮರಗಳಲ್ಲಿ. ಹಾಗಾಗಿ ಮೈಸೂರು ಸದಾ ಹಚ್ಚ ಹಸಿರಿನಿಂದ ಕೂಡಿರಬೇಕು ಎಂದರು.

ಶ್ರೀವತ್ಸ ಮೆರವಣಿಗೆಗೆ ಆಕ್ರೋಶ...

ವಿವಿಧ ಪರಿಸರ ಸಂಘಟನೆಗಳು ಕರೆ ನೀಡಿದ್ದ ಮರಗಳಿಗೆ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯಕ್ರಮಕ್ಕೆ ಶಾಸಕ ಶ್ರೀವತ್ಸ ಆಗಮಿಸಿದರು. ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿ, ಈ ಹೋರಾಟಕ್ಕೆ ರಾಜಕೀಯ ಲೇಪ ಇಲ್ಲ. ಎಲ್ಲರೂ ಸರ್ಕಾರದ ಕ್ರಮ ಖಂಡಿಸಲು ಸೇರಿದ್ದೇವೆ. ಮರಗಳ ಹನನ ಮಾಡಿದವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು. ಈ ವೇಳೆ ಅಲ್ಲಿದ್ದವರು ಈಗ ಹೇಳಿಕೆ ನೀಡಬೇಡಿ, ಮೌನ ಪ್ರತಿಭಟನೆ ಮುಗಿದ ಬಳಿಕ ಮಾತನಾಡಿ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಯಾಗಿ ಶಾಸಕರೊಂದಿಗೆ ಇದ್ದ ಕೆಲ ಮುಖಂಡರು, ನೀವು ಹೀಗೆ ಮಾತನಾಡುವುದು ಸರಿಯಲ್ಲ ಎಂದರು. ಈ ವೇಳೆ ವಾದ–ಪ್ರತಿವಾದದಿಂದ ಗದ್ದಲವೇರ್ಪಟಿತು. ವಾತಾವರಣ ಸ್ವಲ್ಪ ತಿಳಿಯಾದ ಬಳಿಕ ಕ್ಯಾಂಡಲ್ ಹಿಡಿದ ಶಾಸಕ ಶ್ರೀವತ್ಸ ಹಾಗೂ ಅವರೊಂದಿಗೆ ಇದ್ದ ಮುಖಂಡರು ಘೋಷಣೆಯೊಂದಿಗೆ ಮೆರವಣಿಗೆಗೆ ಮುಂದಾದರು. ಈ ವೇಳೆ ಪರಿಸರ ಪ್ರೇಮಿಗಳು ಶಾಸಕರ ನಡೆಗೆ ಆಕ್ರೋಶ ವ್ಯಕ್ತಪಡಿಸಿದರು. ಇಲ್ಲಿ ರಾಜಕೀಯ ಬೆರೆಸಬೇಡಿ. ಮೌನ ಪ್ರತಿಭಟನೆ ಎಂದು ನಿರ್ಧರಿಸಿದ ಬಳಿಕ ಆ ನಿಯಮಕ್ಕೆ ಬದ್ಧರಾಗಿರಬೇಕು. ಇಲ್ಲಿ ಎಲ್ಲರೂ ಒಂದೇ ಭಾವನೆಯಿಂದ ಸೇರಿದ್ದೇವೆ. ಜನರಿಂದ ನೀವು, ನಿಮ್ಮಿಂದ ನಾವಲ್ಲ ಎಂದು ವಾಗ್ದಾಳಿ ನಡೆಸಿದರು.

ಪ್ರಿಯಕರನಿಂದ ಪತ್ನಿಯೇ ಪತಿ ಹತ್ಯೆಗೆ ಮುಹೂರ್ತ

ಮೈಸೂರು, ಏ.18– ಅನಾರೋಗ್ಯದಿಂದ ಸಾವನ್ನಪ್ಪಿರಬಹುದೆಂದು ವ್ಯಕ್ತಿಯ ಅಂತ್ಯಕ್ರಿಯೆಗೆ ಮುಂದಾದಾಗ ಆತ ಕೊಲೆಯಾಗಿರುವ ವಿಚಾರ ಬಯಲಾಗಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ನಗರದ ಕೆ.ಆರ್.ಪೊಲೀಸ್ ಠಾಣೆ ವ್ಯಾಪ್ತಿಯ ಕಾಕರವಾಡಿ ನಿವಾಸಿ ಮಹಮದ್ ಷಫಿ ಹತ್ಯೆಯಾಗಿದ್ದು, ಈ ಸಂಬಂಧ ಈತನ ಪತ್ನಿ ಶಬ್ರೀನ್ ತಾಜ್ ಹಾಗೂ ಈಕೆಯ ಪ್ರಿಯಕರ ಅನ್ವರ್ ಪಾಷಾನನ್ನು ಪೊಲೀಸರು ಬಂಧಿಸಿದ್ದಾರೆ.

ರೇಡಿಯೇಟರ್ ಕೆಲಸ ಮಾಡಿಕೊಂಡಿದ್ದ ಮಹಮದ್ ಷಫಿ ಹಾಗೂ ಶಬ್ರೀನ್ ತಾಜ್‌ಗೆ ಮದುವೆಯಾಗಿ ಸುಮಾರು 16 ವರ್ಷಗಳಾಗಿದ್ದು, ದಂಪತಿಗೆ 12 ವರ್ಷದ ಮಗಳಿದ್ದಾಳೆ. ಅನ್ಯೋನ್ಯವಾಗಿದ್ದ ದಂಪತಿ ನಡುವೆ ಕೆಲ ವರ್ಷಗಳಿಂದ ಬಿರುಕು ಮೂಡಿತ್ತು. ಶಬ್ರೀನ್ ತಾಜ್ ಗಾರ್ಮೆಂಟ್ಸ್ ಕೆಲಸಕ್ಕೆ ಸೇರಿದ್ದಳು. ಪ್ರತಿದಿನ ಅನ್ವರ್ ಆಟೋದಲ್ಲಿ ಫ್ಯಾಕ್ಟರಿಗೆ ಹೋಗಿ ಬರುತ್ತಿದ್ದಳು. ಈ ವೇಳೆ ಇಬ್ಬರ ನಡುವೆ ಸಂಬಂಧ ಶುರುವಾಗಿತ್ತು. ಈ ವಿಚಾರದಲ್ಲಿ ಮನೆಯಲ್ಲಿ ಗಲಾಟೆ ಆಗಿ ಹಿರಿಯರು ಸಂಧಾನ ಮಾಡಿ, ಬುದ್ಧಿವಾದ ಹೇಳಿದ್ದರು. ಆದರೂ ಬದಲಾಗದ ಶಬ್ರೀನ್, ಪ್ರಿಯಕರ ಅನ್ವರ್ ಮೂಲಕ ಪತಿಯನ್ನೇ ಕೊಲೆ ಮಾಡಿಸಿದ್ದಾಳೆ ಎಂದು ತಿಳಿದುಬಂದಿದೆ.

ಬಯಲಾಗಿದ್ದು ಹೇಗೆ?: ಮೊನ್ನೆ ಶಬ್ರೀನ್ ತವರು ಮನೆಗೆ ಹೋಗಿದ್ದಾಗ ಪತಿ ಮಹಮದ್ ಮನೆಯಲ್ಲಿ ಮಲಗಿದ್ದ. ಈ ವಿಚಾರವನ್ನು ಶಬ್ರೀನ್‌ನಿಂದ ತಿಳಿದ ಅನ್ವರ್ ಹತ್ಯೆಗೆ ಯೋಜನೆ ರೂಪಿಸಿದ್ದ. ಮಹಮದ್ ಮನೆಗೆ ನುಗ್ಗಿ ಮೊಬೈಲ್ ಚಾರ್ಜರ್ ವೈರ್‌ನಿಂದ ಕುತ್ತಿಗೆ ಬಿಗಿದು ಹತ್ಯೆ ಮಾಡಿದ. ಆದರೆ ಆತ ಪ್ರಜ್ಞೆತಪ್ಪಿ ಬಿದ್ದು ಮೃತಪಟ್ಟಿರುವುದಾಗಿ ತಿಳಿದು ಅಂತ್ಯಕ್ರಿಯೆಗೆ ಮುಂದಾಗಿದ್ದರು. ಪದ್ಧತಿಯಂತೆ ಶವಕ್ಕೆ ಸ್ನಾನ ಮಾಡಿಸುವಾಗ ಕುತ್ತಿಗೆಯಲ್ಲಿ ಬಿಗಿದಿರುವ ಗುರುತು ಇರುವುದನ್ನು ಸಂಬಂಧಿಕರು ಗಮನಿಸಿದ್ದಾರೆ. ಈ ಬಗ್ಗೆ ಅಲ್ಲಿಯೇ ಇದ್ದ ಶಬ್ರೀನ್ ಹಾಗೂ ಅನ್ವರ್‌ನನ್ನು ಪ್ರಶ್ನಿಸಿದ್ದಾರೆ. ನಮಗೇನು ಗೊತ್ತಿಲ್ಲ ಎಂದಿದ್ದಕ್ಕೆ ಪೊಲೀಸರಿಗೆ ದೂರು ನೀಡಿದ್ದಾರೆ. ದೇಹವನ್ನು ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ಶವಾಗಾರಕ್ಕೆ ಸಾಗಿಸಿ, ಆರೋಪಿಗಳನ್ನು ವಶಕ್ಕೆ ಪಡೆದಿದ್ದರು. ಇಂದು ಬೆಳಗ್ಗೆ ವೈದ್ಯಕೀಯ ಪರೀಕ್ಷೆ ಬಳಿಕ ಶವವನ್ನು ವಾರಸುದಾರರಿಗೆ ಒಪ್ಪಿಸಿ, ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯಾಸಿರಿ ಮೊತ್ತ 2,000ಕ್ಕೆ ಏರಿಕೆ

ಬೆಂಗಳೂರು: ಮಡಿವಾಳ ಮತ್ತು ಹಿಂದುಳಿದ ಸಮುದಾಯದ ಮಕ್ಕಳು ಹೆಚ್ಚು ಶಿಕ್ಷಿತರಾಗಬೇಕು. ಆದ್ದರಿಂದ 'ವಿದ್ಯಾಸಿರಿ' ಮೊತ್ತವನ್ನು ಪ್ರತಿ ವಿದ್ಯಾರ್ಥಿಗೆ 1,500ರಿಂದ 2,000ಕ್ಕೆ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ಶ್ರೀ ಮಾಚಿದೇವ ಗುರುಪೀಠ ವಿಶ್ವಸ್ಥ ಸಮಿತಿ ಟ್ರಸ್ಟ್ ಕೆಂಗೇರಿ ಸಮೀಪದ ಚೂಡೇನಾಪುರದಲ್ಲಿ ನಿರ್ಮಿಸಿದಕಲಿದೇವ ಸಭಾಂಗಣ ಉದ್ಘಾಟಿಸಿ ಅವರು ಮಾತನಾಡಿದರು.

ಮಡಿವಾಳ ಸೇರಿ ಎಲ್ಲ ಹಿಂದುಳಿದ ಸಮುದಾಯಗಳ ಪ್ರಗತಿಗೆ ಕಾಂಗ್ರೆಸ್ ಸರ್ಕಾರ ಬದ್ಧವಾಗಿದೆ. ಮಡಿವಾಳ ಸಮುದಾಯ ಮುಖ್ಯವಾಹಿನಿಗೆ ಬರಬೇಕು. ಅದಕ್ಕಾಗಿ ವಿದ್ಯಾಸಿರಿ ಮೊತ್ತವನ್ನು ಹೆಚ್ಚಿಸಲು ತೀರ್ಮಾನಿಸಿದ್ದೇವೆ. ಮಡಿವಾಳ ಸಮುದಾಯದ ವಿದ್ಯಾರ್ಥಿ ನಿಲಯಕ್ಕೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದರು.

12ನೇ ಶತಮಾನದಲ್ಲೇ ಮಡಿವಾಳ ಮಾಚಿದೇವರು ಬಸವಣ್ಣನವರ ಜತೆ ಸೇರಿ ಸಮಾಜದ ಬದಲಾವಣೆಗೆ ಮುಂದಾಗಿದ್ದರು. ನಮ್ಮ ಸಮಾಜದಲ್ಲಿ ಜಾತಿ ವ್ಯವಸ್ಥೆ ಕಾರಣಕ್ಕೆ ಅಸಮಾನತೆ ಇದೆ. ಈ ಕಾರಣಕ್ಕೆ ಉದ್ಯೋಗ, ಶಿಕ್ಷಣ ಸಿಗದೇ ಆರ್ಥಿಕ ಅಸಮಾನತೆ ಹೆಚ್ಚಾಯಿತು ಎಂದು ಸಿದ್ದರಾಮಯ್ಯ ಹೇಳಿದರು.

ಮಡಿವಾಳ ಸಮಾಜದಲ್ಲಿ ಒಬ್ಬರೂ ಶಾಸಕರಿಲ್ಲ. ಒಬ್ಬರು ಮಾತ್ರ ಐಎಎಸ್ ಅಧಿಕಾರಿ ಇದ್ದಾರೆ. ಮಡಿವಾಳ ಸಮಾಜ ಇಷ್ಟು ಹಿಂದುಳಿಯಲು ಮನುಸ್ಮೃತಿ ಕಾರಣ ಎಂದು ಹೇಳಿದ ಅವರು, ಸಮಾನತೆ ಸಾರುವ ಸಂವಿಧಾನವನ್ನು ವಿರೋಧಿಸುವವರನ್ನು ದೂರ ಇಡಬೇಕು. ಅವರನ್ನು ಹತ್ತಿರಕ್ಕೆ ಸೇರಿಸಬೇಡಿ. ಸಂವಿಧಾನ ವಿರೋಧಿಗಳ ಜತೆ ಕೈ ಜೋಡಿಸುವುದು ಮಡಿವಾಳ ಮಾಚಿದೇವರಿಗೆ ಮಾಡುವ ಅವಮಾನ ಎಂದು ಕಿಡಿಕಾರಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.04.2025 ಶನಿವಾರ, ಮಳೆ ನಕ್ಷತ್ರ: ಅಶ್ವಿನಿ 13.04.2025 ರಿಂದ 26.04.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಮತ್ತು ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ

■ **ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಕಾಯಚಿಕಿತ್ಸಾ ಸ್ನಾತಕೋತ್ತರ ವಿಭಾಗ, ಹಳೆಯ ವಿದ್ಯಾರ್ಥಿಗಳ ಸಂಘ** : 'ಸುವರ್ಣ ಕಾಯ' ರಾಷ್ಟ್ರ ಮಟ್ಟದ ವೈಜ್ಞಾನಿಕ ವಿಚಾರ ಸಂಕಿರಣ ಮತ್ತು ಸ್ನೇಹಕೂಟ, ಉದ್ಘಾಟನೆ : ಆಯುಷ್ ಇಲಾಖೆಯ ಆಯುಕ್ತ ವಿಪಿನ್ ಸಿಂಗ್, ಅನುಸಂಧಾನ ಸಂಗ್ರಹ ಅನಾವರಣ : ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಬಿ.ಸಿ.ಭಗವಾನ್, ಅಧ್ಯಕ್ಷತೆ : ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಕೆ.ಎಸ್ ರಾಧಾಕೃಷ್ಣ ರಾಮರಾವ್, ಮುಖ್ಯ ಅತಿಥಿಗಳು : ಹಿರಿಯ ವಿದ್ಯಾರ್ಥಿ ಡಾ.ಟಿ.ಎಲ್. ದೇವರಾಜ್, ಸ್ಥಳ : ಅಮೃತ ಮಹೋತ್ಸವ ಭವನ, ಜೆ.ಕೆ. ಮೈದಾನ, ಬೆಳಗ್ಗೆ 9.30ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ** : ಮಕ್ಕಳ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಪೀಪಲ್ ಫಾರ್ ಅನಿಮಲ್(ಪಿಎಫ್‌ಎ) ಮತ್ತು ಬೆಂಗಳೂರಿನ ಅಕಲ್ವಿಯೋ ಟೆಕ್ನಾಲಜೀಸ್ ಪ್ರೈ.ಲಿಮಿಟೆಡ್** : ಮೈಸೂರು ತಾಲೂಕು ಬೀರಿಹುಂಡಿ ಮತ್ತು ಜಟ್ಟಿಹುಂಡಿಯಲ್ಲಿ ಬೀದಿನಾಯಿಗಳಿಗೆ ರೇಬಿಸ್ ನಿಯಂತ್ರಣ ಲಸಿಕೆಯನ್ನು ನೀಡುವ ಕಾರ್ಯಕ್ರಮ, ಬೆಳಗ್ಗೆ 10.30 ರಿಂದ.

■ **ಆಶಾಕಿರಣ ಕಲಾ ಟ್ರಸ್ಟ್** : ಮರೆಯದ ಮಾಣಿಕ್ಯ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ : ಚಲನಚಿತ್ರ ನಿರ್ದೇಶಕ ಆದಿತ್ಯ ಚಿಕ್ಕಣ್ಣ, ಮುಖ್ಯ ಅತಿಥಿಗಳು : ಶ್ರೀ ಶನೈಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷೆ ಶ್ರೀಮತಿ ವಿಜಯ ನಂಜುಂಡಯ್ಯ, ಕಾರ್ಯದರ್ಶಿ ಡಾ.ಬಿ.ಎಸ್. ನರಕೇಸರಿ, ರಂಗಭೂಮಿ ಕಲಾವಿದೆ ಶ್ರೀಮತಿ ಮಾಲತಿಶ್ರೀ, ಸ್ಥಳ: ಶ್ರೀ ಶನೈಶ್ವರ ದೇವಸ್ಥಾನದ ಸಮುಚ್ಚಯ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ

■ **ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್), ಎನ್‌ಆರ್ ಉಪವಿಭಾಗ** : ಜನ ಸಂಪರ್ಕ ಸಭೆ, ಸ್ಥಳ: ರಾಜೇಂದ್ರನಗರದ ಆರ್ಚ್ ಬಳಿ ಇರುವ ಎನ್‌ಆರ್ ಉಪವಿಭಾಗದ ಕಚೇರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ** : ಕನ್ನಡ ಪಿಎಚ್.ಡಿ ಕೋರ್ಸ್‌ವರ್ಕ್ ತರಗತಿಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ನಿವೃತ್ತ ಪ್ರಾಧ್ಯಾಪಕ ಪ್ರೊ. ಎನ್.ಎಂ. ತಳವಾರ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಉಪಸ್ಥಿತರು: ಪ್ರಾಧ್ಯಾಪಕ ಪ್ರೊ. ವಿಜಯಕುಮಾರಿ ಎಸ್. ಕರಿಕಲ್, ಸ್ಥಳ: ಸಮಿತಿ ಕೊಠಡಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಳಗ್ಗೆ 11ಕ್ಕೆ.

■ **ಅರಳಿಕಟ್ಟೆ ಶ್ರೀರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ವಿಶ್ವವಸು ನಾಮ ಸಂವತ್ಸರದ ಶ್ರೀರಾಮ ನವಮಿ, ಶಿವರಾಂಪೇಟೆ ಶ್ರೀ ಹರಿವಾಯು ಭಜನಾ ಮಂಡಳಿಯಿಂದ ಭಜನೆ, ಸ್ಥಳ: ಶ್ರೀರಾಮ ದೇವಸ್ಥಾನ, ಜಯಲಕ್ಷ್ಮೀ ವಿಲಾಸ ರಸ್ತೆ, ಚಾಮರಾಜಪುರಂ, ಸಂಜೆ.

■ **ಸುರುಚಿ ರಂಗಮನೆ** : ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 876, ಕಥೆ ಹೇಳುವವರು: ಕುಮಾರಿ ಪದ್ಮಶ್ರೀ ಬಿ ಎ, ಶಿಕ್ಷಕಿ, ಹರಿ ವಿದ್ಯಾಲಯ, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ.

■ **ದಿವ್ಯ ಜೀವನ ಸಂಘ, ಮಹಿಳಾ ಶಾಖೆ:** ಶ್ರೀಮತಿ ಡಾ.ಕೆ.ಎಲ್.ಪ್ರಸನ್ನಾಕ್ಷಿ ಅವರಿಂದ ಕುಲಶೇಖರ ಆಳ್ವಾರ್ ವಿರಚಿತ ಮುಕುಂದ ಮಾಲಾ ಪ್ರವಚನ, ಸ್ಥಳ: ಶಿವಾನಂದ ಜ್ಞಾನಾಲಯ, ಸಂಜೆ 6ರಿಂದ.


■ **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ** : ನಲವತ್ತರ ನಲಿವು ವೈವಿಧ್ಯಮಯ ಸಂಗೀತ ಕಾರ್ಯಕ್ರಮ, ಕವಿಕಾವ್ಯ–ಗಾಯನ, ಉಪಸ್ಥಿತರು : ಕೆ.ಸಿ. ಶಿವಪ್ಪ, ಧರಣೀದೇವಿ ಮಾಲಗತ್ತಿ, ಬಿ.ಆರ್. ಲಕ್ಷ್ಮಣರಾವ್, ಎಂ.ಆರ್. ಕಮಲ, ಜಯಂತ್ ಕಾಯ್ಕಿಣಿ, ರಂಜನಿ ಪ್ರಭು, ನಾ. ದಾಮೋದರ ಶೆಟ್ಟಿ, ಸ್ಥಳ: ರಮಾಗೋವಿಂದ ರಂಗ ಮಂದಿರ, ಕುವೆಂಪುನಗರ, ಸಂಜೆ 6ಕ್ಕೆ.

■ **ಭಾರತೀಯ ವಿದ್ಯಾಭವನ, ಮೈಸೂರು** : ಪಿ. ಪ್ರವೀಣ್ ಕುಮಾರ್ ಮತ್ತು ಚಿತ್ಕಲಾ ಮೇಳ ಅವರಿಂದ ನೃತ್ಯೋಲ್ಲಾಸ, ಸ್ಥಳ: ಭಾರತೀಯ ವಿದ್ಯಾಭವನ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ

■ **ಸ್ವದೇಶಿ ಜಾಗರಣ ಮಂಚ್** : ಭಾರತಕ್ಕೆ ವಿದೇಶಿ ಬಂಡವಾಳ ಭ್ರಮೆ ಮತ್ತು ವಾಸ್ತವ ಪುಸ್ತಕ ಬಿಡುಗಡೆ ಕಾರ್ಯಕ್ರಮ, ಅಧ್ಯಕ್ಷತೆ : ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮುಖ್ಯ ಅತಿಥಿಗಳು : ಐಸಿಎಐ, ಮೈಸೂರು ಘಟಕದ ಅಧ್ಯಕ್ಷ ಎಸ್. ಭಾರ್ಗವ್, ಉಪಸ್ಥಿತರು : ಸ್ವದೇಶಿ ಜಾಗರಣ ಮಂಚ್‌ನ ಶ್ರೀಮತಿ ರಶ್ಮಿ ವಿಜಯಕುಮಾರ್, ಅರ್ಥಶಾಸ್ತ್ರಜ್ಞ ಪ್ರೊ.ಬಿ.ಎಂ. ಕುಮಾರಸ್ವಾಮಿ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6.15ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ: ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ– ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ. ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಸಾದೀರ್ ಅಹಮದ್ ಮುಲ್ಲಾ ಅವರೊಂದಿಗೆ ಸಂದರ್ಶನ. ಸಂದರ್ಶಕರು –ಡಾ. ಮೈಸೂರು ಉಮೇಶ್, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೆ. ಭಾರ್ಗವಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಮೈಸೂರಿನ ಯರಗನಹಳ್ಳಿಯ ಸಿದ್ಧಮ್ಮ ಮತ್ತು ಸಂಗಡಿಗರಿಂದ ಚಾಮುಂಡಮ್ಮನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, ಭಾಗವಹಿಸುತ್ತಾರೆ–ನಾಗಮಂಗಲ ತಾಲೂಕು ಎಲೆಕೊಪ್ಪ ಗ್ರಾಮದ ಮಹಾಲಕ್ಷ್ಮಮ್ಮ ಮತ್ತು ಸಂಗಡಿಗರು ಪ್ರಸ್ತುತಿ : ಡಾ. ಮೈಸೂರು ಉಮೇಶ್, 3.30 ಮಕ್ಕಳ ಮಂಟಪ–ಶ್ರೀಶಾರದಾದೇವಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ : ಇಂಥವರೂ ಇದ್ದಾರೆ, ರಚನೆ–ಬಿ. ಎಸ್. ಕೇಶವರಾವ್, ನಿರ್ಮಾಣ–ಉಮೇಶ್. ಎಸ್.ಎಸ್., 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್‌ವಾಣಿ –ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಭತ್ತ ಹಾಗೂ ಕಬ್ಬಿನ ಬೇಸಾಯ ಕುರಿತು ಸಂವಾದ. ಭಾಗವಹಿಸುತ್ತಾರೆ–ಮಂಡ್ಯ ಜಿಲ್ಲೆ ಕೆರೆಗೋಡು ಹೋಬಳಿ ಮಾರುಗೌಡನಹಳ್ಳಿಯ ಕೃಷಿಕ ದಂಪತಿ ಎಂ.ವಿ. ರಮೇಶ್ ಹಾಗೂ ಎಂ.ಶಕುಂತಲ, ಪ್ರಸ್ತುತಿ : ಎನ್. ಕೇಶವಮೂರ್ತಿ, 8.00ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಸಬೀನಾ ಮುಮ್ತಾಜ್ ಇಸ್ಲಾಮ್, ಠುಮ್ರಿ, ದಾದ್ರ ಗಾಯನ

■ **ಶ್ರೀರಾಮಮಂದಿರ (ಜಯನಗರ):** ಶ್ರೀ ರಾಮಚಂದ್ರ ಸ್ವಾಮಿಯವರ 50ನೇ ವರ್ಧಂತ್ಯುತ್ಸವ, ಸೀತಾ ಕಲ್ಯಾಣ, ಶ್ರೀ ರಾಮ ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹಗಳ ವಾರ್ಷಿಕೋತ್ಸವ, ಹನುಮಂತೋತ್ಸವ, ಕುಂಭಾಭಿಷೇಕ, 59ನೇ ವಾರ್ಷಿಕೋತ್ಸವ ಕಾರ್ಯಕ್ರಮ, ಬೆಳಗ್ಗೆ 9 ರಿಂದ ಧನ್ವಂತರಿ ಹೋಮ, ಸಂಜೆ 4.30ಕ್ಕೆ ಕುಂಭಾಭಿಷೇಕ ಹಾಗೂ ಪಟ್ಟಾಭಿಷೇಕದ ಪ್ರಯುಕ್ತ ಕಲಶ ಸ್ಥಾಪನೆ, ಸಂಜೆ 6.30ಕ್ಕೆ ವಿದ್ವಾನ್ ಪಟ್ಟಾಭಿರಾಮ್ ಪಂಡಿತ್ ಅವರಿಂದ ಗಾಯನ, ಸ್ಥಳ: ರಾಮಮಂದಿರ ಆವರಣ, ಜಯನಗರ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ಶ್ರೀ ವಿಶ್ವವಸು ನಾಮ ಸಂವತ್ಸರದ 135ನೇ ವರ್ಷದ ಶ್ರೀ ರಾಮೋತ್ಸವ, ಶ್ರೀರಾಮ ಪಟ್ಟಾಭಿಷೇಕ, ಹನುಮಂತೋತ್ಸವ, ಸಂಜೆ 6.30ಕ್ಕೆ ರಾಜಬೀದಿಗಳಲ್ಲಿ ಮೆರವಣಿಗೆ, ವಿದ್ವಾನ್ ಪುರುಷೋತ್ತಮ ಮತ್ತು ವೃಂದದವರಿಂದ ನಾದಸ್ವರ ವಾದನ, ರಾತ್ರಿ 8ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮ ಪೇಟೆ.

■ **ಮೈಸೂರು ಒಡಿಸ್ಸಾ ಅಸೋಸಿಯೇಷನ್** : ಪುರಾತನ ದೇವಸ್ಥಾನ ವಾದ ಶ್ರೀ ವೆಂಕಟೇಶ್ವರ ಮತ್ತು ಭೋಗ ನರಸಿಂಹ ಹಾಗೂ ಶ್ರೀದೇವಿ, ಭೂದೇವಿ ಸಾನ್ನಿಧ್ಯದ ಶ್ರೀನಿವಾಸ ಕ್ಷೇತ್ರದಲ್ಲಿ ಕಾವೇರಿ ನೃತ್ಯ ಕಲರವ, ಸಂಗೀತ ಸಂಭ್ರಮ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಪ್ರಾಚೀನ ಮತ್ತು ಪುರಾತತ್ವ ಇಲಾಖೆ ಛೇರ್‌ಮನ್ ಮತ್ತು ಪ್ರೊಫೆಸರ್ ಡಾ.ಎಂ.ಎಸ್.ಕೃಷ್ಣಮೂರ್ತಿ, ಚಾರ್ಟರ್ಡ್ ಅಕೌಂಟೆಂಟ್ ಹರಿಹರನ್ ಅಂಡ್ ಕೋ ಧರ್ಮಾಧಿಕಾರಿ ಹೆಚ್.ರಾಮಚಂದ್ರ, ಮೈರಾ ಸ್ಕೂಲ್ ಆಫ್ ಬ್ಯುಸಿನೆಸ್ ಛೇರ್‌ಮನ್ ಮತ್ತು ಡೀನ್ ಡಾ.ರಾಮಶಾಸ್ತ್ರಿ ಅಂಬರೀಷ್ ಮತ್ತು ಪುರಾತತ್ವ ಇಲಾಖೆ ನಿವೃತ್ತ ಅಭಿಯಂತರ ಇ.ಆರ್.ನರಸಿಂಹಯ್ಯ, ಬೆಳಗ್ಗೆ 9ರಿಂದ ಅಲಂಕಾರ ಮತ್ತು ಶ್ರೀ ವೆಂಕಟೇಶ್ವರ ಮತ್ತು ಭೋಗಾ ನರಸಿಂಹ ದೇವರಿಗೆ ಪೂಜೆ, ಮಧ್ಯಾಹ್ನ 12ರಿಂದ ಮಹಾಮಂಗಳಾರತಿ, ಮಧ್ಯಾಹ್ನ 12.30ರಿಂದ ಪ್ರಸಾದ ವಿನಿಯೋಗ, ಮಧ್ಯಾಹ್ನ 1ರಿಂದ ಗೌರವ ಅತಿಥಿಗಳಿಂದ ಪುರಾತನ ದೇವಸ್ಥಾನದ ಬಗ್ಗೆ ಕಿರು ಪರಿಚಯ, 1.30 ರಿಂದ ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಕಾರ್ಯಕ್ರಮ, ದೇವಸ್ಥಾನದ ಆವರಣದಲ್ಲಿರುವ ರಂಗಮಂಟಪದಲ್ಲಿ ಒಡಿಸ್ಸಿ, ಭರತನಾಟ್ಯಂ, ಕುಚಿಪುಡಿ, ಕಥಕ್ ನೃತ್ಯ ಪ್ರದರ್ಶನ, ಸ್ಥಳ: ಶ್ರೀನಿವಾಸ ಕ್ಷೇತ್ರ, ಶ್ರೀರಂಗಪಟ್ಟಣ ತಾಲೂಕು, ಬೆಳಗೊಳ.

■ **ರಂಗಾಯಣ, ರಂಗಸಂಪದ ತಂಡ** : ಕನ್ನಡ ಚಲನಚಿತ್ರ ನಟಿ ಮತ್ತು ರಂಗ ಕಲಾವಿದೆ ಉಮಾಶ್ರೀ ಅವರಿಂದ ಶರ್ಮಿಷ್ಠೆ ಏಕವ್ಯಕ್ತಿ ನಾಟಕ ಪ್ರದರ್ಶನ, ನಿರ್ದೇಶನ : ಚಿದಂಬರರಾವ್ ಜಂಬೆ, ರಚನೆ : ಬೇಲೂರು ರಘುನಂದನ್ ಸ್ಥಳ: ರಂಗಾಯಣದ ಭೂಮಿಗೀತ, ಸಂಜೆ 6.30ಕ್ಕೆ.

■ **ಅರಳಿ ರಂಗ ತಂಡ** : ಡಾ. ಸಿ. ರವೀಂದ್ರನಾಥ್ ಅವರು ರಚಿಸಿರುವ ಕನ್ನಡ ನಾಟಕ ಉರುವಿ, ಉಪಸ್ಥಿತರು : ಸಾಹಿತಿ ರಹಮತ್ ತರಿಕೆರೆ, ಅಂಕಣಕಾರ ಬಿ. ಚಂದ್ರೇಗೌಡ, ಸ್ಥಳ: ಕಲಾಮಂದಿರದ ಕಿರುಮಂದಿರ, ಸಂಜೆ 6.30ಕ್ಕೆ.

ಕೆ.ಆರ್.ನಗರದಲ್ಲಿಂದು

■ **ಶ್ರೀರಾಮ ಸೇವಾ ಮಂಡಳಿ:** ಶ್ರೀ ರಾಮೋತ್ಸವ, ಪ್ರವಚನ, ವಿದುಷಿ ಶ್ರೀಮತಿ ಮಾಲಿನಿ ಸುಬ್ರಹ್ಮಣ್ಯ ಅವರಿಂದ ಹಾಡುಗಾರಿಕೆ, ನಂದನ ಕಶ್ಯಪ–ಮೃದಂಗ, ಪೃಥ್ವಿ ಭಾಸ್ಕರ್–ಪಿಟೀಲು, ಸ್ಥಳ: ಮಂಡಳಿ ಆವರಣ, ಚಂದ್ರಮೌಳೇಶ್ವರ ರಸ್ತೆ, ಕೆ.ಆರ್.ನಗರ, ಸಂಜೆ.

ಯರಗನಹಳ್ಳಿ ಗ್ರಾಮದಲ್ಲಿಂದು, ಚಾಮರಾಜನಗರ ತಾ.

■ **ಶ್ರೀ ಸೀತಾರಾಮ ಸೇವಾ ಟ್ರಸ್ಟ್** : ಶ್ರೀ ಸೀತಾರಾಮರ ಕಲ್ಯಾಣೋತ್ಸವ ಹಾಗೂ ರಾಮೋತ್ಸವದ ಅಂಗವಾಗಿ ವಿವಿಧ ಪೂಜಾ ಕಾರ್ಯಕ್ರಮ, ಬೆಳಗ್ಗೆ 6.30ಕ್ಕೆ ಸುಪ್ರಭಾತ, ವಿಶ್ವಕ್ಸೇನಪೂಜಾ, ಭಗವದ್ ವಾಸುದೇವ, ಪುಣ್ಯಾಹವಾಚನಂ, ವಸಂತ ಮಾಧವಿ ಪೂಜೆ, ವಸಂತೋತ್ಸವ, ಮಹಾಮಂಗಳಾರತಿ, ಶಾತ್ತುಮುರೈ, ರಾಷ್ಟ್ರಾಶೀರ್ವಾದ ಹಾಗೂ ತೀರ್ಥಪ್ರಸಾದ ವಿನಿಯೋಗ, ರಾತ್ರಿ 8.30ಕ್ಕೆ ಹಾವೇರಿ ಪ್ರಕಾಶ್‌ರವರ ಪುತ್ರಿ ಶ್ರೀಮತಿ ರಾಧಿಕಾ ಮತ್ತು ಸಂಗಡಿಗರಿಂದ ನೃತ್ಯ ಕಾರ್ಯಕ್ರಮ

ಮೈಸೂರು ಮಿತ್ರ

ಪರಂಪರೆ ರಕ್ಷಣೆಯಿಂದ ಮಾತ್ರ ಸಂಸ್ಕೃತಿ ಉಳಿವು ಸಾಧ್ಯ

ಪ್ರಾಚೀನ ಇತಿಹಾಸ ತಜ್ಞ ಡಾ. ಶೆಲ್ವಪಿಳ್ಳೆ ಅಯ್ಯಂಗಾರ್ ಅಭಿಮತ

ಮೈಸೂರು, ಏ. 18(ಆರ್‌ಕೆ)– ಹಿಂದಿನವರು ಹಾಕಿರುವ ಪರಂಪರೆಯನ್ನು ರಕ್ಷಿಸಿದರೆ ಮಾತ್ರ ನಮ್ಮ ಸಂಸ್ಕೃತಿ ಉಳಿಯಲು ಸಾಧ್ಯ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ಶೆಲ್ವಪಿಳ್ಳೆ ಅಯ್ಯಂಗಾರ್ ಅಭಿಪ್ರಾಯಪಟ್ಟಿದ್ದಾರೆ.

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮೈಸೂರು ಶಾಖೆ ವತಿಯಿಂದ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದ ಪರಂಪರೆ ಇಲಾಖೆ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ವಿಶ್ವ ಪರಂಪರೆ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಬಹಳ ಹಿಂದಿನಿಂದ ನಮ್ಮ ದೇಶದಲ್ಲಿ ಉಳಿಸಿಕೊಂಡು ಬಂದಿದ್ದ ಪರಂಪರೆಯು ಯುದ್ಧಗಳಿಂದಾಗಿ ನಾಶವಾಯಿತು ಎಂಬುದು ಇತಿಹಾಸ ಗಮನಿಸಿದಾಗ ತಿಳಿಯುತ್ತದೆ. ಪರಂಪರೆ ಎಂಬುದು ಮಾನವನ ಇತಿಹಾಸದ ಕೊಂಡಿಯಾಗಿರುವುದರಿಂದ ಪರಂಪರೆಯನ್ನು ರಕ್ಷಿಸುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಅವರು ನುಡಿದರು.



ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದ ಪರಂಪರೆ ಇಲಾಖೆ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಶ್ವ ಪರಂಪರೆ ದಿನಾಚರಣೆ ಕಾರ್ಯಕ್ರಮವನ್ನು ಡಾ. ಶೆಲ್ವಪಿಳ್ಳೆ ಅಯ್ಯಂಗಾರ್ ಉದ್ಘಾಟಿಸಿದರು.

ಪಾರಂಪರಿಕ ಕಟ್ಟಡಗಳನ್ನು, ಸ್ಮಾರಕಗಳನ್ನು ಉಳಿಸಿ–ಬೆಳೆಸಿ ಸಂರಕ್ಷಿಸಿಕೊಳ್ಳಲು ಸರ್ಕಾರ, ಸಂಘ–ಸಂಸ್ಥೆಗಳು ಮುಂದಾಗಬೇಕಿದೆ. ಶಿಥಿಲಾವಸ್ಥೆಯಲ್ಲಿರುವ ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ, ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಅನ್ನು ರಕ್ಷಿಸಲು ಸರ್ಕಾರ ಪ್ರಯತ್ನ ಮಾಡುತ್ತಿದ್ದರೂ ಮತ್ತೊಂದೆಡೆ ಅವುಗಳನ್ನು ಕೆಡವಿ ಅಲ್ಲಿ ಹೊಸ ಕಟ್ಟಡ ನಿರ್ಮಿಸಬೇಕೆಂದು ಪಟ್ಟು ಹಿಡಿದಿರುವುದು ವಿಷಾದನೀಯ ಎಂದು ಡಾ. ಅಯ್ಯಂಗಾರ್ ಬೇಸರಿಸಿದರು.

ಅಪಾಯದ ಅಂಚಿನಲ್ಲಿರುವುದರಿಂದ ಪಾರಂಪರಿಕ ಕಟ್ಟಡಗಳನ್ನು ನೆಲಸಮಗೊಳಿಸಿ ಹೊಸದಾಗಿ ನಿರ್ಮಿಸುವುದೇ ಸೂಕ್ತ ಎಂಬುದು ಜನರ ಭಾವನೆಯಾಗಿರುವುದರಿಂದ ಅವುಗಳ ಅಳಿವು–ಉಳಿವಿನ ಬಗ್ಗೆ ಅಧಿಕಾರಿಗಳಲ್ಲಿ ಗೊಂದಲವಿದೆ. ನಮ್ಮ ಪರಂಪರೆ, ಸಂಸ್ಕೃತಿ, ಸಂಸ್ಕಾರಗಳನ್ನು ಸಂರಕ್ಷಿಸದಿದ್ದರೆ, ಮುಂದಿನ ಯುವ ಪೀಳಿಗೆಗೆ ಅದರ ಅರಿವೂ ಇರುವುದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಪಾರಂಪರಿಕ ಆಯುಕ್ತ ಕೆ. ದೇವರಾಜ್, ದೇವರಾಜ ಮಾರುಕಟ್ಟೆ, ಮಹಾರಾಣಿ ಕಾಲೇಜು, ಅಗ್ನಿಶಾಮಕ ದಳ, ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ಗಳನ್ನು ನಮ್ಮ ಭಿನ್ನತೆ, ಸಂಘರ್ಷಗಳಿಂದಾಗಿ ಕಳೆದುಕೊಳ್ಳುವಂತಾಗಿದೆ. ಅನಗತ್ಯ ಹಸ್ತಕ್ಷೇಪಗಳಿಂದಾಗಿ ನಮ್ಮ ಪಾರಂಪರಿಕ ಸ್ಮಾರಕಗಳು ಹಾಳಾಗುತ್ತಿವೆ. ಅಂತಹ ಅಮೂಲ್ಯ ಆಸ್ತಿಗಳನ್ನು ರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಪಾರಂಪರಿಕ ಕಟ್ಟಡಗಳ ರಕ್ಷಣೆ ಕೇವಲ ಸರ್ಕಾರದ್ದಲ್ಲ. ಸಾರ್ವಜನಿಕರೂ ದತ್ತು ತೆಗೆದುಕೊಂಡು ರಕ್ಷಣೆ ಮಾಡಬಹುದು. 2020ರಲ್ಲಿ ರಾಜ್ಯ ಸರ್ಕಾರವು ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನ್ ಕಾಯ್ದೆಗೆ ತಿದ್ದುಪಡಿ ತಂದು ಪ್ರತಿಯೊಂದು ಜಿಲ್ಲೆಯಲ್ಲಿರುವ ಪಾರಂಪರಿಕ ಕಟ್ಟಡ, ಸ್ಮಾರಕಗಳನ್ನು ರಕ್ಷಿಸಲು ಜಿಲ್ಲಾ ಪಾರಂಪರಿಕ ಸಮಿತಿ ರಚಿಸಲು ಅವಕಾಶ ಕಲ್ಪಿಸಿಕೊಟ್ಟಿದೆ ಎಂದು ಅವರು ತಿಳಿಸಿದರು.

ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಆರ್. ದೀಪು, ವಾಸ್ತುಶಿಲ್ಪಿ ಶರತ್‌ಚಂದ್ರ, ಪುರಾತತ್ವ ಸಂರಕ್ಷಣಾಧಿಕಾರಿ ಇಂಜಿನಿಯರ್‌ಗಳಾದ ಟಿ. ತಾರಕೇಶ ಅಂಬರಿಷ್, ಡಾ. ಎಸ್.ಎ. ಮೋಹನಕೃಷ್ಣ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಇಂದಿನಿಂದ ಎಂಐಟಿ ಮೈಸೂರು ಎಡಿನ್ ಕ್ರಿಕೆಟ್ ಪಂದ್ಯಾವಳಿ

ಮೈಸೂರು, ಏ.18(ಜಿಎ)–ಎಡಿನ್ ಬ್ರಿಡ್ಜ್ ಫೌಂಡೇಷನ್, ಹೆಚ್.ಆರ್. ಫೋರಂ, ಎಂಐಟಿ ಸಂಸ್ಥೆ, ಟಾಟಾ ಮೋಟಾರ್ಸ್ ಮತ್ತು ನಕ್ಷ ಬಿಲ್ಡರ್ಸ್ ವತಿಯಿಂದ ಏ.19 ರಿಂದ ಮೇ.11 ರವರೆಗೆ ಬೆಳವಾಡಿಯ ಎಂಐಟಿ ಕ್ಯಾಂಪಸ್‌ನಲ್ಲಿ ಎಂಐಟಿ ಮೈಸೂರು ಎಡಿನ್ ಕ್ರಿಕೆಟ್ ಲೀಗ್ ಪಂದ್ಯಾವಳಿ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಎಡಿನ್ ಬ್ರಿಡ್ಜ್ ಫೌಂಡೇಷನ್‌ನ ಮುಖ್ಯಸ್ಥ ಎಂ.ಫಣೀಶ್ ಈ ವಿಷಯ ತಿಳಿಸಿ, ಮೈಸೂರು, ನಂಜನಗೂಡಿನ ಪ್ರಮುಖ ಕಂಪನಿಗಳು, ಶಿಕ್ಷಣ ಸಂಸ್ಥೆಗಳು, ಕಾರ್ಪೊರೇಟ್ ತಂಡಗಳು ಪಾಲ್ಗೊಳ್ಳಲಿವೆ. ಪ್ರತಿ ತಂಡದಿಂದ 9 ಸಾವಿರ ರೂ. ಪ್ರವೇಶ ಶುಲ್ಕ ಪಡೆದು, ವೆಚ್ಚದ ಬಳಿಕ ಉಳಿದ ಹಣವನ್ನು ಸಾಮಾಜಿಕ ಕಾರ್ಯದಲ್ಲಿ ತೊಡಗಿರುವ ಸಂಸ್ಥೆಗಳಿಗೆ ದೇಣಿಗೆ ನೀಡಲಾಗುವುದು ಎಂದರು. ಶನಿವಾರ, ಭಾನುವಾರಗಳಂದು ಕ್ರಮವಾಗಿ ಈ ಪಂದ್ಯಾವಳಿ ನಡೆಯಲಿದ್ದು, 40 ತಂಡಗಳು ಭಾಗವಹಿಸಲಿವೆ. ಅಂತಿಮ ಸುತ್ತು ಮೇ 10 ಮತ್ತು 11 ರಂದು ನಡೆಯಲಿದೆ ಎಂದು ತಿಳಿಸಿದರು. ಸುದ್ದಿ ಗೋಷ್ಠಿಯಲ್ಲಿ ವಿವಿಧ ಸಂಸ್ಥೆ ಮುಖ್ಯಸ್ಥರಾದ ಡಾ.ಬಿ.ಜಿ.ನರೇಶ್‌ಕುಮಾರ್, ವಿನಯ್ ಶಂಕರ್, ಎ.ಎ. ಆದಿತ್ಯ, ಎನ್. ಕಿಶನ್, ಡಾ. ಮೊಹಮ್ಮದ್ ಕೈಸರ್ ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ಲಯನ್ಸ್ ಇಂಟರ್ ನಾಷನಲ್ ಜಿಲ್ಲೆ 317ಜಿ ವತಿಯಿಂದ ಸಾರ್ಥ ಸಮಾವೇಶ

ಮೈಸೂರು, ಏ.18(ಜಿಎ)–ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲೆ 317 ಜಿ ವತಿಯಿಂದ ಏ. 20 ರ ಬೆಳಗ್ಗೆ 10ಕ್ಕೆ ನಗರದ ಮುಕ್ತ ವಿವಿ ಸಭಾಂಗಣದಲ್ಲಿ ಸಾರ್ಥ ಶೀರ್ಷಿಕೆಯಡಿ ದ್ವಿತೀಯ ಜಿಲ್ಲಾ ಸಮಾವೇಶವನ್ನು ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಗವರ್ನರ್ ಎನ್. ಸುಬ್ರಮಣ್ಯ ಈ ವಿಷಯ ತಿಳಿಸಿ, ಸಮಾವೇಶಕ್ಕೆ ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪುರಸ್ಕೃತರು ಹಾಗೂ ಕಿದ್ವಾಯಿ ಆಸ್ಪತ್ರೆ ನಿವೃತ್ತ ನಿರ್ದೇಶಕಿ ಡಾ. ವಿಜಯಲಕ್ಷ್ಮಿ ದೇಶಮಾನೆ, ನಟ ಅನಿರುದ್ಧ್ ಜಟ್ಕರ್ ಆಗಮಿಸಲಿದ್ದಾರೆ. ಲಯನ್ ಕೆ.ದೇವೇಗೌಡ, ಟಿ.ಎಚ್. ವೆಂಕಟೇಶ್ ಮೊದಲಾದ ಗಣ್ಯರೊಡನೆ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಸಾವಿರಕ್ಕೂ ಹೆಚ್ಚು ಸದಸ್ಯರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಟಿ.ಹೆಚ್.ಸುಬ್ರಹ್ಮಣ್ಯ, ಎಸ್.ನವೀನ್, ಎಂ.ಸಿದ್ದೇಗೌಡ, ಭರತೇಶ್, ರಮೇಶ್ ಉಪಸ್ಥಿತರಿದ್ದರು.

ದೇವಾಂಗ ಸಮುದಾಯದ ಮುಡಾ ಸಿಎ ನಿವೇಶನ ರದ್ದು ಆದೇಶಕ್ಕೆ ಹೈಕೋರ್ಟ್ ತಡೆ

ಮೈಸೂರು, ಏ. 18(ಆರ್‌ಕೆ)– ಮೈಸೂರಿನ ದೇವಾಂಗ ಉದ್ಯೋಗಸ್ಥರ ಬಳಗಕ್ಕೆ ಮಂಜೂರಾಗಿದ್ದ ಸಿಎ ನಿವೇಶನವನ್ನು ಷರತ್ತು ಉಲ್ಲಂಘನೆ ಕಾರಣದಿಂದ ರದ್ದುಗೊಳಿಸಿದ್ದ ಮುಡಾ ಆಯುಕ್ತರ ಆದೇಶಕ್ಕೆ ರಾಜ್ಯ ಉಚ್ಚನ್ಯಾಯಾಲಯವು ತಡೆಯಾಜ್ಞೆ ನೀಡಿದೆ.



ಉಪಗುತ್ತಿಗೆ ನೀಡಿರುವುದು ಷರತ್ತು ಉಲ್ಲಂಘನೆಯಾಗಿದೆ ಎಂದು 2025ರ ಮಾರ್ಚ್ 14ರಂದು ಮುಡಾ ಆಯುಕ್ತರು ದೇವಾಂಗ ಉದ್ಯೋಗಸ್ಥರ ಬಳಗಕ್ಕೆ ಮಂಜೂರಾಗಿದ್ದ ವಿಜಯನಗರ 2ನೇ ಹಂತದ ಸಿಎ ನಿವೇಶನ (ಸಂಖ್ಯೆ–1)ವನ್ನು ರದ್ದುಗೊಳಿಸಿ ಆದೇಶ ಹೊರಡಿಸಿದ್ದರು.

ಅದರ ವಿರುದ್ಧ ಅಗತ್ಯ ದಾಖಲೆಗಳೊಂದಿಗೆ ಬಳಗದ ಅಧ್ಯಕ್ಷ ಜಿ.ಸಿ. ನಾಗರಾಜು ಹೈಕೋರ್ಟ್‌ಗೆ ಮೇಲ್ಮನವಿ (ರಿಟ್ ಪಿಟೀಷನ್ ಸಂಖ್ಯೆ 10451) ಸಲ್ಲಿಸಿದ್ದು, ತಾವು ನಿಯಮಾನುಸಾರ ಕಟ್ಟಡ ನಿರ್ಮಿಸಿ ಸಿಎ ನಿವೇಶನದಲ್ಲಿ ಬಿಎಂ ಟ್ರಿನಿಟಿ ಎಂಬ ಶಿಕ್ಷಣ ಸಂಸ್ಥೆ ನಡೆಸುತ್ತಿದ್ದೇವೆ. ಬಳಗವು ಹಿಂದುಳಿದ, ಅಲ್ಪಸಂಖ್ಯಾತರ ಸಂಸ್ಥೆಯಾಗಿದ್ದು, ಜನಾಂಗದ ಮಕ್ಕಳ ಭವಿಷ್ಯ ರೂಪಿಸುವ ಉದ್ದೇಶದಿಂದ ಶಾಲೆ ನಡೆಸಲು ಪಡೆದಿದ್ದ ಸಿಎ ನಿವೇಶನದಲ್ಲಿ ಶಿಕ್ಷಣ ಸಂಸ್ಥೆ ನಡೆಸುತ್ತಿದ್ದೇವೆ ಎಂದು ವಾದಿಸಿ ಪೂರಕ ದಾಖಲೆಗಳನ್ನು ಒದಗಿಸಿದ್ದರು.

ಕೊರೊನಾ ಸಂದರ್ಭ ಶಾಲೆ ನಿರ್ವಹಣೆ ಕಷ್ಟವಾದ ಕಾರಣ, ಟ್ರಿನಿಟಿ ಎಜುಕೇಷನ್‌ನೊಂದಿಗೆ ಮಾಡಿಕೊಂಡಿದ್ದ ತಾತ್ಕಾಲಿಕ ವ್ಯವಸ್ಥೆಯು 2022ರಲ್ಲೇ ಮುಕ್ತಾಯವಾಗಿದ್ದು, ಈವರೆವಿಗೂ ವಾರ್ಷಿಕ ಗುತ್ತಿಗೆ ಹಣವನ್ನು ಬಳಗದ ವಿಷಯವನ್ನು ನ್ಯಾಯಾಲಯದ ಗಮನಕ್ಕೆ ತಂದು ಪೂರಕ ದಾಖಲೆ ಒದಗಿಸಿದ ಕಾರಣ ನೈಜಸ್ಥಿತಿ ಪರಿಗಣಿಸಿ ಹೈಕೋರ್ಟ್ ಮುಡಾ ಆಯುಕ್ತರು ಹೊರಡಿಸಿರುವ ಆದೇಶಕ್ಕೆ ಏಪ್ರಿಲ್ 9ರಂದು ತಡೆಯಾಜ್ಞೆ ನೀಡಿದೆ ಎಂದು ಜಿ.ಸಿ. ನಾಗರಾಜು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಮುಡಾ ಆಯುಕ್ತ ಎ.ಎನ್. ರಘುನಂದನ್, ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿರುವ ವಿಷಯ ನಿನ್ನೆಯಷ್ಟೇ ನನ್ನ ಗಮನಕ್ಕೆ ಬಂದಿದೆ. ಮುಂದೆ ನಮ್ಮ ವಕೀಲರು ಅದರ ಸಂಬಂಧ ವಿಚಾರಣೆ ವೇಳೆ ನ್ಯಾಯಾಲಯದಲ್ಲಿ ವಾದ ಮಂಡಿಸಲಿದ್ದಾರೆ ಎಂದರು.

ಸೂಕ್ಷ್ಮ ಗ್ರಹಿಕೆಯಿಂದ ಉತ್ತಮ ಚಿತ್ರ ನಿರ್ಮಾಣ ಸಾಧ್ಯ

ಹಿರಿಯ ಚಿತ್ರ ನಿರ್ದೇಶಕ ಪರಿಸರವಾದಿ ಸುರೇಶ್ ಹೆಬ್ಳಿಕರ್ ಅಭಿಮತ

ಮೈಸೂರು, ಏ.18(ಎಂಟಿವೈ)– ಗ್ರಾಮೀಣ ಪ್ರದೇಶ ಹಾಗೂ ಗಡಿಭಾಗದ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಗಮನಿಸಿ, ಸಿನಿಮಾ ಮಾಡುವ ಅಲೋಚನಾ ಶಕ್ತಿ ಬೆಳೆಸಿಕೊಂಡರೆ ಅದ್ಭುತವಾದ ಸಿನಿಮಾ ನಿರ್ಮಿಸಬಹುದು ಎಂದು ನಟ ಸುರೇಶ್ ಹೆಬ್ಳಿಕರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರವಿವರ್ಮ ಚಿತ್ರಕಲಾ ಶಾಲೆಯಲ್ಲಿ ರವಿವರ್ಮ ಚಿತ್ರಕಲಾ ಶಾಲೆ, ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ವಿಶ್ವಕಲಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ರೇಖಾಚಿತ್ರ ಕಲಾ ಪ್ರದರ್ಶನ ಹಾಗೂ ಸಿನಿಮೊಟೋಗ್ರಫಿ ಮತ್ತು ಫೋಟೋಗ್ರಫಿ ತರಬೇತಿ ಕೇಂದ್ರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಉತ್ತಮ ಸಿನಿಮಾ ರಚಿಸಬೇಕಾದರೆ ಸೂಕ್ಷ್ಮ ಗ್ರಹಿಕೆ ಅಗತ್ಯ ಅದರಲ್ಲೂ ಗ್ರಾಮೀಣ ಜನರ ಬದುಕು, ಗಡಿ ಭಾಗದ ಜನರ ಸಂಕಷ್ಟಗಳು ಹಾಗೂ ಸಮಸ್ಯೆಗಳ ಬಗ್ಗೆ ಅರಿವಿದ್ದರೆ ಉತ್ತಮ ಸಿನಿಮಾ ತಯಾರಿಸಬಹುದು ಎಂದರು.

ಸಮಾಜದಲ್ಲಾಗುವ ಬದಲಾವಣೆಯನ್ನು ಸೂಕ್ಷ್ಮವಾಗಿ ಗ್ರಹಿಸಿ, ಅವುಗಳನ್ನು ಫೋಟೋಗ್ರಫಿಯ ಮೂಲಕ ಸೆರೆ ಹಿಡಿಯುವ ಚಾಕಚಕ್ಯತೆ ಬೆಳೆಸಿಕೊಳ್ಳಬೇಕು. ಇಂದಿನ ಕಾಲ ಘಟ್ಟದಲ್ಲಿ ರೇಖಾಚಿತ್ರ ಕಲಾ ಪ್ರದರ್ಶನ, ಸಿನಿಮೊಟೋಗ್ರಫಿ, ಫೋಟೋಗ್ರಫಿ ತನ್ನದೇ ಆದ ಪ್ರಾಮುಖ್ಯತೆ ಪಡೆದುಕೊಂಡಿದೆ. ವಿದ್ಯಾರ್ಥಿಗಳು ಯಾವ ರೀತಿಯ ಸಿನಿಮಾ ಮಾಡಬೇಕು. ಯಾವ ರೀತಿಯ ಫೋಟೋ ಸೆರೆ ಹಿಡಿಯಬೇಕು. ಇದರಿಂದ ಸಮಾಜದಲ್ಲಿ ಯಾವ ರೀತಿಯ ಬದಲಾವಣೆಯಾಗುತ್ತದೆ ಎಂಬ ಆಲೋಚನಾ ಶಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ರವಿವರ್ಮ ಚಿತ್ರಕಲಾ ಶಾಲೆಯಲ್ಲಿ ವಿಶ್ವಕಲಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಚಿತ್ರಕಲಾ ಪ್ರದರ್ಶನವನ್ನು ನಟ ಸುರೇಶ್ ಹೆಬ್ಳಿಕರ್ ವೀಕ್ಷಿಸುತ್ತಿರುವುದು.

ಫೋಟೋಗ್ರಫಿ ವಿದ್ಯಾರ್ಥಿಗಳು ನಗರ ಪ್ರದೇಶದಲ್ಲಿ ಫೋಟೋಗ್ರಫಿ ಮಾಡದೇ ಬಂಡೀಪುರ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ತೆರಳಿ ಅಲ್ಲಿನ ಪ್ರಕೃತಿ ಸೌಂದರ್ಯ, ಪ್ರಾಣಿ–ಪಕ್ಷಿಗಳ ಫೋಟೋ ತೆಗೆಯುವುದಕ್ಕೆ ಮುಂದಾಗಬೇಕು. ಇದರಿಂದ ಧನಾತ್ಮಕ ಬದಲಾವಣೆ ಕಂಡುಬರುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಮೊಬೈಲ್ ಬಳಕೆ ಹೆಚ್ಚಾಗಿರುವುದರಿಂದ ಆಲೋಚನೆಯ ಶಕ್ತಿಯನ್ನೇ ಕಳೆದುಕೊಳ್ಳುವ ಆತಂಕದ ವಾತಾವರಣ ನಿರ್ಮಾಣವಾಗಿದೆ. ಆರ್ಥಿಕತೆ, ಸಾಮಾಜಿಕ ಮತ್ತು ಸಾಂಸ್ಕೃತಿಕತೆಯೊಂದಿಗೆ ತಾಂತ್ರಿಕತೆ ಬದಲಾವಣೆಯಿಂದ ಪ್ರಕೃತಿ ನಾಶವಾಗುತ್ತಿದೆ. ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಕಂಪನಿಗಳ ಬೆಳವಣಿಗೆಯಿಂದ ಉಸಿರಾಡಲು ಉತ್ತಮವಾದ ಗಾಳಿಯು ಸಿಗದ ಪರಿಸ್ಥಿತಿ ಬಂದೊದಗಿದೆ ಎಂದು ವಿಷಾದಿಸಿದರು.

ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ (ಜನ್ನಿ) ಮಾತನಾಡಿ, ಕಲೆ ವಿಶ್ವವ್ಯಾಪಿ. ಕಲೆ ಸಾಧಾರಣವಲ್ಲ. ನಮ್ಮ ಆಲೋಚನೆಗಳು, ಕಲ್ಪನೆಗಳು ವಿಸ್ತಾರಗೊಳ್ಳುತ್ತಾ ಹೋಗಬೇಕು. ಮತ್ತು ಜಗತ್ತಿಗೆ ಹಂಚಿಕೆಯಾಗಬೇಕು. ಆ ನಿಟ್ಟಿನಲ್ಲಿ ಚಾರಿತ್ರಿಕವಾಗಿ, ಬದ್ಧತೆಯಿಂದ, ಸೃಜನಶೀಲತೆಯಿಂದ ನಿರ್ವಹಿಸಬೇಕು. ವಿಜ್ಞಾನ ಮತ್ತು ಕಲೆ ಮನುಷ್ಯನ, ಸಮಾಜದ ಬೆಳವಣಿಗೆಗೆ ಬಹಳ ಮುಖ್ಯ. ನಾವು ಅವೆರಡನ್ನು ಅದ್ವಾನ ಮಾಡಿದ್ದೇವೆ. ಇವೆರಡು ಅವಸಾನದ ಕಡೆಗೆ ಸಾಗುತ್ತಿದೆ. ನಮ್ಮ ಆಲೋಚನೆಗಳು ಕ್ಷುಲ್ಲಕವಾಗಿವೆ. ಸೂಕ್ಷ್ಮತೆಯನ್ನು ಕಳೆದುಕೊಂಡಿದ್ದೇವೆ. ಈ ನಿಟ್ಟಿನಲ್ಲಿ ಇಂತಹ ತರಬೇತಿಗಳು ನಮ್ಮ ಕಲ್ಪನೆಯನ್ನು ಬೆಳೆಸಲು, ವಿಸ್ತಾರವಾಗಿ ಕಲಾ ಜಗತ್ತಿನಲ್ಲಿ ಆಲೋಚಿಸಲು ತುಂಬಾ ಸಹಾಯಕಾರಿ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಹಿರಿಯ ಛಾಯಾಗ್ರಾಹಕ ಎಂ.ಆರ್ ಮಂಜುನಾಥ್, ರವಿವರ್ಮ ಚಿತ್ರಕಲಾ ಶಾಲೆ ಮುಖ್ಯಶಿಕ್ಷಕ ಶಿವಕುಮಾರ್ ಕೆಸರಮಡು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಗರ್ಭ ಧರಿಸಿದ್ದ ಹಸು ಕೊಂದು, ಕರುವಿನ ಭ್ರೂಣ ಬಿಸಾಕಿ; ಮಾಂಸ ಸಾಗಿಸಿದ ದುಷ್ಕರ್ಮಿಗಳು!



ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತೊಂದು ಅಮಾನವೀಯ ಘಟನೆ ನಡೆದಿದೆ. ಇತ್ತೀಚೆಗೆ ಹೊನ್ನಾವರದಲ್ಲಿ ಹಸುವನ್ನು ಕಡಿದ ಪ್ರಕರಣ ಬೆಳಕಿಗೆ ಬಂದ ಬೆನ್ನಲ್ಲೇ ಇದೀಗ ಭಟ್ಕಳದಲ್ಲಿ ಗರ್ಭ ಧರಿಸಿದ್ದ ಗೋವನ್ನು ಹತ್ಯೆಗೈದಿರುವ ಘಟನೆ ನಡೆದಿದೆ.

ಭಟ್ಕಳ ತಾಲೂಕಿನ ಕುಕನೀರ್ ವೆಂಕಟಾಪುರ ಹೊಳೆಯ ದಂಡೆಯ ಬಳಿ ಗರ್ಭ ಧರಿಸಿದ್ದ ಹಸುವನ್ನು ಹತ್ಯೆ ಮಾಡಿ ಮಾಂಸ ಸಾಗಾಟ ಮಾಡಿದ್ದಾರೆ. ಹಸುವಿನ ಹೊಟ್ಟೆಯಲ್ಲಿದ್ದ ಕರುವಿನ ಭ್ರೂಣವನ್ನು ಗೋಣಿ ಚೀಲದಲ್ಲಿ ಸುತ್ತಿ ಅಲ್ಲೇ ಎಸೆದು ಹೋಗಿದ್ದಾರೆ.

ಬೀದಿನಾಯಿಯೊಂದು ಚೀಲವನ್ನು ಎಳೆದು ತಂದಿದ್ದು, ಘಟನೆ ಬೆಳಕಿಗೆ ಬಂದಿದೆ. ಘಟನಾ ಸ್ಥಳಕ್ಕೆ ಭಟ್ಕಳ ಗ್ರಾಮೀಣ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆರೋಪಿಗಳ ಬಂಧನಕ್ಕೆ ಜಾಲ ಬೀಸಲಾಗಿದೆ.

ವಿದ್ಯುತ್ ಉತ್ಪಾದನಾ ಕ್ಷೇತ್ರ ವಿಕೇಂದ್ರಿಕೃತವಾಗಿರಬೇಕು

ವಿದ್ಯುತ್ ವಲಯ ಕುರಿತ ಅಂಕಣಕಾರ ಹೆಚ್.ಆರ್.ಶ್ರೀಶ ಅಭಿಮತ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ನಡೆದ 'ಎಸ್ಕಾಂ ದರಗಳು – ಕ್ರಾಸ್ ಸಬ್ಸಿಡಿ–ಹೊಸ ಮಾರ್ಗದತ್ತ' ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ, ವಿದ್ಯುತ್ ವಲಯ ಕುರಿತ ಅಂಕಣಕಾರ ಹೆಚ್.ಆರ್.ಶ್ರೀಶ ಮಾತನಾಡಿದರು.

ಮೈಸೂರು, ಏ.18(ಎಂಟಿವೈ)– ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಏಕಸ್ವಾಮ್ಯತೆ ಇರದೆ, ಉತ್ಪಾದನಾ ಕ್ಷೇತ್ರವು ವೀಕೇಂದ್ರೀಕರಣವಾಗಿರಬೇಕು ಎಂದು ಹಿರಿಯ ಪತ್ರಕರ್ತ, ವಿದ್ಯುತ್ ವಲಯ ಕುರಿತ ಅಂಕಣಕಾರ ಹೆಚ್.ಆರ್.ಶ್ರೀಶ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಮೀಡಿಯಾ ಸ್ಟಡೀಸ್ ಅಂಡ್ ರಿಸರ್ಚ್ ಹಾಗೂ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಎಸ್ಕಾಂ ದರಗಳು– ಕ್ರಾಸ್ ಸಬ್ಸಿಡಿ– ಹೊಸ ಮಾರ್ಗದತ್ತ' ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮಲ್ಲಿ ವಿದ್ಯುತ್ ಉತ್ಪಾದನೆ ಇದೆ. ಆದರೆ, ಟ್ರಾನ್ಸ್ ಮಿಷನ್ ಇಲ್ಲ. ವಿದ್ಯುತ್ ಖಾಸಗೀಕರಣವನ್ನು ಒಪ್ಪಲು ಸಾಧ್ಯವಿಲ್ಲ. ವಿದ್ಯುತ್ ನಿಗಮಗಳ ನೌಕರರಿಗೆ ನೀಡುವ ಪಿಂಚಣಿ ಹಣವನ್ನು ಗ್ರಾಹಕರ ಮೇಲೆ ಹೊರಿಸುವುದು ಸರಿಯಲ್ಲ ಎಂದರು.

ವಿದ್ಯುತ್ ವಲಯದ ನೀತಿ ಕುರಿತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ವಿರೋಧಾಭಾಸಗಳಿವೆ. ವಿದ್ಯುತ್ ಇಂದು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಬಹುದಾಗಿದೆ. ಸೋಲಾರ್ ವಿದ್ಯುತ್ ಬಳಕೆಗೆ ತೆರಿಗೆ ಕಡಿಮೆ ಇದೆ. ಕೈಗಾರಿಕೆಗಳಿಗೆ ವಿದ್ಯುತ್ ಕಚ್ಚಾ ಪದಾರ್ಥವಿದ್ದಂತೆ. ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳಿಗೆ ಕಡಿಮೆ ದರದಲ್ಲಿ ವಿದ್ಯುತ್ ಪೂರೈಸಬೇಕು. ಇದು ಸಣ್ಣ ಕೈಗಾರಿಕೆಗಳಿಗೆ ಶಕ್ತಿ ತುಂಬುತ್ತದೆ. ಗ್ರಾಹಕರಿಗೆ ತೊಂದರೆ ನೀಡಬಾರದು. ಕೃಷಿ ಭೂಮಿ ವ್ಯಾಪ್ತಿ ಕಡಿಮೆಯಾಗುತ್ತಿದೆ. ಆದರೆ, ಕೃಷಿಗೆ ಬಳಕೆಯಾಗುತ್ತಿರುವ ವಿದ್ಯುತ್ತಿನ ಪ್ರಮಾಣ ಹೆಚ್ಚಾಗುತ್ತಿದೆ. ಎಸ್ಕಾಂಗಳು ಮುಳುಗುವ ಸ್ಥಿತಿಯಲ್ಲಿವೆ. ರಾಜ್ಯ ಸರ್ಕಾರದ ಅಧೀನದಲ್ಲಿರುವುದರಿಂದ ಎಸ್ಕಾಂಗಳೂ ಇನ್ನು ಉಳಿದಿವೆ ಎಂದು ತಿಳಿಸಿದರು.

ಅಸ್ಸಾಂ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಸಹ ಕುಲಪತಿ, ಐಎಂಎಸ್‌ಆರ್ ವ್ಯವಸ್ಥಾಪಕ ಟ್ರಸ್ಟಿ ಪ್ರೊ.ಕೆ.ವಿ.ನಾಗರಾಜ್ ಮಾತನಾಡಿ, ಮಾಧ್ಯಮ ಸಾಕ್ಷರತೆ ಕುರಿತು ಇನ್ನಷ್ಟು ಹೆಚ್ಚಿನ ಕೆಲಸ ಆಗಬೇಕಿದೆ. ಮಾಧ್ಯಮ ಸಾಕ್ಷರತೆ ಕುರಿತು ಚಳವಳಿಯೇ ನಡೆಯಬೇಕಿದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಂಸ್ಥೆ ಅಧ್ಯಕ್ಷ ಡಾ.ಆರ್.ದೀಪು ಮಾತನಾಡಿದರು. ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಎ.ಎಸ್.ಸತೀಶ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸಿ.ಎಂ.ಸುಬ್ರಮಣಿಯನ್, ಹಿರಿಯ ಪತ್ರಕರ್ತ ಡಾ. ಕೂಡ್ಲಿ ಗುರುರಾಜ ಉಪಸ್ಥಿತರಿದ್ದರು.

ಮೈಸೂರು ರೈಲ್ವೆ ಮ್ಯೂಸಿಯಂನಲ್ಲಿ ಮಕ್ಕಳ ಸಂಭ್ರಮ; ಪಾರಂಪರಿಕ ಮಾಹಿತಿ ಸಂಗ್ರಹ

ಮೈಸೂರು, ಏ.18(ಎಂಟಿವೈ)– ವಿಶ್ವ ಪಾರಂಪರಿಕ ದಿನವಾದ ಇಂದು ಮೈಸೂರಿನ ರೈಲ್ವೆ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದ್ದ ವಿದ್ಯಾರ್ಥಿಗಳು, ಸಂಗ್ರಹಾಲಯದಲ್ಲಿರುವ ಪಾರಂಪರಿಕ ವಸ್ತುಗಳ ವೀಕ್ಷಿಸಿ ಸಂಭ್ರಮಿಸಿದರು.

ರೈಲ್ವೆ ವಸ್ತುಸಂಗ್ರಹಾಲಯದಲ್ಲಿ ನೈರುತ್ಯ ರೈಲ್ವೆ ಇಲಾಖೆ 'ವಿಪತ್ತು ಮತ್ತು ಸಂಘರ್ಷ ನಿರೋಧಕ ಪರಂಪರೆ ಸಂರಕ್ಷಣೆ' ಶೀರ್ಷಿಕೆಯಡಿ ಆಯೋಜಿಸಿದ್ದ ಪಾರಂಪರಿಕ ದಿನದ ಕಾರ್ಯಕ್ರಮವನ್ನು ವಿಭಾಗೀಯ ರೈಲ್ವೆ ವ್ಯವಸ್ಥಾಪಕ(ಡಿಆರ್‌ಎಂ) ಮುದಿತ್ ಮಿತ್ತಲ್ ಉದ್ಘಾಟಿಸಿ ಮಾತನಾಡಿ, ರೈಲ್ವೆ ಇಲಾಖೆ ಈ ಸಾಲಿನ ವಿಶ್ವ ಪಾರಂಪರಿಕ ದಿನವನ್ನು ವಿಪತ್ತು ಮತ್ತು ಸಂಘರ್ಷ ನಿರೋಧಕ ಪರಂಪರೆ ಸಂರಕ್ಷಣೆ ಶೀರ್ಷಿಕೆಯಲ್ಲಿ ಆಚರಿಸುತ್ತಿದೆ. ಪಾರಂಪರಿಕತೆ ಸಂರಕ್ಷಣೆಯಲ್ಲಿ ಯುವ ಜನರ ಪಾತ್ರ ಬಹು ಮುಖ್ಯವಾಗಿರುವುದರಿಂದ ಮೈಸೂರು ರೈಲ್ವೆ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿರುವ ವಿದ್ಯಾರ್ಥಿಗಳು ಹಾಗೂ ಯುವ ಜನರೂ ಸೇರಿದಂತೆ ಪ್ರವಾಸಿಗರಿಗೆ ಪಾರಂಪರಿಕ ಸಂರಕ್ಷಣೆಯ ಮಹತ್ವದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಅಲ್ಲದೆ, ಶಾಲಾ ವಿದ್ಯಾರ್ಥಿಗಳಿಂದ ಪಾರಂಪರಿಕ ಸಂರಕ್ಷಣೆ ಕುರಿತಂತೆ ಪೋಸ್ಟರ್ ತಯಾರಿಕೆ, ಚಿತ್ರಕಲೆ ಮತ್ತು ವರ್ಣಚಿತ್ರ ಸ್ಪರ್ಧೆ ಆಯೋಜಿಸುವ ಮೂಲಕ ಮಕ್ಕಳಲ್ಲಿ ಪಾರಂಪರಿಕ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.



ಮೈಸೂರಿನ ರೈಲ್ವೆ ವಸ್ತು ಸಂಗ್ರಹಾಲಯದಲ್ಲಿ ಶುಕ್ರವಾರ ನಡೆದ ವಿಶ್ವ ಪಾರಂಪರಿಕ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪಾರಂಪರಿಕ ವಸ್ತು, ತಾಣ, ಸ್ಮಾರಕ ಸಂರಕ್ಷಣೆ ವಿಚಾರದಲ್ಲಿ ಸವಾಲುಗಳು ಎದುರಾಗುತ್ತವೆ. ಅವುಗಳನ್ನು ಯುವ ಜನರು ಮೆಟ್ಟಿನಿಂತು ಸಂರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡು ಭವಿಷ್ಯದ ಪೀಳಿಗೆಗೆ ಕೊಡುಗೆ ನೀಡಬೇಕು. ಪಾರಂಪರಿಕ ಸಂರಕ್ಷಣೆಗೆ ಯುವ ಜನತೆ ರಾಯಭಾರಿಗಳಂತೆ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ವಸ್ತು ಪ್ರದರ್ಶನ ವೀಕ್ಷಿಸಿದ ಮಕ್ಕಳು: ರೈಲ್ವೆ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದ್ದ ಭಾರೀ ಸಂಖ್ಯೆಯ ಮಕ್ಕಳು ಸಂಗ್ರಹಾಲಯದ ಮಹಾರಾಣಿ ಸಲೂನ್‌ನ ಆವರಣದಲ್ಲಿರುವ ಕೈಯ್ಯಿಂದ ರಚಿಸಲಾದ ಸ್ಟೀಮ್ ಎಂಜಿನ್ ಮಾದರಿಯ ಲೈವ್ ಪ್ರದರ್ಶನ ವೀಕ್ಷಿಸಿ ಸಂಭ್ರಮಿಸಿದರು. ಅಪರೂಪದ ವಸ್ತುಗಳು, ವಿಂಟೇಜ್ ಕೋಚ್ ಹಾಗೂ ಇನ್ನಿತರ ವಸ್ತುಗಳನ್ನು ವೀಕ್ಷಿಸಿ, ಅವುಗಳ ಮಾಹಿತಿ ಪಡೆದರು.

ದೇಶ – ವಿದೇಶ

ಅಮೆರಿಕ ಜೊತೆ ನಮ್ಮ ಸಹಭಾಗಿತ್ವವನ್ನು ಮುನ್ನಡೆಸಲು ಭಾರತ ಬದ್ಧ

ನವದೆಹಲಿ, ಏ.18– ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರಮುಖ ಸಲಹೆಗಾರ, ವಿಶ್ವದ ಅತ್ಯಂತ ಶ್ರೀಮಂತ ವ್ಯಕ್ತಿ ಎಲಾನ್ ಮಸ್ಕ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ತಂತ್ರಜ್ಞಾನ ಮತ್ತು ನಾವೀನ್ಯತೆ ಕ್ಷೇತ್ರಗಳಲ್ಲಿ ಸಹಯೋಗದ ಅಗಾಧ ಸಾಮರ್ಥ್ಯದ ಬಗ್ಗೆ ಇಬ್ಬರೂ ಚರ್ಚಿಸಿದ್ದಾರೆ. ಟೆಸ್ಲಾ ಮತ್ತು ಸ್ಪೇಸ್‌ಎಕ್ಸ್ ಸೇರಿದಂತೆ ಮಸ್ಕ್ ಅವರ ವ್ಯವಹಾರ ಕಂಪೆನಿಗಳ ಬಗ್ಗೆ ಮಾತುಕತೆ ನಡೆಸಿ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ ಎಂದು ಮೋದಿ ತಮ್ಮ ಎಕ್ಸ್ ಖಾತೆಯಲ್ಲಿ ತಿಳಿಸಿದ್ದಾರೆ.



ಈ ಕ್ಷೇತ್ರಗಳಲ್ಲಿ ಅಮೆರಿಕದೊಂದಿಗೆ ನಮ್ಮ ಪಾಲುದಾರಿಕೆಯನ್ನು ಮುಂದುವರಿಸಲು ಭಾರತ ಬದ್ಧವಾಗಿದೆ ಎಂದು ಮೋದಿ ಹೇಳಿದರು. ಡೊನಾಲ್ಡ್ ಟ್ರಂಪ್ ಆಡಳಿತದಲ್ಲಿ ಮಸ್ಕ್ ಅವರನ್ನು ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ.

ಅಮೆರಿಕ ವಿಮಾನ ಹೈಜಾಕ್ ಡ್ರಾಮಾ; ಆಗಂತುಕನ ಮೇಲೆ ಗುಂಡು ಹಾರಿಸಿದ ಪ್ರಯಾಣಿಕ

ಬೆಲ್ಮೋಪನ್, ಏ.18– ಅಮೆರಿಕದಲ್ಲಿ ಮತ್ತೊಂದು ವಿಮಾನ ಹೈಜಾಕ್ ಹೈಡ್ರಾಮಾ ವರದಿಯಾಗಿದ್ದು, ವಿಮಾನ ಅಪಹರಿಸಲು ಯತ್ನಿಸಿದ ಆಗಂತುಕನನ್ನು ವಿಮಾನದಲ್ಲಿದ್ದ ಪ್ರಯಾಣಿಕರೊಬ್ಬರು ಗುಂಡುಹಾರಿಸಿ ಕೊಂದು ಹಾಕಿದ್ದಾರೆ ಎಂದು ತಿಳಿದುಬಂದಿದೆ.

ಮೂಲಗಳ ಪ್ರಕಾರ ಗುರುವಾರ ಅಮೆರಿಕದ ಬೆಲೀಜ್‌ನಲ್ಲಿ ಚಾಕು ಹಿಡಿದಿದ್ದ ಅಮೆರಿಕದ ಪ್ರಜೆಯೊಬ್ಬ ಸಣ್ಣ ಟ್ರಾಫಿಕ್ ಏರ್ ವಿಮಾನವನ್ನು ಅಪಹರಿಸಲು ಯತ್ನಿಸಿದ್ದಾನೆ. ಚಾಕು ಹಿಡಿದು ವಿಮಾನದಲ್ಲಿದ್ದವರ ಮೇಲೆ ಹಲ್ಲೆ ನಡೆಸಿದ್ದಾನೆ. ಈ ವೇಳೆ ಹಲವರು ಗಾಯಗೊಂಡಿದ್ದು, ಆಗಂತುಕನ ದಾಳಿಯಿಂದ ತಪ್ಪಿಸಿಕೊಳ್ಳಲು ವಿಮಾನದಲ್ಲಿದ್ದ ಮತ್ತೋರ್ವ ಪ್ರಯಾಣಿಕ ಆತನ ಮೇಲೆ ಗುಂಡು ಹಾರಿಸಿದ್ದಾನೆ ಎಂದು ನ್ಯೂಯಾರ್ಕ್ ಪೋಸ್ಟ್ ವರದಿ ಮಾಡಿದೆ.

ಸ್ಯಾನ್ ಪೆಡ್ರೊಗೆ ತೆರಳುತ್ತಿದ್ದ ವಿಮಾನ ಆಗಸದಲ್ಲಿ ಹಾರುತ್ತಿದ್ದಾಗಲೇ ಈ ಘಟನೆ ಸಂಭವಿಸಿದೆ. ಆಗಂತುಕನನ್ನು 49 ವರ್ಷದ ಶಂಕಿತ ವ್ಯಕ್ತಿ ಅಕಿನ್ಯೆಲಾ ಸಾವಾ ಟೇಲರ್ ಎಂದು ಗುರುತಿಸಲಾಗಿದೆ. ಈ ವೇಳೆ ಈತನ ದಾಳಿ ತಡೆಯಲು ಅದೇ ವಿಮಾನದಲ್ಲಿದ್ದ ಮತ್ತೋರ್ವ ಪ್ರಯಾಣಿಕ ಟೇಲರ್ ಮೇಲೆ ಗುಂಡು ಹಾರಿಸಿದ್ದಾನೆ. ಈ ವೇಳೆ ದುಷ್ಕರ್ಮಿ ಟೇಲರ್ ನೆಲಕ್ಕುರುಳಿದ್ದು, ಬಳಿಕ ವಿಮಾನದ ಸಿಬ್ಬಂದಿ ಪರಿಸ್ಥಿತಿ ನಿಯಂತ್ರಿಸಿದ್ದಾರೆ.

ಅತ್ಯಾಚಾರದ ಆರೋಪಿಯನ್ನು ಬೆತ್ತಲುಗೊಳಿಸಿ ಥಳಿತ; ನಾಯಿಗಳಿಂದ ದಾಳಿ

ಲಖನೌ, ಏ.18– ಉತ್ತರ ಪ್ರದೇಶದ ವಿಶೇಶ್ವರಗಂಜ್ ಪ್ರದೇಶದಲ್ಲಿ ಅತ್ಯಾಚಾರ ಆರೋಪದ ಮೇಲೆ ವ್ಯಕ್ತಿಯನ್ನು ಎತ್ತಿನ ಬಂಡಿಗೆ ಕಟ್ಟಿ, ಹಲ್ಲೆ ಮಾಡಿ ಬೆತ್ತಲೆಯಾಗಿ ಮೆರವಣಿಗೆ ಮಾಡಿರುವ ಘಟನೆ ನಡೆದಿದೆ. ಘಟನೆಯ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಪ್ರಸಾರವಾದ ನಂತರ ಪೊಲೀಸರು ಶುಕ್ರವಾರ ಪ್ರಕರಣ ದಾಖಲಿಸಿದ್ದಾರೆ.

22 ವರ್ಷದ ಯುವಕನ ದೇಹವನ್ನು ಬೆತ್ತಲೆಗೊಳಿಸಿ ಎತ್ತಿನ ಬಂಡಿಗೆ ಕಟ್ಟಿ ಹಾಕಿರುವುದನ್ನು ವೀಡಿಯೊ ತೋರಿಸುತ್ತದೆ. ಕೆಲವರು ನಾಯಿಯನ್ನು ಅವನ ಮೇಲೆ ದಾಳಿ ಮಾಡಲು ಪ್ರೇರೇಪಿಸುತ್ತಿರುವುದನ್ನು ಮತ್ತು ಇತರರು ಥಳಿಸಬೇಕೆಂದು ಪ್ರೋತ್ಸಾಹಿಸುತ್ತಿರುವುದು ಕೇಳಿಬರುತ್ತಿದೆ. ಆತ ಸಾಯಬೇಕು ಎಂಬ ಆಗ್ರಹ ಗುಂಪಿನಿಂದ ಕೇಳಿಬರುತ್ತಿದೆ.

ಗುರುವಾರ ವಿಡಿಯೋ ವ್ಯಾಪಕವಾಗಿ ಪ್ರಸಾರವಾದ ನಂತರ, ವ್ಯಕ್ತಿಯ ಕುಟುಂಬ ಸ್ಥಳೀಯ ಪೊಲೀಸರಿಗೆ ದೂರು ನೀಡಿದೆ. ಮಹಿಳೆಯೊಬ್ಬರ ಲಿಖಿತ ದೂರಿನ ಆಧಾರದ ಮೇಲೆ, ಭಾರತೀಯ ನ್ಯಾಯ ಸಂಹಿತಾ ವಿಭಾಗಗಳ ಅಡಿಯಲ್ಲಿ ಹಲ್ಲೆ ಮತ್ತು ಹಾನಿಗಾಗಿ ಗುರುತಿಸಲಾಗದ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ರಮೇಶ್ ಪಾಂಡೆ ಶುಕ್ರವಾರ ತಿಳಿಸಿದ್ದಾರೆ.

ಅನುಪಮ್ ಖೇರ್, ಕಾಜೋಲ್‌ಗೆ ರಾಜ್ ಕಪೂರ್ ಚಲನಚಿತ್ರ ಪ್ರಶಸ್ತಿ

ಮುಂಬೈ, ಏ.18– ಖ್ಯಾತ ಬಾಲಿವುಡ್ ನಟ ಅನುಪಮ್ ಖೇರ್ ಮತ್ತು ನಟಿ ಕಾಜೋಲ್ ದೇವಗನ್ ಅವರಿಗೆ ಈ ವರ್ಷದ ಮಹಾರಾಷ್ಟ್ರ ಸರ್ಕಾರದ ಪ್ರತಿಷ್ಠಿತ ರಾಜ್ ಕಪೂರ್ ಚಲನಚಿತ್ರ ಪ್ರಶಸ್ತಿ ನೀಡಲಾಗುತ್ತಿದೆ ಎಂದು ರಾಜ್ಯ ಸಾಂಸ್ಕೃತಿಕ ವ್ಯವಹಾರಗಳ ಸಚಿವ ಆಶಿಶ್ ಶೆಲಾರ್ ಅವರು ಪ್ರಕಟಿಸಿದ್ದಾರೆ.



ಖೇರ್ ಅವರನ್ನು ರಾಜ್ ಕಪೂರ್ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಕಾಜೋಲ್ ಅವರನ್ನು ರಾಜ್ ಕಪೂರ್ ವಿಶೇಷ ಕೊಡುಗೆ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ಈ ಪ್ರಶಸ್ತಿಗಳು ಕ್ರಮವಾಗಿ 10 ಲಕ್ಷ ಮತ್ತು 6 ಲಕ್ಷ ರೂ. ನಗದು ಬಹುಮಾನ ಒಳಗೊಂಡಿವೆ.

ಖ್ಯಾತ ನಟ, ನಿರ್ದೇಶಕ ಮತ್ತು ನಿರ್ಮಾಪಕ ಮಹೇಶ್ ಮಂಜ್ರೇಕರ್ ಅವರಿಗೆ ಚಿತ್ರಪತಿ ವಿ ಶಾಂತಾರಾಮ್ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗುವುದು. ಇದು 10 ಲಕ್ಷ ರೂ. ನಗದು ಬಹುಮಾನ, ಸ್ಮರಣಿಕೆ, ಪ್ರಶಂಸಾಪತ್ರ ಮತ್ತು ಬೆಳ್ಳಿ ಪದಕವನ್ನು ಒಳಗೊಂಡಿದೆ ಎಂದು ಸಚಿವರು ಹೇಳಿದ್ದಾರೆ.

ಇನ್ನು ನಟಿ ಮುಕ್ತಾ ಬಾರ್ವೆ ಅವರಿಗೆ ಚಿತ್ರಪತಿ ವಿ ಶಾಂತಾರಾಮ್ ವಿಶೇಷ ಕೊಡುಗೆ ಪ್ರಶಸ್ತಿ ನೀಡಲಾಗುವುದು. ಇದು 6 ಲಕ್ಷ ರೂ. ನಗದು ಬಹುಮಾನ, ಸ್ಮರಣಿಕೆ, ಪ್ರಶಂಸಾಪತ್ರ ಮತ್ತು ಬೆಳ್ಳಿ ಪದಕವನ್ನು ಒಳಗೊಂಡಿದೆ.

ಉಪಗ್ರಹ ಆಧಾರಿತ ಟೋಲ್ ಸಂಗ್ರಹ ಸದ್ಯಕ್ಕಿಲ್ಲ

ನವದೆಹಲಿ, ಏ.18– ಉಪಗ್ರಹ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆಯನ್ನು ದೇಶದಾದ್ಯಂತ ಮೇ 1 ರಿಂದ ಜಾರಿಗೊಳಿಸುವ ಕುರಿತು ಯಾವುದೇ ತೀರ್ಮಾನ ಕೈಗೊಂಡಿಲ್ಲ ಎಂದು ಕೇಂದ್ರ ರಸ್ತೆ ಮತ್ತು ಹೆದ್ದಾರಿ ಸಚಿವಾಲಯವು ಸ್ಪಷ್ಟಪಡಿಸಿದೆ.

ಮೇ 1ರಿಂದ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ ಎಂದು ಕೆಲ ಮಾಧ್ಯಮಗಳಲ್ಲಿ ವರದಿ ಆಗಿರುವ ಹಿನ್ನಲೆಯಲ್ಲಿ ಸಚಿವಾಲಯ ಈ ಸ್ಪಷ್ಟನೆ ನೀಡಿದೆ. ಹಾಲಿ ಬಳಕೆಯಲ್ಲಿರುವ ಫಾಸ್ಟ್ಯಾಗ್ ಬದಲಿಗೆ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ ಎಂದು ವರದಿಯಾಗಿತ್ತು.

ಸಚಿವಾಲಯ ಈ ಕುರಿತು ನೀಡಿರುವ ಹೇಳಿಕೆಯಲ್ಲಿ, ಸ್ವಯಂಚಾಲಿತ ವ್ಯವಸ್ಥೆಯಡಿ ವಾಹನಗಳ ನೋಂದಣಿ ಸಂಖ್ಯೆ ಗುರುತಿಸಿ, ಟೋಲ್ ಸಂಗ್ರಹಿಸುವ ನೂತನ ವ್ಯವಸ್ಥೆಯನ್ನು ಆಯ್ದ ಟೋಲ್ ಪ್ಲಾಜಾಗಳಲ್ಲಿ ಜಾರಿಗೊಳಿಸಲಾಗುವುದು ಎಂದು ತಿಳಿಸಿದೆ. ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದು ಮತ್ತು ಟೋಲ್ ಪ್ಲಾಜಾಗಳಲ್ಲಿ ಪ್ರಯಾಣದ ಅವಧಿ ತಗ್ಗಿಸುವುದು ಇದರ ಉದ್ದೇಶ. ಹೊಸ ವ್ಯವಸ್ಥೆಯಡಿ ನೋಂದಣಿ ಸಂಖ್ಯೆ ಗುರುತಿಸುವ ಎಎನ್‌ಪಿಆರ್ ತಂತ್ರಜ್ಞಾನ ಮತ್ತು ಟೋಲ್ ಸಂಗ್ರಹಕ್ಕಾಗಿ ಹಾಲಿ ಬಳಕೆಯಲ್ಲಿರುವ 'ಫಾಸ್ಟ್ಯಾಗ್ ವ್ಯವಸ್ಥೆ' ಒಟ್ಟಿಗೆ ಕಾರ್ಯನಿರ್ವಹಿಸಲಿವೆ ಎಂದೂ ಸಚಿವಾಲಯವು ವಿವರಿಸಿದೆ.

ಇಂದಿನಿಂದ ಹುಲಿ ಸೆರೆ ಕಾರ್ಯಾಚರಣೆ

ಗೋಣಿಕೊಪ್ಪ ಏ.18– ದಕ್ಷಿಣ ಕೊಡಗಿನ ಅರಣ್ಯದಂಚಿನ ಗ್ರಾಮಗಳಲ್ಲಿ ಜಾನುವಾರುಗಳನ್ನು ಬಲಿ ಪಡೆದು ಜನರಲ್ಲಿ ಆತಂಕ ಸೃಷ್ಟಿಸಿರುವ ಹುಲಿಯನ್ನು ಸೆರೆ ಹಿಡಿಯುವ ಕಾರ್ಯ ಶನಿವಾರದಿಂದ ಬಿರುನಾಣಿ ಗ್ರಾಮ ಪಂಚಾಯತಿ ವ್ಯಾಪ್ತಿಯ ತೆರಾಲು ಗ್ರಾಮದಲ್ಲಿ ಆರಂಭವಾಗಲಿದೆ.

ಈಗಾಗಲೇ ಶ್ರೀಮಂಗಲ, ಟಿ. ಶೆಟ್ಟಿಗೇರಿ, ಈಸ್ಟ್ ಮತ್ತು ವೆಸ್ಟ್ ನೆಮ್ಮಲೆ, ಕುರ್ಚಿ, ಬೀರುಗ, ಬಾಡಗರಕೇರಿ, ಪರಕಟಕೇರಿ, ತೆರಾಲು ಗ್ರಾಮಗಳಲ್ಲಿ ಹುಲಿಯ ಉಪಟಳ ಹೆಚ್ಚಾಗಿದೆ. ಆದ್ದರಿಂದ ದುಬಾರೆ ಸಾಕಾನೆ ಶಿಬಿರದಿಂದ ಎರಡು ಸಾಕಾನೆಗಳನ್ನು ಕಾರ್ಯಚರಣೆಯಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸಲಾಗಿದೆ.

ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅರಣ್ಯ ಸಚಿವ ಈಶ್ವರ ಖಂಡ್ರೆ ಹಾಗೂ ರಾಜ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿರೊಂದಿಗೆ ಮಾತುಕತೆ ನಡೆಸಿ ಸಮಸ್ಯೆಯ ಗಂಭೀರತೆ ಮನವರಿಕೆ ಮಾಡಿದ ಬೆನ್ನಲ್ಲೇ ಹುಲಿ ಕಾರ್ಯಾಚರಣೆಗೆ ಅನುಮತಿ ನೀಡಲಾಗಿದ್ದು ಕಾರ್ಯಾಚರಣೆಯಲ್ಲಿ ಶಾರ್ಪ್ ಶೂಟರ್‌ಗಳು, ಅರವಳಿಕೆ ತಜ್ಞರು ಹಾಗೂ ಪಶು ವೈದ್ಯಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಸ್ಥಳಕ್ಕೆ ಆಗಮಿಸಿ ಕಾರ್ಯಚರಣೆ ಸಿದ್ಧತೆ ಪರಿಶೀಲಿಸಿದ ರಾಜ್ಯ ವನ್ಯಜೀವಿ ಮಂಡಳಿಯ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಮಾಹಿತಿ ನೀಡಿದರು.


ಹುಲಿ ಸೆರೆ ಕಾರ್ಯಾಚರಣೆಗೆ ದುಬಾರೆ ಶಿಬಿರದಿಂದ ಎರಡು ಸಾಕಾನೆಗಳನ್ನು ತಂದಿರುವುದು.

ಸ್ಥಳಕ್ಕೆ ಈಗಾಗಲೇ ದುಬಾರೆ ಸಾಕಾನೆ ಶಿಬಿರದಿಂದ ಶ್ರೀರಾಮ ಹಾಗೂ ಗೋಪಿ ಎಂಬ ಎರಡು ಸಾಕಾನೆಗಳನ್ನು ಕಾರ್ಯಾಚರಣೆಗೆ ಕರೆತರ ಲಾಗಿದೆ. ಅಗತ್ಯವಾದರೆ ಕಾರ್ಯಾಚರಣೆಗೆ ಹೆಚ್ಚಿನ ಸಾಕಾನೆಗಳನ್ನು ಬಳಸಿಕೊಳ್ಳಲಾಗುವುದು ಕಾರ್ಯಚರಣೆಯಲ್ಲಿ ಅರಣ್ಯ ಇಲಾಖೆಯ ಕ್ಷಿಪ್ರ ಕಾರ್ಯಾಚರಣೆ ತಂಡ (ಆರ್.ಆರ್.ಎಫ್) ಕಾಡಾನೆ ಕಾರ್ಯಚರಣೆ ತಂಡ (ಇ.ಎಲ್.ಎಫ್) ಹಾಗೂ ಈ ವ್ಯಾಪ್ತಿಯ ವಿವಿಧ ಅರಣ್ಯ ಇಲಾಖೆಯ ವಿಭಾಗದ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಅವರು ತಿಳಿಸಿದರು.

ಹುಲಿ ಗೆಜ್ಜೆ ಗುರುತು ಪತ್ತೆ ಹಚ್ಚಿ ನಡೆಯಲಿರುವ ಕಾರ್ಯಚರಣೆಯಲ್ಲಿ, ತಾಜಾ ಹೆಜ್ಜೆ ಗುರುತು, ಹುಲಿ ತೆರಳಿರುವ ಜಾಡು ಹಿಡಿದು ಕಾರ್ಯಾಚರಣೆ ಆರಂಭವಾಗಲಿದೆ. ಈ ಬಾರಿ ಕಾರ್ಯಾಚರಣೆಯಲ್ಲಿ ಹುಲಿ ಪ್ರತ್ಯಕ್ಷವಾದಲ್ಲಿ ಹುಲಿಯನ್ನು ಅರವಳಿಕೆ ನೀಡಿ ಸೆರೆ ಹಿಡಿದು ಅದನ್ನು ಪುನರ್ವಸತಿ ಕೇಂದ್ರಕ್ಕೆ ರವಾನಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಸಂಕೇತ್ ಪೂವಯ್ಯ ತಿಳಿಸಿದರು.

ಈ ಸಂದರ್ಭ ಪೊನ್ನಂಪೇಟೆ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕಾಳಿಮಾಡ ಪ್ರಶಾಂತ್, ಟಿ.ಶೆಟ್ಟಿಗೇರಿ ವಲಯ ಕಾಂಗ್ರೆಸ್ ಅಧ್ಯಕ್ಷ ತೀತಿರ ಪ್ರಭು, ಇಲಾಖೆಯ ಅಧಿಕಾರಿಗಳು ಸಿಬ್ಬಂದಿ, ಮಾವುತರು ಕಾವಾಡಿಗರು ಹಾಜರಿದ್ದರು.

ಲಾರಿ–ಓಮ್ನಿ ಡಿಕ್ಕಿ: ತಾಯಿ, ಮಗ ಸಾವು


ಲಾರಿ ಮಾರುತಿ ಓಮ್ನಿ ಮುಖಾಮುಖಿ ಡಿಕ್ಕಿ ಸಂಭವಿಸಿ ಅಸುನೀಗಿದ ತಾಯಿ–ಮಗ.

ಗೋಣಿಕೊಪ್ಪ ಏ.18–ಲಾರಿ ಮತ್ತು ಓಮ್ನಿ ನಡುವೆ ಡಿಕ್ಕಿ ಸಂಭವಿಸಿ ತಾಯಿ ಹಾಗೂ ಮಗ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ದಕ್ಷಿಣ ಕೊಡಗಿನ ಹಾತೂರು ಗ್ರಾಮದಲ್ಲಿ ನಡೆದಿದೆ.

ಬಿ.ಶೆಟ್ಟಿಗೇರಿ ಗ್ರಾಮದ ಅರ್ಚಕ ದಿ.ಪುಂಡರಿಕಾಕ್ಷ ಅವರ ಪತ್ನಿ ಲಲಿತ(70) ಹಾಗೂ ಪುತ್ರ, ಬೆಂಗಳೂರಿನಲ್ಲಿ ಉದ್ಯೋಗದಲ್ಲಿರುವ ಸುದರ್ಶನ(42) ಮೃತ ದುರ್ದೈವಿಗಳು.

ಶುಕ್ರವಾರ ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಮೈಸೂರಿನತ್ತ ಹೋಗುತ್ತಿದ್ದ ತರಕಾರಿ ಲಾರಿ ಮತ್ತು ಗೋಣಿಕೊಪ್ಪಲಿನಿಂದ ಬಿ.ಶೆಟ್ಟಿಗೇರಿಯತ್ತ ಬರುತ್ತಿದ್ದ ಮಾರುತಿ ಓಮ್ನಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಓಮ್ನಿಯಲ್ಲಿದ್ದ ಇಬ್ಬರು ಮೃತಪಟ್ಟಿದ್ದಾರೆ. ಅಪಘಾತದ ತೀವ್ರತೆಗೆ ಓಮ್ನಿ ನಜ್ಜುಗುಜ್ಜಾಗಿದೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಶ್ರದ್ಧಾ ಭಕ್ತಿಯಿಂದ ನಡೆದ ವಾರ್ಷಿಕ ಜಾತ್ರೆ


ನಾಪೋಕ್ಲು ಸಮೀಪದ ಪಾಲೂರು ಗ್ರಾಮದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವದಲ್ಲಿ ಜೋಡಿ ದೇವರ ನೃತ್ಯೋತ್ಸವ ಜರುಗಿತು.

ನಾಪೋಕ್ಲು : ಸಮೀಪದ ಪಾಲೂರು ಗ್ರಾಮದ ಶ್ರೀಮಹಾಲಿಂಗೇಶ್ವರ ದೇವಾಲಯದ ವಾರ್ಷಿಕ ಜಾತ್ರಾ ಮಹೋತ್ಸವ ಐದು ದಿನಗಳ ಕಾಲ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ಮಹಾಲಿಂಗೇಶ್ವರ ದೇವರ ಮೂಲ ಸ್ಥಾನದಲ್ಲಿ ಪೂಜೆ ಸಲ್ಲಿಸುವುದರೊಂದಿಗೆ ವಾರ್ಷಿಕ ಹಬ್ಬಕ್ಕೆ ಚಾಲನೆ ನೀಡಲಾಯಿತು. ಗಣ ಹೋಮ ಮತ್ತು ಕೊಡಿಮರ ಏರಿಸುವುದು, ಉತ್ಸವ ಬಲಿ ದೀಪಾರಾಧನೆ, ಹಗಲು ಉತ್ಸವ ಬಲಿ ನಡೆದು ಸಂಜೆ ದೀಪಾರಾಧನೆ ನಡೆಯಿತು.

ಪಟ್ಟಣಿ ಹಬ್ಬ ಉತ್ಸವದ ಅಂಗವಾಗಿ ಬೆಳಿಗ್ಗೆ ತುಲಾಭಾರಸೇವೆ ಸೇರಿದಂತೆ ವಿವಿಧ ಹರಕೆ ಸೇವೆ ಕಾಣಿಕೆಗಳನ್ನು ಒಪ್ಪಿಸಿ ಎತ್ತು ಪೋರಾಟ, ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಮಹಾಪೂಜೆ, ವಿಶೇಷ ಸೇವೆಗಳು ಜರುಗಿದ ನಂತರ ಜೋಡಿ ದೇವರ ನೃತ್ಯೋತ್ಸವ ನಡೆಯಿತು. ದೇವಾಲಯದ ಮುಖ್ಯ ಅರ್ಚಕ ದೇವಿಪ್ರಸಾದ್, ತಂತ್ರಿಗಳಾಗಿ ಕೃಷ್ಣ , ಮತ್ತು ಸತ್ಯಮೂರ್ತಿ ಸರಳಾಯ, ಕೃಷ್ಣಮೂರ್ತಿ ಇನ್ನಿತರರು ಧಾರ್ಮಿಕ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಿದರು.

ಜಾತ್ರಾ ಮಹೋತ್ಸವದಲ್ಲಿ ದೇವಾಲಯದ ಭಂಡಾರ ತಕ್ಕರಾದ ಎಡಕೇರಿ ಪ್ರವೀಣ್, ಸಮಿತಿ ಅಧ್ಯಕ್ಷರು ಪೊದವಾಡ ಸುಜೈ, ಕಾರ್ಯದರ್ಶಿ ಸೂಧನ ಮದನ್, ಹಾಗೂ ಸದಸ್ಯರು ,ಪಾರುಪತ್ತೆಗಾರ ಟಿ.ಕೆ.ಮನು, ತಕ್ಕ ಮುಖ್ಯಸ್ಥರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿ ಸದಸ್ಯರು, ಚುನಾಯಿತ ಪ್ರತಿನಿಧಿಗಳು, ಊರ ಮತ್ತು ಪರ ಊರಿನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಏ.21ರಿಂದ ಮಹಿಳೆಯರ ಹಾಕಿ ಉತ್ಸವ

ಮಡಿಕೇರಿ: ಕೊಡವ ಕುಟುಂಬಗಳ ನಡುವಿನ ಹಾಕಿ ಪಂದ್ಯಾವಳಿಯ ಬೆಳ್ಳಿಮಹೋತ್ಸವದ ಅಂಗವಾಗಿ ಮುದ್ದಂಡ ಕಪ್ ಹಾಕಿ ಉತ್ಸವದಲ್ಲಿ ಮಹಿಳಾ ತಂಡಗಳ ಹಾಕಿ ಪಂದ್ಯಾವಳಿಯನ್ನು ಏ.21ರಿಂದ ಆಯೋಜಿಸಲಾಗಿದೆ ಎಂದು ಸಮಿತಿ ಅಧ್ಯಕ್ಷೆ ಮುದ್ದಂಡ ರಶಿನ್ ಸುಬ್ಬಯ್ಯ ತಿಳಿಸಿದ್ದಾರೆ.

ಬೆಳಿಗ್ಗೆ 9 ಗಂಟೆಗೆ ಪಂದ್ಯಾವಳಿ ಉದ್ಘಾಟನೆಗೊಳ್ಳಲಿದ್ದು, ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪ್ರಶಸ್ತಿ ವಿಜೇತ ಹಿರಿಯ ಕಲಾವಿದೆ ಐಮುಡಿಯಂಡ ರಾಣಿ ಮಾಚಯ್ಯ ಹಾಗೂ ರಾಷ್ಟ್ರೀಯ ಬಾಸ್ಕೆಟ್‌ಬಾಲ್ ಆಟಗಾರ್ತಿ ಮಂಡೇಪಂಡ ಪುಷ್ಪ ಕುಟ್ಟಣ್ಣ ಪಾಲ್ಗೊಳ್ಳಲಿದ್ದಾರೆ.

56 ಮಹಿಳಾ ತಂಡಗಳ ನಡುವೆ ರೋಚಕ ಪಂದ್ಯಗಳು ನಡೆಯಲಿವೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಟಿ.ಕೆ.ತಂಗಮ್ಮ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಅಜ್ಜಿಮುಟ್ಟ ನಿವಾಸಿ ಟಿ.ಕೆ.ತಂಗಮ್ಮ(93) ದೈವಾಧೀನರಾದರು. ಅಂತ್ಯಕ್ರಿಯೆ ಇಂದು ನೆರವೇರಿಸಲಾಯಿತು. ಮೃತರು ಓರ್ವ ಪುತ್ರ, ಪುತ್ರಿಯನ್ನು ಅಗಲಿದ್ದಾರೆ.

ಪಡಿಯಮಲೆ ಭೀಮಯ್ಯ

ನಾಪೋಕ್ಲು: ಇಲ್ಲಿಗೆ ಸಮೀಪದ ಕಕ್ಕಬ್ಬೆ–ನಾಲಾಡಿ ಗ್ರಾಮದ ಮೇಕೆ ಕೊಪ್ಪಲು ನಿವಾಸಿ ಪಡಿಯಮಲೆ ಭೀಮಯ್ಯ(75) ನಿಧನರಾದರು.



ಅಂತ್ಯಕ್ರಿಯೆ ಮೇಕೆ ಕೊಪ್ಪಲುವಿನಲ್ಲಿ ನೆರವೇರಿಸಲಾಯಿತು. ಮೃತರು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ತಲೆ ಮೇಲೆ ಕಲ್ಲು ಎತ್ತಾಕಿ ಪತ್ನಿಯನ್ನು ಕೊಂದ ಪತಿ

ಕುಡಿದ ಅಮಲಿನಲ್ಲಿ ವ್ಯಕ್ತಿಯೋರ್ವ ಶ್ರೀರಂಗಪಟ್ಟಣದಲ್ಲಿ ಅಮಾನುಷ ಕೃತ್ಯ

ಶ್ರೀರಂಗಪಟ್ಟಣ: ಕುಡಿದ ಅಮಲಿನಲ್ಲಿ ವ್ಯಕ್ತಿಯೋರ್ವ ತನ್ನ ಪತ್ನಿ ತಲೆ ಮೇಲೆ ಕಲ್ಲು ಎತ್ತಾಕಿ ಬರ್ಬರವಾಗಿ ಕೊಲೆಮಾಡಿರುವ ಘಟನೆ ತಾಲೂಕಿನ ಬಾಬುರಾಯನ ಕೊಪ್ಪಲು ಗ್ರಾಮದಲ್ಲಿ ಸಂಭವಿಸಿದೆ.



ಗ್ರಾಮದ ವಾಸಿ ಸೌಮ್ಯ(32) ಕೊಲೆಯಾದ ಮಹಿಳೆ. ತಾಲೂಕಿನ ಪಿ.ಹೊಸಹಳ್ಳಿ ಗ್ರಾಮದ ವೀರಭದ್ರಾಚಾರಿ ಅವರ ಮಗ ಚಂದ್ರ ತನ್ನ ಪತ್ನಿಯನ್ನೇ ಒಳಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ ಆರೋಪಿ.

ಪಾಂಡವಪುರ ತಾಲೂಕಿನ ಸಣಬ ಗ್ರಾಮದ ಸೌಮ್ಯಳನ್ನು 9 ವರ್ಷಗಳ ಹಿಂದೆ ಚಂದ್ರುಗೆ ಕೊಟ್ಟು ವಿವಾಹ ಮಾಡಲಾಗಿತ್ತು. ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದು, ಕಳೆದ 2 ತಿಂಗಳಿನಿಂದ ಬಾಬುರಾಯನ ಕೊಪ್ಪಲು ಗ್ರಾಮದಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದರು.

ಚಂದ್ರುಗೆ ಕುಡಿಯುವ ಅಭ್ಯಾಸವಿದ್ದು, ನಿತ್ಯ ಕುಡಿದು ಬಂದು ನನ್ನ ಮಗಳೊಂದಿಗೆ ಜಗಳ ಮಾಡಿ, ನೀನು ಅಕ್ರಮ ಸಂಬಂಧ ಇಟ್ಟುಕೊಂಡಿದ್ದೀಯ ನಿನ್ನನ್ನು ಮುಗಿಸುತ್ತೇನೆ ಎಂದು ಹೇಳುತ್ತಿದ್ದ. ಗುರುವಾರ ತಡರಾತ್ರಿ ನನ್ನ ಮಗಳ ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿರುವುದಾಗಿ ತಂದೆ ನಿಂಗಾಚಾರಿ ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆರೋಪಿ ತಲೆ ಮರೆಸಿಕೊಂಡಿದ್ದು, ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ಟೌನ್ ಪೊಲೀಸರು ಪ್ರಕರಣ ದಾಖಲಾಗಿದೆ.

ಶ್ರೀ ದೊಡ್ಡಕೇರಮ್ಮ ದೇವಾಲಯ ಉದ್ಘಾಟನೆ


ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಕೆ.ಆರ್.ಪೇಟೆ ಗ್ರಾಮ ದೇವತೆ ಶ್ರೀ ದೊಡ್ಡಕೇರಮ್ಮ ನೂತನ ದೇವಾಲಯದ ಉದ್ಘಾಟನೆ ನೆರವೇರಿಸಿ, ಶ್ರೀರಥದ ಲೋಕಾರ್ಪಣೆ ಮಾಡಿದರು.

ಕೆ.ಆರ್.ಪೇಟೆ, ಏ.18– ದೇವಾಲಯಗಳು ಮನಸ್ಸಿಗೆ ಶಾಂತಿ ನೆಮ್ಮದಿಯನ್ನು ನೀಡುವ ತಾಣಗಳಾಗಿವೆ. ಈ ತಾಣಗಳನ್ನು ಉಳಿಸಲು ಎಲ್ಲರ ಸಹಕಾರ ಅಗತ್ಯ. ದೇವರು–ಧರ್ಮದ ಮಾರ್ಗದಲ್ಲಿ ಸಾಗಿದರೆ ಮಾಡುವ ಕಾರ್ಯದಲ್ಲಿ ಯಶಸ್ಸು ಖಚಿತವಾಗಿ ಸಿಗುತ್ತದೆ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಕೆ.ಆರ್.ಪೇಟೆ ಗ್ರಾಮ ದೇವತೆ ಶ್ರೀ ದೊಡ್ಡಕೇರಮ್ಮ ನೂತನ ದೇವಾಲಯದ ಉದ್ಘಾಟನೆ ಹಾಗೂ ಶ್ರೀರಥದ ಲೋಕಾರ್ಪಣೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಶಿಥಿಲವಾಗಿದ್ದ ಗ್ರಾಮದೇವತೆಯ ದೇವಾಲಯವನ್ನು ವಾಸ್ತುಬದ್ಧವಾಗಿ ನೂತನವಾಗಿ ದೊಡ್ಡಕೇರಮ್ಮ ಶ್ರೀ ಲಕ್ಷ್ಮೀದೇವಿ ತಾಯಿಗೆ ಭವ್ಯವಾದ ಮಂದಿರವನ್ನು ಪುನರ್ ನಿರ್ಮಿಸುವ ಮೂಲಕ ಕೆ.ಆರ್.ಪೇಟೆ ಗ್ರಾಮಸ್ಥರು ಇಡೀ ನಾಗರಿಕ ಸಮಾಜವೇ ಮೆಚ್ಚುವಂತಹ ಕೆಲಸ ಮಾಡಿ ಎಲ್ಲರಿಗೂ ಮಾದರಿಯಾಗಿದ್ದಾರೆ ಎಂದ ಸಚಿವರು ದೇವರ ಸ್ಮರಣೆ ಹಾಗೂ ಪೂಜೆಯಿಂದ ಕಾಲ ಕಾಲಕ್ಕೆ ಮಳೆಯಾಗಿ ಒಳ್ಳೆಯ ಬೆಳೆಯಾಗಿ ಸಮಾಜದಲ್ಲಿ ಶಾಂತಿ ಸುಭಿಕ್ಷೆ ಹಾಗೂ ನೆಮ್ಮದಿಯು ನೆಲಸಲಿ ಅನ್ನದಾತರಾದ ರೈತರ ಬಾಳು ಬಂಗಾರವಾಗಲಿ ಎಂದರು.

ಶಾಸಕ ಹೆಚ್.ಟಿ.ಮಂಜು ಕಾರ್ಯಕ್ರಮ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಸಮಾಜ ಸೇವಕ ಸ್ಟಾರ್ ಚಂದ್ರು, ಆರ್.ಟಿ.ಓ. ಮಲ್ಲಿಕಾರ್ಜುನ್, ಮೈಷುಗರ್ ಅಧ್ಯಕ್ಷ ಹಾಗೂ ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಜಿ.ಪಂ ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್, ಪುರಸಭೆ ಮಾಜಿ ಅಧ್ಯಕ್ಷ ಕೆ.ಟಿ.ಗಂಗಾಧರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್, ಪುರಸಭೆ ಅಧ್ಯಕ್ಷೆ ಪಂಕಜಾ ಪ್ರಕಾಶ್, ಉಪಾಧ್ಯಕ್ಷೆ ಸೌಭಾಗ್ಯ ಉಮೇಶ್, ಸ್ಥಾಯಿಸಮಿತಿ ಅಧ್ಯಕ್ಷ ರವೀಂದ್ರಬಾಬು, ಕಸಬಾ ಸೊಸೈಟಿ ಅಧ್ಯಕ್ಷ ಪುರುಷೋತ್ತಮ್, ಕಾಂಗ್ರೆಸ್ ವಕ್ತಾರ ಸಿ.ಆರ್.ರಮೇಶ್, ಉದ್ಯಮಿ ಬಿ.ರಾಜಶೇಖರ್, ವಕೀಲ ಬಿ.ನಾಗೇಶ್, ಪುರಸಭೆ ಸದಸ್ಯರಾದ ಡಿ.ಪ್ರೇಮಕುಮಾರ್, ಕೆ.ಎಸ್.ಪ್ರಮೋದ್, ಬಸ್ ಸಂತೋಷ್, ನಟರಾಜ್, ಮಹಾದೇವಿ, ಸುಗುಣ, ಕೆ.ಸಿ. ಮಂಜುನಾಥ್, ಗ್ರಾಮದ ಯಜಮಾನರಾದ ಹೆಗ್ಗಡಿ ಕೃಷ್ಣೇಗೌಡ, ಪಟೇಲ್ ಚಂದ್ರಣ್ಣ, ಪುರಸಭೆ ಮಾಜಿ ಅಧ್ಯಕ್ಷ ಚಂದ್ರೇಗೌಡ, ಕೆ.ಸಿ. ವಾಸು, ಉದ್ಯಮಿ ಚಂದ್ರಶೇಖರ್ ಸೇರಿದಂತೆ ಸಾವಿರಾರು ಮಂದಿ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ತಹಶೀಲ್ದಾರ್ ಡಾ. ಅಶೋಕ್, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸುಷ್ಮಾ, ಪೊಲೀಸ್ ಇನ್ಸ್‌ಪೆಕ್ಟರ್ ಸುಮಾರಾಣಿ, ಮುಖಂಡರಾದ ಪಟೇಲ್ ಚಂದ್ರಣ್ಣ, ಹೆಗ್ಗಡಿ ಕೃಷ್ಣೇಗೌಡ ಅವರನ್ನು ಶ್ರೀ ದೊಡ್ಡಕೇರಮ್ಮ ದೇವಾಲಯ ಸಮಿತಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಬಿಂಡಹಳ್ಳಿ ಸೊಸೈಟಿ ಜೆಡಿಎಸ್ ತೆಕ್ಕೆಗೆ

9 ಸ್ಥಾನಗಳಲ್ಲಿ ಜೆಡಿಎಸ್ ಬೆಂಬಲಿತರು ನಿರ್ದೇಶಕರಾಗಿ ಆಯ್ಕೆ


ಬಿಂಡಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ಜೆಡಿಎಸ್ ಬೆಂಬಲಿತ ಎಲ್ಲಾ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಪಾಂಡವಪುರ: ತಾಲೂಕಿನ ಬಿಂಡಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನಿರ್ದೇಶಕ ಸ್ಥಾನದ ಚುನಾವಣೆಯಲ್ಲಿ 11 ನಿರ್ದೇಶಕ ಸ್ಥಾನಗಳ ಪೈಕಿ ಜೆಡಿಎಸ್ ಬೆಂಬಲಿತರು 9 ಸ್ಥಾನ ಪಡೆದು ಸಂಘದ ಆಡಳಿತ ಚುಕ್ಕಾಣಿಯನ್ನು ಜೆಡಿಎಸ್ ತೆಕ್ಕೆಗೆ ತೆಗೆದುಕೊಳ್ಳುವ ಮೂಲಕ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ಕೈಬಲಪಡಿಸಿದ್ದಾರೆ.

ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಚಲುವೇಗೌಡ ಬನ್ನಂಗಾಡಿ ಅವಿರೋಧ, ಚಿಕ್ಕತಮ್ಮಯ್ಯ ಡಿಂಕಾಶೆಟ್ಟಳ್ಳಿ, ಬಿ.ಸಿ.ಜಗದೀಶ್ ಡಿಂಕಾ, ಬಿ.ಡಿ.ದೊಡೇಗೌಡ ಬನ್ನಂಗಾಡಿ, ದೇವೇಗೌಡ ಗಿರಿಯಾರಳ್ಳಿ, ರತ್ನಮ್ಮ ಬನ್ನಂಗಾಡಿ, ರಾಮೇಗೌಡ ಬಿಂಡಹಳ್ಳಿ, ಶಿವಲಿಂಗಯ್ಯ ಅಂತನಹಳ್ಳಿ, ಪಂಕಜ ಮಲ್ಲಿಗೆರೆ ಆಯ್ಕೆಯಾಗಿದ್ದಾರೆ.

ನೂತನ ನಿರ್ದೇಶಕರಿಗೆ ಸಿಎಸ್‌ಪಿಯಿಂದ ಅಭಿನಂಧನೆ: ಬಿಂಡಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಸ್ಥಾನದ ಚುನಾವಣೆಯಲ್ಲಿ ಆಯ್ಕೆಯಾದಂತಹ ಎಲ್ಲಾ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಅಭಿನಂಧನೆ ಸಲ್ಲಿಸಿದರು.

ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ಮುಖಂಡರಾದ ಬಿ.ಪಿ.ಶ್ರೀನಿವಾಸ್, ಹುಚ್ಚೇಗೌಡ, ಯಶವಂತ್‌ಕುಮಾರ್, ಕರಿಗೌಡ, ಗಂಗಾಧರ್, ಧರಣಿ, ರವಿಕರ, ಪ್ರಕಾಶ್, ನಿವೃತ ಶಿಕ್ಷಕ ಶಿವಪ್ಪ, ಪುಟ್ಟರಾಜು, ಗಿರಿಯಾರಳ್ಳಿವಾಸು ಸೇರಿದಂತೆ ಡಿಂಕಾ ಬನ್ನಂಗಾಡಿ ಗ್ರಾಮದ ಎಲ್ಲಾ ಮುಖಂಡರುಗಳು ಹಾಜರಿದ್ದರು.

ಮಂಡ್ಯದಲ್ಲಿ ಶಿಕ್ಷಕರ ಸಮಸ್ಯೆ ಆಲಿಸಿದ ಶಾಸಕ ಕೆ.ವಿವೇಕಾನಂದ



ಮಂಡ್ಯ: ನಗರದ ವಿವಿಧ ಶಾಲೆಗಳಿಗೆ ಶುಕ್ರವಾರ ಭೇಟಿ ನೀಡಿದ ದಕ್ಷಿಣ ಶಿಕ್ಷರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಎಸ್‌ಎಸ್‌ಎಲ್‌ಸಿ ಮೌಲ್ಯ ಮಾಪನದಲ್ಲಿ ತೊಡಗಿದ್ದ ಶಿಕ್ಷಕರ ಸಮಸ್ಯೆಗಳನ್ನು ಆಲಿಸಿದರು.

ನಗರದ ಸೆಂಟ್ ಜೋಸೆಫ್, ಕಾರ್ಮೆಲ್ ಕಾನ್ವೆಂಟ್, ರೋಟರಿ, ಸ್ಟೋನ್ ಬಿಲ್ಡಿಂಗ್ ಹಾಗೂ ಲಕ್ಷ್ಮಿ ಜನಾರ್ದನ ಶಾಲೆಗಳಿಗೆ ಭೇಟಿ ನೀಡಿದ ಅವರು, ಹಲವು ಶಿಕ್ಷಕರನ್ನು ಭೇಟಿ ಮಾಡಿ, ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿ ಎಂದರು.

ಈ ಸಂದರ್ಭದಲ್ಲಿ ಹಲವು ಮಂದಿ ಶಿಕ್ಷಕರು ವೇತನ ಸಮಸ್ಯೆ, ಶಾಲೆಗಳಲ್ಲಿ ಕಟ್ಟಡ ಹಾಗೂ ಶೌಚಾಲಯದ ಸಮಸ್ಯೆ ಬಗ್ಗೆ ಶಾಸಕರಿಗೆ ವಿವರಿಸಿದರು. ಜೊತೆಗೆ ಶಿಕ್ಷಕರ ಸಮಸ್ಯೆಗಳನ್ನು ಬಗೆ ಹರಿಸಲು ಸರ್ಕಾರದ ಮಟ್ಟದಲ್ಲಿ ಗಮನ ಸೆಳೆಯುವಂತೆ ಮನವಿ ಮಾಡಿದರು.

ಬಳಿಕ ಮಾತನಾಡಿದ ವಿವೇಕಾನಂದ, ಶಾಲಾ ಶಿಕ್ಷಕರ ಸಮಸ್ಯೆ ನಿವಾರಣೆ ಬಗ್ಗೆ ಸದನದ ಹೊರಗೆ ಮತ್ತು ಒಳಗೆ ನಿರಂತರವಾಗಿ ಹೋರಾಟ ಮಾಡುತ್ತೇನೆ ನನ್ನ ವ್ಯಾಪ್ತಿಗೆ 29 ಕ್ಷೇತ್ರಗಳು ಬರಲಿದ್ದು, ವರ್ಷಕ್ಕೆ 50 ಲಕ್ಷ ಅನುದಾನ ಸಿಗುತ್ತದೆ. ನನ್ನ ವ್ಯಾಪ್ತಿಯ ಶಿಕ್ಷಕರ ಸಮಸ್ಯೆ ಬಗೆಹರಿಸುವೆ ಎಂದು ಭರವಸೆ ನೀಡಿದರು.

ಮಹದೇಶ್ವರಬೆಟ್ಟದಲ್ಲಿ ಸಂಪುಟ ಸಭೆಗೆ ಸಿದ್ಧತೆ ಪರಿಶೀಲನೆ


ಮಲೆ ಮಹದೇಶ್ವರ ಬೆಟ್ಟದಲ್ಲಿ ಏ.24ರಂದು ಸಚಿವ ಸಂಪುಟ ಸಭೆ ನಡೆಯಲಿರುವ ಹಿನ್ನೆಲೆಯಲ್ಲಿ ಶಾಸಕ ಎಂ.ಆರ್. ಮಂಜುನಾಥ್, ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಭೇಟಿ ನೀಡಿ, ಅಧಿಕಾರಿಗಳ ಸಭೆ ನಡೆಸಿದರು.

ಚಾಮರಾಜನಗರ, ಏ.18– ಮಹದೇಶ್ವರಬೆಟ್ಟದಲ್ಲಿ ಇದೇ ಏಪ್ರಿಲ್ 24ರಂದು ಸಚಿವ ಸಂಪುಟ ಸಭೆ ನಡೆಯಲಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಶಾಸಕರಾದ ಎಂ.ಆರ್. ಮಂಜುನಾಥ್, ಮಲೆ ಮಹದೇಶ್ವರ ಬೆಟ್ಟಕ್ಕೆ ಭೇಟಿ ನೀಡಿ ಪೂರ್ವ ಸಿದ್ದತೆಗಳನ್ನು ಪರಿಶೀಲಿಸಿದರು.

ಸಚಿವ ಸಂಪುಟ ಸಭೆಗೆ ಮುಖ್ಯಮಂತ್ರಿಗಳು, ಸಚಿವರು ಪಾಲ್ಗೊಳ್ಳಲಿರುವ ಹಿನ್ನೆಲೆಯಲ್ಲಿ ವ್ಯಾಪಕವಾಗಿ ವಿವಿಧ ಸ್ಥಳಗಳಿಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಸಿದ್ದತೆಗಳ ಸಂಬಂಧ ಪರಿಶೀಲನೆ ನಡೆಸಿದರು. ಮುಖ್ಯಮಂತ್ರಿಗಳು, ಸಚಿವರು, ಗಣ್ಯರು, ಹಿರಿಯ ಅಧಿಕಾರಿಗಳ ವಾಸ್ತವ್ಯಕ್ಕಾಗಿ ನಿಗಧಿಯಾಗಿರುವ ವಸತಿಗೃಹಗಳಿಗೆ ಭೇಟಿಕೊಟ್ಟು ಕೈಗೊಳ್ಳಲಾಗಿರುವ ಸ್ವಚ್ಛತೆ, ಸಿದ್ದತೆ, ಇನ್ನಿತರೆ ವ್ಯವಸ್ಥೆಗಳನ್ನು ವೀಕ್ಷಿಸಿದರು. ವಸತಿಗೃಹ ಬಳಿ ವಾಹನಗಳ ನಿಲುಗಡೆಗೆ ಇರುವ ಸ್ಥಳವನ್ನು ಸಹ ವೀಕ್ಷಿಸಿ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಿದರು.

ಸಚಿವ ಸಂಪುಟ ಸಭೆ ನಿಗದಿಯಾಗಿರುವ ದೀಪದಗಿರಿ ಒಡ್ಡುವಿನ ಸ್ಥಳಕ್ಕೆ ಭೇಟಿ ನೀಡಿ ಪೂರ್ವ ತಯಾರಿ ಪ್ರಕ್ರಿಯೆಯನ್ನು ಪರಿಶೀಲಿಸಿ ಸಭೆ ನಡೆಯುವ ಸ್ಥಳದಲ್ಲಿ ವ್ಯವಸ್ಥೆಗಳು ಕೈಗೊಳ್ಳುತ್ತಿರುವ ಬಗ್ಗೆ ವೀಕ್ಷಿಸಿ ಸಲಹೆ ಸೂಚನೆಗಳನ್ನು ಸಂಬಂಧಪಟ್ಟವರಿಗೆ ನೀಡಿದರು. ಶಿಷ್ಟಾಚಾರ, ಸ್ವಾಗತ, ಭದ್ರತೆ ಹಾಗೂ ಸಚಿವ ಸಂಪುಟ ಸಭೆ ಸ್ಥಳದಲ್ಲಿ ಯಾವುದೇ ಕೊರತೆಯಾಗದಂತೆ ಎಲ್ಲಾ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿಗಳು, ಶಾಸಕರು ತಿಳಿಸಿದರು. ಬಳಿಕ ನಾಗಮಲೆ ಭವನದಲ್ಲಿ ಸಚಿವ ಸಂಪುಟ ಸಭೆ ನಿರ್ವಹಣೆಗಾಗಿ ರಚಿಸಲಾಗಿರುವ ಅಧಿಕಾರಿಗಳನ್ನೊಳಗೊಂಡ ಸಮಿತಿಯೊಂದಿಗೆ ಸಭೆ ನಡೆಸಿ ಮಾಹಿತಿ ಪಡೆದರು. ನಿಯೋಜಿತ ಸಮಿತಿಗಳು ನಿಗದಿಪಡಿಸಲಾಗಿರುವ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಯಾವುದೇ ಗೊಂದಲಗಳಿಗೆ ಅವಕಾಶವಾಗಬಾರದು. ಸಾಕಷ್ಟು ಮುಂಚಿತವಾಗಿಯೇ ಎಲ್ಲಾ ಕೆಲಸಗಳು ಪೂರ್ಣಗೊಂಡಿರಬೇಕೆಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಶಾಸಕ ಎಂ.ಆರ್. ಮಂಜುನಾಥ್ ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ. ರಘು, ಉಪವಿಭಾಗಾಧಿಕಾರಿ ಮಹೇಶ್, ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ, ಡಿವೈಎಸ್‌ಪಿ ಧರ್ಮೇಂದ್ರ, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಮಹೇಶ್, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಈ ಸಂದರ್ಭದಲ್ಲಿ ಇದ್ದರು.

ಹಾಡಿಗಳಲ್ಲಿ ಆಂಬುಲೆನ್ಸ್ ಸೇವೆಗೆ ಚಾಲನೆ


ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ ಉಚಿತ ಆಂಬುಲೆನ್ಸ್ ಸೇವೆಯನ್ನು ಶಾಸಕ ಎಂ.ಆರ್. ಮಂಜುನಾಥ್ ಆರೋಗ್ಯ ಇಲಾಖೆಗೆ ಹಸ್ತಾಂತರಿಸಿದರು.

ಹನೂರು, ಏ.18–ಶ್ರೀಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ ಉಚಿತ ಆಂಬುಲೆನ್ಸ್ ಸೇವೆಗೆ ಚಾಲನೆ ನೀಡಲಾಯಿತು.

ಮಹದೇಶ್ವರಬೆಟ್ಟ ಗ್ರಾಪಂ ವ್ಯಾಪ್ತಿಯಲ್ಲಿ 18 ಗ್ರಾಮಗಳಿದ್ದು, ಬೆಟ್ಟ ಗುಡ್ಡಗಳಿಂದ ಅರಣ್ಯದ ಮಧ್ಯ ಭಾಗದಲ್ಲಿ ಇರುವುದರಿಂದ ಸಮರ್ಪಕ ರಸ್ತೆ, ಸಾರಿಗೆ ವ್ಯವಸ್ಥೆ ಇಲ್ಲದೆ ನಿವಾಸಿಗಳು ತೊಂದರೆ ಅನುಭವಿಸುತ್ತಿದ್ದ ಬಗ್ಗೆ ಶಾಸಕ ಎಂ.ಆರ್. ಮಂಜುನಾಥ್‌ರ ಮುಖೇನ ಮುಖ್ಯ ಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದು ಪ್ರಾಧಿಕಾರದ ಅನುಮೋದನೆಯೊಂದಿಗೆ 18.5 ಲಕ್ಷ ವೆಚ್ಚದಲ್ಲಿ ವಿಶೇಷ ವ್ಯವಸ್ಥೆಯುಳ್ಳ ಆಂಬುಲೆನ್ಸ್ ಸೇವೆ ಪ್ರಾರಂಭಿಸಲಾಗಿದೆ ಎಂದು ಪ್ರಾಧಿಕಾರದ ಕಾರ್ಯದರ್ಶಿ ಎ.ಈ.ರಘು ಸುದ್ದಿಗಾರರಿಗೆ ತಿಳಿಸಿದರು.

ಆಂಬುಲೆನ್ಸ್ ವಾಹನವನ್ನು ಆರೋಗ್ಯ ಇಲಾಖೆಗೆ ಹಸ್ತಾಂತರ ಮಾಡಲಾಗಿದೆ. ರೋಗಿಗಳನ್ನು ಕರೆತರಲು ತಜ್ಞ ವೈದ್ಯಕೀಯ ಸಿಬ್ಬಂದಿಗಳ ಅವಶ್ಯಕತೆ ಇರುವುದರಿಂದ ಆರೋಗ್ಯ ಇಲಾಖೆಯು ಇದರ ಜವಾಬ್ದಾರಿ ವಹಿಸಿಕೊಳ್ಳಲಿದೆ ಎಂದು ತಿಳಿಸಿದರು.

ಶ್ರೀಕ್ಷೇತ್ರ ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದಿಂದ ಖರೀದಿಸಿರುವ ವಿಶೇಷ ಆಂಬುಲೆನ್ಸ್ ವಾಹನವನ್ನು ಶಾಸಕ ಎಂ.ಆರ್. ಮಂಜುನಾಥ್, ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರ ಸಮ್ಮುಖದಲ್ಲಿ ಆರೋಗ್ಯ ಇಲಾಖೆಗೆ ಹಸ್ತಾಂತರಿಸಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಪ್ರಾಧಿಕಾರದ ಸಿಬ್ಬಂದಿ ಹಾಜರಿದ್ದರು.

ಅಪರಿಚಿತ ವಾಹನ ಡಿಕ್ಕಿ : ಬೈಕ್ ಸವಾರ ಸಾವು

ಚಾಮರಾಜನಗರ: ತಾಲೂಕಿನ ಕಾಳನಹುಂಡಿ ಬಳಿ ಅಪರಿಚಿತ ವಾಹನವೊಂದು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಇಂದು ನಡೆದಿದೆ.

ತಾಲೂಕಿನ ಕುಲಗಾಣ ಗ್ರಾಮದ ನಿವಾಸಿ ಅಡುಗೆ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಮಲ್ಲೇಶ (50) ಮೃತಪಟ್ಟ ಸವಾರ. ಮೃತರಿಗೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಇದ್ದಾರೆ.

ಚಾಮರಾಜನಗರದಿಂದ ಕಾಳನಹುಂಡಿ ಮಾರ್ಗ ಕುಲಗಾಣ ಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಆಹಾರ ಉಗ್ರಾಣದ ಮುಂದಿನ ತಿರುವಿನ ಬಳಿ ಅಪರಿಚಿತ ವಾಹನ ಡಿಕ್ಕಿ ಹೊಡೆದಾಗ ಕೆಳಗೆ ಬಿದ್ದ ಮಲ್ಲೇಶ್ ತಲೆಗೆ ತೀವ್ರ ಪೆಟ್ಟಾಗಿ ಗಂಭೀರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ದಾಖಲಿಸುವವರಿಲ್ಲದೆ ಬಹಳ ಸಮಯದವರೆಗೂ ರಸ್ತೆಯಲ್ಲೇ ಬಿದ್ದಿದ್ದರು. ಬಹಳ ಹೊತ್ತಿನ ಬಳಿಕ ಯಾರೋ ಕರೆ ಮಾಡಿ ಆಂಬುಲೆನ್ಸ್ ಬಂದ ನಂತರ ಸಿಮ್ಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಅಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಹೆಲ್ಮೆಟ್ ಧರಿಸಿದ್ದರೆ ಪ್ರಾಣಾಪಾಯವಾಗುತ್ತಿರಲಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು. ಪೋಲಿಸರು ದೂರನ್ನು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ರಾಜ್ಯ ವಿದ್ಯುತ್ ಪ್ರಸರಣಾ ನಿಗಮವು ವಿವಿಧ ಕಾಮಗಾರಿ ನಿಮಿತ್ತ ಏ.19ರಂದು ಚಾಮರಾಜನಗರ, ಹರದನಹಳ್ಳಿ ಮತ್ತು ಸಂತೇಮರಹಳ್ಳಿ ಉಪವಿಭಾಗಗಳ ವ್ಯಾಪ್ತಿ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಕೋಡಿಮೋಳೆ, ಮಾದಾಪುರ, ಕಾಗಲವಾಡಿ, ಹರದನಹಳ್ಳಿ, ಬೇಡರಪುರ, ಟಿ.ಕೆ ಮೋಳೆ, ಶಿವಪುರ, ಗೂಳಿಪುರ, ಬದನಗುಪ್ಪೆ, ಪಣ್ಯದಹುಂಡಿ, ಬೆಂಡರವಾಡಿ, ಕೆಲ್ಲಂಬಳ್ಳಿ ಎನ್‌ಜೆವೈ, ಇಂಡಸ್ಟ್ರಿಯಲ್ ಏರಿಯಾ, ಕೆಇಡಿಪಿ 10 ಮತ್ತು 11, ಮುತ್ತಿಗೆ, ಹೆಗ್ಗೋಠಾರ, ಉಮ್ಮತ್ತೂರು, ಬಾಗಳಿ, ಲಿಂಗಣಾಪುರ, ಜನ್ನೂರು, ಜನ್ನೂರು ಹೊಸೂರು, ಹಳ್ಳಿಕೆರೆಹುಂಡಿ, ಗಣಗನೂರು, ಗಣಗನೂರುಪುರ, ನವಿಲೂರು, ಆಲ್ದೂರು, ಬಿಎಂಕೆ ಹುಂಡಿ, ಗೊದ್ದಲಹುಂಡಿ, ಕೊತ್ತಲವಾಡಿ, ಅರಕಲವಾಡಿ, ಯರಗನಹಳ್ಳಿ, ಸುವರ್ಣನಗರ, ಫ್ಯಾಕ್ಟರಿ, ಬಿಸಿಲವಾಡಿ, ಪುಣಜನೂರು, ಡೊಳ್ಳಿಪುರ, ಚನ್ನಪನಪುರ, ಅಮಚವಾಡಿ, ಮಾದಲವಾಡಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಭೀಮ ಸಂಭ್ರಮ ಕ್ರಿಕೆಟ್ : ಚಾಲೆಂಜರ್ಸ್ ತಂಡಕ್ಕೆ ಗೆಲುವು

ಯಳಂದೂರು: ತಾಲೂಕಿನ ಕೆಸ್ತೂರು ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ನಿಮಿತ್ತ 2 ದಿನಗಳ ಕಾಲ ನಡೆದ ಭೀಮ ಸಂಭ್ರಮದ ಸೀಸನ್–05ರ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೆಸ್ತೂರು ಗ್ರಾಮದ ಚಾಲೆಂಜರ್ಸ್ ತಂಡವು ಭೀಮ ಸಂಭ್ರಮ ಕಪ್‌ನ್ನು ಗೆದ್ದುಕೊಂಡಿತು.

ತಂಡಕ್ಕೆ ಬಹುಮಾನ ವಿತರಿಸಿದ ಕಂದಹಳ್ಳಿ ನಂಜುಂಡಸ್ವಾಮಿ ಮಾತನಾಡಿ, ಆಟದಲ್ಲಿ ಸೋಲು–ಗೆಲುವು ಸಾಮಾನ್ಯ. ಸೋತ ತಂಡಗಳು ಮಾನಸಿಕ ಧೈರ್ಯವನ್ನು ಕಳೆದುಕೊಳ್ಳದೆ, ಸೋಲೇ ಗೆಲುವಿನ ಮೆಟ್ಟಿಲು ಎಂದರಿಯಬೇಕೆಂದು ಕಿವಿಮಾತು ಹೇಳಿದರು. ಐಪಿಎಲ್ ಮಾದರಿಯಲ್ಲಿ ಆಟಗಾರರ ಹರಾಜು ನಡೆಸಿ ತಂಡವನ್ನು ರಚಿಸಿ ಆಯೋಜಿಸಲಾಗಿತ್ತು ಎಂದರು. ಆಯೋಜಕರಾದ ಬಿ. ಸಚಿನ್, ಬಿ.ಮಹೇಂದ್ರ, ಅಂಬಳೆ ಗ್ರಾಪಂನ ಎಲ್.ನವೀನ ನಿವೃತ್ತ ಮುಖ್ಯಶಿಕ್ಷಕ ರಂಗನಾಥ, ಗ್ರಾಪಂ ಮಾಜಿ ಉಪಾಧ್ಯಕ್ಷ ರಂಗಸ್ವಾಮಿ ಕೆಸ್ತೂರು ಹಾಗೂ ಸುತ್ತಮುತ್ತಲ ಗ್ರಾಮದ ಕ್ರೀಡಾಪಟುಗಳು ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟು ಮಾರಾಟಕ್ಕಿದೆ

30x40 ದ್ವಾರಕನಗರ, ಶ್ರೀರಾಂಪುರ 40x60 ವಿಶ್ವಪ್ರಜ್ಞಾ ಲೇಔಟ್, ಬೋಗಾದಿ ರಸ್ತೆ.

Mob: 9538412881

ಅಂಗಡಿ ಕೆಲಸಕ್ಕೆ ಬೇಕಾಗಿದ್ದಾರೆ

ಹಾರ್ಡ್‌ವೇರ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸ್ಥಳ: ನಂಜುಮಳಿಗೆ ಸರ್ಕಲ್. ಸಂಬಳ: 10 ರಿಂದ 12 ಸಾವಿರ.

Mob: 9380997148

SPACE AVAILABLE FOR RENT

At Devegowda Circle, Ring Road, Mysore. Very auspicious set Vaastu Location. At North East Corner Building.
Ground floor 900 sft
First floor 950 sft
Second floor 950 sft spaces Available.
Suitable for Cafeteria, corporate Office Space, co-working space, Boutique, fitness Center, Banks, Wholesale & retail shops etc.

8147821168, 7760968403

ಬೇಕಾಗಿದ್ದಾರೆ

ಸಸ್ಯಾಹಾರಿ ಅಡುಗೆ ತಯಾರಕರು ಬೇಕಾಗಿದ್ದಾರೆ. ವಸತಿ, ESI, PF ಸೌಲಭ್ಯವಿರುತ್ತದೆ. ವಿಕ್ರಂ ಕಾಲೇಜ್ ಆಫ್ ನರ್ಸಿಂಗ್, ಮೈಸೂರು.

9740745673, 9535096161

SITE FOR SALE

20x30, Prakruthi Layout, T. Narasipura Main Road, 2 km from Ring Road.

Owner: 8971261355

ಬೇಕಾಗಿದ್ದಾರೆ

ಮೊಬೈಲ್ ಫೋನ್ ಶೋರೂಂಗೆ ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಪಾರ್ಟ್ ಟೈಂ / ಫುಲ್ ಟೈಂ

9886409722

ಹಸುಕುರಿ ನೋಡಿಕೊಂಡು ಹೊಲದ ಕೆಲಸ ಮಾಡಲು ಅನುಭವವುಳ್ಳ ಕುಟುಂಬ ಬೇಕಾಗಿದೆ ಉತ್ತಮ ಸಂಬಳ ಹಾಗೂ ಇರಲು ವಸತಿ ಸೌಲಭ್ಯವನ್ನು ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

9148180700
9535332633

ತಕ್ಷಣ ಬೇಕಾಗಿದ್ದಾರೆ

ನಂಜನಗೂಡಿನ ಕಲ್ಲಹಳ್ಳಿ ಕೈಗಾರಿಕಾ ಪ್ರದೇಶದಲ್ಲಿನ ಹೆಸರಾಂತ ಕಂಪನಿಗೆ ಸೆಕ್ಯೂರಿಟಿ ಸೂಪರ್‌ವೈಸರ್, ಗಾರ್ಡ್ಸ್, ಡಾಟಾ ಎಂಟ್ರಿ ಆಪರೇಟರ್ಸ್ ಹಾಗೂ ಡ್ರೈವರ್ಸ್ ಕಂ. ಗಾರ್ಡ್ಸ್ ಬೇಕಾಗಿದ್ದಾರೆ. ಸವಲತ್ತುಗಳು: 8 ಗಂಟೆಗಳ ಕಾಲ ಕೆಲಸವಿರುತ್ತದೆ. • ವಾರದ ರಜೆ, ಇಎಸ್ಐ, ಪಿಎಫ್, NFH Leave with wages, ವಾರ್ಷಿಕ ಬೋನಸ್ ದೊರೆಯುತ್ತದೆ. ಆಕರ್ಷಕ ವೇತನವಿರುತ್ತದೆ. •ಕೆಲಸದ ಸಮಯದಲ್ಲಿ ಊಟದ ವ್ಯವಸ್ಥೆ ಇರುತ್ತದೆ.

9606824074 / 9513341861

ಕೆಲಸ ಖಾಲಿ ಇದೆ

ವಯಸ್ಸಾದವರನ್ನು ನೋಡಿಕೊಳ್ಳುವುದು ಮಗು ಬಾಣಂತಿ ಹಾಗೂ ಅಡುಗೆ ಮನೆ ಕೆಲಸ ಮಾಡುವವರು 24 ಗಂಟೆ ಸಮಯ ವಯಸ್ಸಾದವರನ್ನು ನೋಡಿಕೊಳ್ಳುವವರು ಮಹಿಳೆಯರು ಪುರುಷರು SSLC ಪಾಸ್ ಅಥವಾ ಫೇಲಾದ ಯುವಕ ಯುವತಿಯರು ಆಫೀಸ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ. ಸ್ಥಳ : ಮೈಸೂರ್

8123252840

ಬೇಕಾಗಿದ್ದಾರೆ

Civil Work ಮಾಡಲು Masons ಮತ್ತು Helper ಬೇಕಾಗಿದ್ದಾರೆ
ಸ್ಥಳ: ಜಯಪುರ, ಸಾಲುಂಡಿ, ಕೆಂಚಲಗೂಡು ಸುತ್ತ ಮುತ್ತ

9379888558

WANTED

For a LUXURY RESORT
OM & Digital Mkt 01 (M/F)
Reservation & FO Associate 04 (M/F), HR / Acts. 01 (M/F)
F&B Captain 03
Stewards 05, H/K Boys 04.
gm@nijagunaresorts.com

9902984674, 9902984872

WANTED

Experienced Teachers for a Pre-School

Any Degree with NTTc is must. Location: Mysore, Gundlupet & Chamarajanagara. Contact:

9980777433 or 9980777633

ಜಮೀನು ಮಾರಾಟಕ್ಕಿದೆ

ಮೈಸೂರಿನ R.T. ನಗರ ರಿಂಗ್ ರೋಡ್‌ನಿಂದ ಕೇವಲ 3 ಕಿ.ಮೀ ದೂರದಲ್ಲಿರುವ ಬಲ್ಲಹಳ್ಳಿಯಲ್ಲಿ (Yellow Zone) 8.5 ಎಕರೆ ಭೂಮಿ, Fencing 3 borewel labout house ಹಾಗೂ ತೋಟ, ಶಂಕರ ನಗರ ಲೇಔಟ್ ಪಕ್ಕ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

Mob: 9036284426

ಸೈಟುಗಳು ಮಾರಾಟಕ್ಕಿವೆ

30x40, 30x50 ಶ್ರೀರಾಂಪುರ ರಿಂಗ್ ರೋಡ್ ಹಾಗೂ ಹೊಸ ಮನೆ ಮಾರಾಟಕ್ಕಿದೆ 20x30 ಲಾಲ್ ಬಹದ್ದೂರ್ ಶಾಸ್ತ್ರಿನಗರ, ಮೈಸೂರು.

Mob: 8050345574

ಸೈಟ್ ಮಾರಾಟಕ್ಕೆ ಇದೆ

BVL ಪ್ರೀಮಿಯೋ
30x40, 30x50 ಸಪ್ತ ಮಾತೃಕಾ 30x40 - 40x60

Mob: 9844436672

FOR SALE

42x78 North facing property for sale in Saraswathipuram, near Canara Bank. Price: 13,000 per sqft., Contact:

Mob: 9731316229

CHANGE OF NAME

I, Nalina Manju W/o. Manju.C, aged about 45 years, residing at # 2554/1, 3rd Cross, Kalidasa Road, Vontikoppal, Mysuru-570002 have changed my name from Nalina Srinivas to Nalina Manju vide affidavit sworn before the Notary Public & Advocate Sumithra.B, Mysuru dated 17/04/2025. Sd/- Nalina Manju

---

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರಾಕ್ಷತ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.

SMART HAIR FIXING

574, 9th Cross, Anikethana Road, kuvempunagar, Mysuru

MYSURU 9611028523 MANGALORE 9343142258

ಹೆಲ್ತ್ ಕೇರ್ ತರಬೇತಿ

SSLC/PUC ಆದವರಿಗೆ ಡಿಪ್ಲೊಮಾ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೇಂಟ್ ಮೇರೀಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ, ಮೈಸೂರು

Mob: 9916908454

ಶ್ರೀ ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆ (ರಿ)

ಆಂಗ್ಲ ಮಾಧ್ಯಮ ಪ್ರೌಢಶಾಲೆ, ಹೆಡಿಯಾಲ, ನಂಜನಗೂಡು ತಾಲ್ಲೂಕು–571315
ಶಿಕ್ಷಕರು ಬೇಕಾಗಿದ್ದಾರೆ
Posts: Science, Physics, Chemistry. Qlfn: M.Sc. with B.Ed.
Kannada: M.A. B.Ed.
Hindi - M.A., B.Ed.
ಕಛೇರಿಯಲ್ಲಿ ಭೇಟಿಯ ಸಮಯ ಬೆಳಗ್ಗೆ 10.30 ರಿಂದ 1 ಹಾಗೂ ಸಾಯಂಕಾಲ 3 ರಿಂದ 4.
–ಕಾರ್ಯದರ್ಶಿ / ಮುಖ್ಯೋಪಾಧ್ಯಾಯರು

ಬೇಕಾಗಿದ್ದಾರೆ

ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಕ್ಯಾಷಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ – ವಿಳಾಸ: ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು

ಶೀಘ್ರ ವಿವಾಹಕ್ಕಾಗಿ ಸಂಪರ್ಕಿಸಿ

ಮದುವೆಯಾಗಿಲ್ಲವೇ? ನೀವು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಜಾತಿಯವರಾಗಿದ್ದರೂ (ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ ಗೌಡ, ಬಿಲ್ಲವ, ಪೂಜಾರಿ, ಬಂಟ್ಸ್, ಶೆಟ್ಟಿ, ಕುಲಾಲ್, ದೇವಾಡಿಗ, ಶೆಟ್ಟಿಗಾರ್, ಗಾಣಿಗ, ವಿಶ್ವಕರ್ಮ, ಮೊಗವೀರ, ಕ್ಷತ್ರಿಯ, GSB, RSB, ಕೊಂಕಣಿ, SC, ST ಜಾತಿಯ ಅಭ್ಯಂತರವಿಲ್ಲದವರು, ಹಾಗೂ ಇನ್ನಿತರ ಎಲ್ಲಾ ಜಾತಿಯ ವಧು–ವರರ ವೈವಾಹಿಕ ಸಂಬಂಧದ ಸೂಕ್ತವಾದ ಆಯ್ಕೆಗೆ ಸಂಪರ್ಕಿಸಬಹುದು. ವಧು–ವರರು ಹೆಸರು ನೋಂದಾಯಿಸಿ.ವಿವಾಹ ವೇದಿಕೆ

Mob: 8904834199

ಮನೆ ಮಾರಾಟಕ್ಕಿದೆ

40x40 ಉತ್ತರ ರಸ್ತೆ, ಪೂರ್ವಕ್ಕೆ ಬಾಗಿಲು, 3 ಅಂತಸ್ತು 35 ಚದರ. ವಿವೇಕಾನಂದ ನಗರ, ಮೈಸೂರು–23. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

Mob: 9900284079

WANTED

Post: Medical Officer
Qualification: MBBS
Salary: 65000 + Free 2 BHK accommodation. Place: PHC Kanoor, Ponnampete Taluku, Kodagu district (PPP model)
Contact: Dr. Kantharaju C.K.
Gree Dot Trust

9845058023

ಮಾರುತಿ ಟ್ಯೂಬ್ ವೆಲ್ಸ್ (ರಿ)

ಕಂಪ್ರೆಸರ್ ಆಧಾರಿತ ಆಳ ಕೊಳವೆಬಾವಿ ನೇರವಾಗಿ ಮಾಲೀಕರಿಂದ

ಬೋರ್‌ವೆಲ್ ಡ್ರಿಲ್ಲಿಂಗ್ @
ಸಿಟಿ - ₹75/- ಸೈಟ್ ಬೋರ್‌ವೆಲ್
ಗ್ರಾಮೀಣ - ₹85/- ಕೃಷಿ ಬೋರ್‌ವೆಲ್

8184000444

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 8880558064

ಬೇಕಾಗಿದ್ದಾರೆ

ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ.

Mob: 6364748485

ಬೇಕಾಗಿದ್ದಾರೆ

ಮೈಸೂರಿನ ಬೋಗಾದಿಯಲ್ಲಿರುವ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಆಫೀಸಿನಲ್ಲಿ ಕೆಲಸ ಮಾಡಲು ಅನುಭವವುಳ್ಳ ಆಫೀಸ್ ಅಸಿಸ್ಟೆಂಟ್ ಬೇಕಾಗಿದ್ದಾರೆ. ಮಹಿಳೆಗೆ ಮೊದಲ ಆದ್ಯತೆ. ಕನ್ನಡ ಡೀಡ್ ರೈಟರ್ ಬೇಕಾಗಿದ್ದಾರೆ.

7975269652, 8792235466

ಕೂಡಲೇ ಬೇಕಾಗಿದ್ದಾರೆ

ಆಸ್ಪತ್ರೆಗೆ ಹೌಸ್‌ಕೀಪಿಂಗ್ ಕೆಲಸಕ್ಕೆ ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ಹಿನಕಲ್ ಮತ್ತು ವಿಜಯನಗರ ಸುತ್ತಮುತ್ತ ಇರುವವರು ಸಂಪರ್ಕಿಸಿ

Mob: 9353646312

FOR RENT

1) 2 BHK G/F Vetrifiedtiles/ modular kitchen
2) 2 BHK First Floor
Open terrace / staircase inside Cars/Bikes parking space Suitable for Office cum Residence/ Guest House/Quarters Hinkal(Vijayanagar 3rd stage).

9481426957 / 9886044520

MUDA APPROVED Site for Sale

40x60 West Facing
SemiCommercial Site, 60ft Road
URS Layout Shrirampura Mysore
Just 300 Meter From Ring Road
Ready to Register
Bank Loan Available
Call for More Details

☎-9620349543

SBIT TRAVELS

Group Tours

Singapore & Malaysia -5N6D
May 17,21,29| June 6,13,18,29| July 6,12
Dubai- 5N6D
Apr 22 | May 3, 9| June 5, 15,19,25,29
Bali- 5N6D
May 16,20,29 | June 1,17,29| July 8,19,31

93435 24127
(Saraswathipuram, Mysuru)



Solar Water Heater SALES & SERVICE BAJAJ FINSERV

SUNZONE SOLAR SYSTEM
VM Double Road, Kuvempunagar, Mysuru

9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್

8197383645, 9008711654

SITE FOR SALE

20x40 near Hari Vidyalaya School, Railway layout, SBM Bogadi 5000 / sq.ft. Slightly negotiable. Call

8792235466 | 8884616461

ಬೇಕಾಗಿದ್ದಾರೆ

ಮೈಸೂರು ನಗರದ ರೆಸ್ಟೋರೆಂಟ್ ಒಂದಕ್ಕೆ ಕೌಂಟರ್ ಹುಡುಗರು ಮತ್ತು ಕಾಫಿ ಮಾಸ್ಟರ್ ಬೇಕಾಗಿದ್ದಾರೆ.

Mob: 9900661620

ಪ್ರವೇಶ ತೆರೆದಿದೆ

Paramedical of Science College, Mysore (Affiliated to kar.gov), R.R. Nagar, Mysore. DMLT course for PUC/SSLC pass/fail students. BVOC (Bachelor of vocation) MVOC Lab (Limit Seats) Job guaranteed* 100%

Mob: 8073195952

ಸಿಪಾಯಿ ಪ್ರಾಪರ್ಟೀಸ್

ಇಲವಾಲದ ಬಸ್ ನಿಲ್ದಾಣ ಹಿಂಭಾಗದಲ್ಲಿರುವಂತಹ ಬಸವಾಸಾಗರ ಬಡಾವಣೆಯಲ್ಲಿ 60 ಅಡಿ ರಸ್ತೆಯಲ್ಲಿ 40x60 ಅಳತೆಯ ಸೈಟುಗಳು ಮಾರಾಟಕ್ಕಿವೆ. N.H. 275 ಹೈವೇ ರಸ್ತೆಯ ಹತ್ತಿರ 40 ಅಡಿ ರಸ್ತೆಯಲ್ಲಿ 30x40 ಅಳತೆಯ ನಾರ್ತ್ ಫೇಸ್ ಸೈಟು ಮಾರಾಟಕ್ಕಿವೆ. ನಂಜುಂಡಸ್ವಾಮಿ ಹೆಚ್.ಎಸ್., ಮಾಜಿ ಸೈನಿಕರು

9483862050, 7829779070

ಹೊಸ ಮನೆ ಮಾರಾಟಕ್ಕಿದೆ

3 BHK, 30x40 EAST FACE
MUDA Approved
Near St. Joseph School, Yelwala, Mysore

Mob: 8217851695

SHRIRAM Life Insurance

YOUR PARTNER FOR PROSPERITY RECRUITING

Posting : Marketing Executive, Sales Manager
Location : CHAMARAJANAGAR, MYSURU, MADIKERI, HUNSUR, KUSHALANAGAR,
Eligibility: Any Graduates with 2-3 year Sales experience,
Age : 21-40
Remuneration: At par with the industry +Performance Based incentive

WALK- IN INTERVIEW
23rd April 25 B/W: 10 am - 4 pm in Mysore
At: Shriram Life Insurance Co. Ltd., No. 1111/115, First Floor, Siri, Vinobha Road, Opp. Rajkamal Theatre, Shivarampet, Devaraja Mohalla, Mysore-570001. Mob: 9980921064, 9686455625

PRAKRUTHI PROPERTIES

WISHES HAPPY UGADI FOR SALE
30x40 @ 20 lakhs Near RT Nagar Including Registration
Residential & Commercial Plots in & around Mysore
Apartments @ Ramakrishna Nagar
20x30 New 2BHK House, As Per your Plan With Interiors @ Just 37 Lakh in Bogadi Including Registration

95386 90359, 90359 90359

SITE FOR SALE

MUDA Approved 20x30 Near Vidya Vikas College, Bannur Road.

8792207164 | 6361799533

ಸೈಟು ಬೇಕಾಗಿದೆ

ಚಿಕ್ಕಹಳ್ಳಿ / ವರುಣ / ವಾಜಮಂಗಲ / ಜೆಎಸ್‌ಎಸ್ / ಬಸವೇಶ್ವರ / ನಿರ್ಮಾಣ್ ಹಾಗೂ ಇತರೆ ಅಕ್ಕಪಕ್ಕದ ಬಡಾವಣೆಗಳಲ್ಲಿ ಟಿ. ನರಸೀಪುರ ರಸ್ತೆ / ಬನ್ನೂರು ರಸ್ತೆ.

Mob: 9686071750

SITE FOR SALE

30x40, East face, Rajajinagar, Near Ring Road, Opposite to University Layout.

Mob: 8217042841

ಹೊಸ ಮನೆ ಮಾರಾಟಕ್ಕಿದೆ

ಇಲವಾಲದ ಬೈಪಾಸ್ ರಸ್ತೆಯಲ್ಲಿರುವ ಆಚಾರ್ಯ ವಿದ್ಯಾಕುಲ ಹಿಂಭಾಗ ನಿತ್ಯಾನಂದ ಸಾಗರ ಬಡಾವಣೆಯಲ್ಲಿ 40 ಅಡಿ ರಸ್ತೆಯಲ್ಲಿರುವಂತಹ 30x40 ಅಳತೆಯ ಈಸ್ಟ್ ಫೇಸ್ ಮನೆ ಬೋರ್‌ವೆಲ್ 3 ಬೆಡ್ ರೂಂ ಅಟ್ಯಾಚಡ್ ಬಾತ್ ರೂಂ, ಫುಲ್ ಫರ್ನಿಷಡ್ 2 ಅಂತಸ್ತಿನ ಹೊಸ ಮನೆ ಮಾರಾಟಕ್ಕಿದೆ. ನಂಜುಂಡಸ್ವಾಮಿ ಹೆಚ್.ಎಸ್. (ಮಾಜಿ ಸೈನಿಕರು)

9483862050, 7829779070

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು ಪಂಡಿತ್ ಶ್ರೀ ಎಸ್. ರಾಜು

ಮೊ: 99022 39655

ಇವರು ಕೇರಳದ ಮಡಯಿಕಾವು ಶ್ರೀರಾಜರಾಜೇಶ್ವರಿ, ಭದ್ರಕಾಳಿ ಶ್ರೀ ಭಗವತಿ, ಶಕ್ತಿಯಿಂದ, ಅಕಪೂಜಾ, ಗುರು, ಕರಿಂಕಳಸ, ತವಪಲಿದೀಪಾ ರಕ್ತ ಪುಷ್ಪಾಂಜಲಿ ಮತ್ತು ಕೊಳ್ಳೇಗಾಲದ ಚೌಡಿ, ಭೂತರಾಯ, ಅಗೋಚರ, ಕಾಟೇರಿ, ಪ್ರಯೋಗದಿಂದ ಸ್ತ್ರೀ–ಪುರುಷ ಪ್ರೇಮ, ದಾಂಪತ್ಯ, ಸಮಸ್ಯೆ, ವ್ಯಾಪಾರ, ಸಂತಾನ, ಮದುವೆ, ಸಾಲಬಾಧೆ, ಶತ್ರುಸಂಹಾರ, ವಿದೇಶ ಪ್ರಯಾಣ, ರಾಜಕೀಯ ಇನ್ನೂ ಯಾವುದೇ ಗುಪ್ತಸಮಸ್ಯೆಗಳಿಗೆ ಮೇಲಿನ ಪೂಜಾ ಶಕ್ತಿಯಿಂದ 2 ದಿನದಲ್ಲಿ ಪರಿಹಾರ ಶತಃಸಿದ್ಧ.

ಖಾಯಂ ಮನೆಯ ವಿಳಾಸ : ರೂ.ನಂ.9, 2ನೇ ಮಹಡಿ, KSRTC ಸಿಟಿ ಬಸ್ ಸ್ಟಾಂಡ್ ಬಿಲ್ಡಿಂಗ್. ಕೆ.ಆರ್.ಸರ್ಕಲ್, ಮೈಸೂರು

SITE FOR SALE

40x60 E/F 60 feet road, Vishwa Pragna Layout Bogadi Road.

8050821108

Rental Agreement

45x60 commercial site on 60 ft. road for sale in KBL Gardenia Layout. Attached to Vijayanagar 4th Stage. Total 2630 sq.ft. 4750 per sq.ft. Price: 1.15 Crore.

8884616461 | 8792235466

For Sale

1) Site 40x60 W/F 40 ft. Road good location @ Vijayanagar, 4th Stage, 2nd Phase, Mysore.
2) Land 34 guntas Mysore-Bangalore highway road in Ganjam, Srirangapatna.
For more details contact:

9845311775

ಸೈಟು ಮಾರಾಟಕ್ಕಿದೆ

30x40 N/F, 30x50 E/F ಸುವರ್ಣನಗರ, ಬೋಗಾದಿ, ಗದ್ದಿಗೆ ರಸ್ತೆ.

9945779947
9742421313

WANTED

1. Computer Operator
2. Accountant (Tally Prime)
(Minimum 2 Year Experience)
(Attractive Salary with ESI & EPF)
#17/2, 1st Floor, 5th Main, 8th Cross, Saraswathipuram, Mysore

Mob: 91646 08888 / 98442 99888

ಹೊಸ ಮನೆ ಮಾರಾಟಕ್ಕಿದೆ

1236 SQ ನಲ್ಲಿ ಕಟ್ಟಿರುವ N/E Corner, 4 ಅಂತಸ್ತಿನ ಅದಕ್ಕೆ ಹೊಂದಿಕೊಂಡಿರುವ ಒಂದು ಅಂಗಡಿ. ಮಧುವನ ಲೇಔಟ್ ಶ್ರೀರಾಂಪುರ, ಮೈಸೂರು

9945118999

ಅಡುಗೆ ಭಟ್ಟರು ಬೇಕಾಗಿದ್ದಾರೆ

ಸೌತ್ ಇಂಡಿಯನ್ ಕುಕ್ ಹೋಟೆಲ್‌ಗೆ ಬೇಕಾಗಿದ್ದಾರೆ. ಸಂಬಳ: 20000 ರಿಂದ 30000, ಸಂಪರ್ಕಿಸಿ

9900944748 | 9535744143

ಅಡುಗೆ ಮತ್ತು ಮನೆ ಕೆಲಸ ಮಾಡಲು ಬೇಕಾಗಿದ್ದಾರೆ

ಸಂಬಳ: 8000 (ಮಹಿಳೆಯರಿಗೆ ಆದ್ಯತೆ) 4th Stage, Vijayanagara, Mysore. Mob:

7975269652

ರೂಂ ಬಾಯ್ಸ್

ಮಡಿಕೇರಿ ಸಮೀಪದ ಎಸ್ಟೇಟ್ ಹೋಂಸ್ಟೇ / ಎಸ್ಟೇಟ್ ಅಲ್ಲಿ ಕೆಲಸ ಮಾಡಲು ಪುರುಷರು / ಕುಟುಂಬ ಬೇಕಾಗಿದ್ದಾರೆ. ವೇತನದೊಂದಿಗೆ ವಸತಿ, ಊಟದ ವ್ಯವಸ್ಥೆ ಇರುತ್ತದೆ. ಆಸಕ್ತರು ಸಂಪರ್ಕಿಸಿ:

9448048829

ಸೈಟು ಬೇಕಾಗಿದೆ

ವರುಣ ಬಸವೇಶ್ವರ ಲೇಔಟ್ JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ.

9844436672

ಸುವರ್ಣಾವಕಾಶ

ಪ್ರಸಿದ್ಧ ಶೋರೂ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ ಯುವಕರು ಮತ್ತು ಯುವತಿಯರು 22000 salary. 100% ಗ್ಯಾರಂಟಿ ಕೆಲಸ.

9482369816 / 9482360136

SITE FOR SALE

30x40 East face, VRL ಲೇಔಟ್, ಹೆಚ್.ಡಿ. ಕೋಟೆ ರಸ್ತೆ, ಚಿತ್ರವನ ರೆಸಾರ್ಟ್ ಹಿಂಭಾಗ MUDA Approved Rate: Rs. 22.50 Lakh.

Mob: 8217786985

SITE FOR SALE

30x40 site is available for sale in J Cube Palacia and Gateway Mysore Layout, opposite to Manipal Hospital. Attached to Mysore Ring Road. Price 5500 per sq.ft.

8884616461 | 8073300783

HOUSE FOR SALE

20x30 single floor MUDA allotment North facing Vijayanagar 4th Stage, 2nd Phase, Mysore. Contact:

9449090047 / 9591566927

ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ

ವಿಜಯನಗರ 2ನೇ ಹಂತ, ಮೈಸೂರು. 3ನೇ ಫ್ಲೋರ್ ಮನೆ ವಯಸ್ಸು 45 ವರ್ಷದೊಳಗೆ

Call: 9663599999

ವಸತಿ ಲಭ್ಯವಿದೆ.

ಬೇಕಾಗಿದ್ದಾರೆ

ಸಪ್ಲೈಯರ್ ಹಾಗೂ ಕುಕ್, ಅಸಿಸ್ಟೆಂಟ್ ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ: ಸರಸ್ವತಿಪುರಂ, ಮೈಸೂರು.

Mob: 9738405038

SITE FOR SALE

ಮಡಿಕೇರಿ ರೈ ಬಾಡಗ, FMC ಕಾಲೇಜು ಹಿಂಭಾಗ, 10 ಸೆಂಟ್ DC conversion and 9 ಸೆಂಟು non-conversion ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ:

9880076279 / 8277297379

WANTED

ಮೈಸೂರಿನ ಹೆಸರಾಂತ ಎಂಎನ್‌ಸಿ ಕಂಪನಿಗಳಿಗೆ 7th, 10th, PUC, ITI, Diploma, any Degree pass or fail ಆದವರಿಗೆ Packing, helper, security, delivery, data entry, admin, HR, Receptionist, Cashier, Billing ಇತ್ಯಾದಿ ಕೆಲಸಗಳಿಗೆ ಯುವಕ, ಯುವತಿಯರು ಬೇಕಾಗಿದ್ದಾರೆ. ESI + PF +OT ಸೇರಿ ಸಂಬಳ 20,000 ರಿಂದ 48,000.

9901816285 / 991641959

2nd PUC COMMERCE

Excellent coaching for students in Accounts, Statistics, Economics, Business Studies, English etc. only 6 to 8 students per batch. 100% individual attention for each student. Low fees for poor students. Contact: Professor

Mob: 9901932751

WANTED SITE OR HOUSE

Looking area Saraswathpuram and Kuvempunagar, 30x40 or 40x60 Residential & semi commercial. Contact:

Mob: 8050511839

Brokers Excuse. Contact directly owner

ಮನೆ ಬಾಡಿಗೆಗೆ ಇದೆ

#10392, 20x30, 2 BHK, ವಿಜಯನಗರ, 4ನೇ ಹಂತ, 2ನೇ ಘಟ್ಟ, ಮೈಸೂರು.

9591068676 / 9900795423

Brokers Excuse

ಮನೆ ಭೋಗ್ಯಕ್ಕೆ

30x40, 5ನೇ ಕ್ರಾಸ್, ಜನತಾನಗರ, ಮೈಸೂರು, ಗಣೇಶ ಭಂಡಾರ್ ಸಮೀಪ, ಗ್ರೌಂಡ್ ಫ್ಲೋರ್, ಎರಡು ರೂಂಗಳು, ಸೋಲಾರ್, ಗೀಸರ್, ಚಿಮಣಿ, ಕಾರ್ ಪಾರ್ಕಿಂಗ್ ಎಲ್ಲಾ ಸವಲತ್ತುಗಳುಳ್ಳ ಮನೆ. ಸಂಪರ್ಕಿಸಿ: ಮಾಲೀಕರು

Mob: 9880813250

ಹೊಸ ಮನೆ ಮಾರಾಟಕ್ಕಿದೆ

30x40 G/F- 2 BHK & 1st - 2 BHK. ದಟ್ಟಗಳ್ಳಿ, ಸೋಮನಾಥನಗರ.

Mob: 9901676619

HOUSE FOR SALE

20x30 Duplex, fully furnished, Mahamane Circle, Dattagalli.
Brokers Excuse

7760981659 / 8317413199

SITE FOR SALE

No. 16, 43x50, South Face, S.M.P. Developers Rs. 2900/- sq.ft. ಅನ್ನಪೂರ್ಣೇಶ್ವರಿ ಬಡಾವಣೆ, ಚಿಕ್ಕಳ್ಳಿ ಹತ್ತಿರ, ಮೈಸೂರು.

Mob: 9148433444

ತಕ್ಷಣ ಬೇಕಾಗಿದ್ದಾರೆ

ಕಡಕೊಳ ಮತ್ತು ತಾಂಡ್ಯ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು ಸಂಬಳ: 28,000. ವಯೋಮಿತಿ: 45ವರ್ಷದ ಒಳಗೆ. ESI and PF ಸೌಲಭ್ಯವಿರುತ್ತದೆ. ಸಂಪರ್ಕಿಸಿ:

9620667819 / 9620777819

ಕೆಲಸಕ್ಕೆ ಬೇಕಾಗಿದ್ದಾರೆ

ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕ್ಯಾಡರ್ ಕಂಪನಿಗೆ 18 ರಿಂದ 40 ವರ್ಷ ಒಳಗಿನ 7ನೇ ತರಗತಿ ಮೇಲ್ಪಟ್ಟು ಓದಿರುವ ಪುರುಷರು ಮತ್ತು ಸ್ತ್ರೀಯರು ಕೆಲಸಕ್ಕೆ ಬೇಕಾಗಿದ್ದಾರೆ .ಸಂಬಳ 13773/-. ಕೆಲಸದ ಸಮಯ ಬೆಳಿಗ್ಗೆ 7 ರಿಂದ 3. ಜನರಲ್ ಶಿಫ್ಟ್ 9 ರಿಂದ 5 ಗಂಟೆ.

ಸಂಪರ್ಕಿಸಿ : ಕೋಮಲ್ ಎಂಟರ್‌ಪ್ರೈಸಸ್
ಪ್ರಕಾಶ್ 8971460235
ಸುಮಿತ್ರ 7892725603

ಬೇಕಾಗಿದ್ದಾರೆ

ವಿಜಯನಗರ 2ನೇ / 4ನೇ ಹಂತ ಮತ್ತು ವರುಣಾ ಗ್ರಾಮದ ಬಳಿಯ ಪ್ರಸಿದ್ಧ ರೆಸಾರ್ಟ್‌ಗೆ ಸೆಕ್ಯೂರಿಟಿ ಗಾರ್ಡ್‌ಗಳು, ಉಚಿತ ವಸತಿ / ಊಟ / ESI / PF.

9242406261 / 9686422400

SITE REQUIRED

In Roopa Nagar or Judicial Layout.

Mob: 9739967819

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಪ್ಲಾಸ್ಟಿಕ್ ಸಹಿತ ಪ್ರಸಾದ ತಿಂದು ಹರಕೆ ಗೂಳಿ ಸಾವು ಶಂಕೆ

ಯುವ ಬ್ರಿಗೇಡ್‌ನಿಂದ ಅಂತ್ಯ ಸಂಸ್ಕಾರ

ನಂಜನಗೂಡು, ಏ.18– ಜಾತ್ರೆಯ ದಿನ ನಂಜುಂಡೇಶ್ವರನ ಹರಕೆ ಗೂಳಿ ಪ್ಲಾಸ್ಟಿಕ್ ಸಹಿತ ಪ್ರಸಾದ ತಿಂದು ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದ್ದು, ಯುವ ಬ್ರಿಗೇಡ್ ಕಾರ್ಯಕರ್ತರು ಗೂಳಿಗೆ ಸಾಂಪ್ರದಾಯಿಕವಾಗಿ ಅಂತ್ಯ ಸಂಸ್ಕಾರ ನೆರವೇರಿಸಿದರು.

ನಂಜುಂಡೇಶ್ವರನಿಗೆ ಹರಿಕೆ ಹೊತ್ತು ಬಿಡುವ ಗೂಳಿಗೆ ನಂಜನಗೂಡು ಜನ ನಂಜುಂಡಪ್ಪನ ಗೂಳಿ ಅಂತಲೇ ಕರೆಯಲಿದ್ದು, ತಮ್ಮ ಅಂಗಡಿ, ಮನೆಗಳ ಬಳಿಗೆ ಬರುವ ಈ ನಂಜುಂಡಪ್ಪನ ಗೂಳಿಗಳಿಗೆ ಹಣ್ಣು, ಬೆಲ್ಲ, ಕಲಗಚ್ಚು, ನೀರು, ತರಕಾರಿ ಎಲ್ಲಾ ಕೊಟ್ಟು ಸಾಕುತ್ತಾರೆ. ಕೆಲವರಂತು ಪ್ರತಿನಿತ್ಯ ಹೊಟ್ಟು, ಬೂಸ ಕೊಟ್ಟು ಸಲಹುತ್ತಾರೆ. ಈ ರೀತಿ ಭರ್ಜರಿಯಾಗಿ ಪೊಗರ್ ದಸ್ತಾಗಿ ಬೆಳೆದಿದ್ದ ಈ ಕೆಂದಗೂಳಿ ಇಂದು ಏಕಾಏಕಿ



ಯುವ ಬ್ರಿಗೇಡ್ ಕಾರ್ಯಕರ್ತರು ಗೂಳಿ ಅಂತ್ಯಕ್ರಿಯೆ ನಡೆಸಿದರು.

ಸಾವನ್ನಪ್ಪಿದೆ. ಕಾರಣ ಗೂಳಿ ಶ್ರೀಕಂಠೇಶ್ವರ ಜಾತ್ರೆ ತೇರು, ತೆಪ್ಪದ ದಿನ ಪ್ಲಾಸ್ಟಿಕ್ ಸಹಿತ ಬಿಸಾಡಿದ ಪ್ರಸಾದ ತಿಂದು ಜೀರ್ಣವಾಗದೇ ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದೆ.

ದೇವರ ಗೂಳಿ ಸಾವಿನ ವಿಚಾರ ತಿಳಿದ ಯುವ ಬ್ರಿಗೇಡ್ ಮಿತ್ರರು ಗೂಳಿಯ ಕಳೇಬರವನ್ನು ಕಪಿಲಾ ನದಿ ತೀರಕ್ಕೆ ಸಾಗಿಸಿ ಸಾಂಪ್ರದಾಯಿಕವಾಗಿ ಅಂತ್ಯ ಸಂಸ್ಕಾರ ನೆರವೇರಿಸಿದರು. ಸಾರ್ವಜನಿಕರು ಸಹ ಈ ವೇಳೆ ಉಪಸ್ಥಿತರಿದ್ದರು. ಯುವ ಬ್ರಿಗೇಡ್ ಮನವಿ ಮೇರೆಗೆ ನಗರಸಭೆ ಆಡಳಿತ ಜೆಸಿಬಿ ಕಳುಹಿಸಿ ಅಂತ್ಯಸಂಸ್ಕಾರಕ್ಕೆ ನೆರವು ನೀಡಿತು.

ಯುವ ಬ್ರಿಗೇಡ್ ದಕ್ಷಿಣ ಭಾರತ ಸಂಚಾಲಕ ಚಂದ್ರಶೇಖರ್ ಮಾತನಾಡಿ, ಆಹಾರದ ಜೊತೆಗೆ ಪ್ಲಾಸ್ಟಿಕ್ ಅನ್ನು ಎಸೆದ ಪರಿಣಾಮ ಮೂಕ ಜೀವಿಗಳು ಅದನ್ನು ತಿಂದು ಸಾವನ್ನಪ್ಪುತ್ತಿವೆ ಆದ್ದರಿಂದ ನಂಜನಗೂಡಿಗೆ ಭೇಟಿ ನೀಡುವ ಭಕ್ತಾದಿಗಳು ಪ್ಲಾಸ್ಟಿಕ್ ಬಳಕೆ ಮಾಡಬಾರದು ಎಂದು ಮನವಿ ಮಾಡಿದರು.

ಅಪ್ರಾಪ್ತೆ ಮೇಲೆ ಅತ್ಯಾಚಾರ: ವೃದ್ಧನ ಬಂಧನ

ಹೆಚ್.ಡಿ.ಕೋಟೆ, ಏ.18– ಅಪ್ರಾಪ್ತ ಬಾಲಕಿ ಮೇಲೆ ವೃದ್ಧ ಅತ್ಯಾಚಾರ ಎಸಗಿರುವ ಘಟನೆ ತಾಲೂಕಿನ ಹಂಪಾಪುರದಲ್ಲಿ ನಡೆದಿದ್ದು, ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ಗ್ರಾಮದ ನಿವಾಸಿ ಮರೀಗೌಡ(65) ಸುಮಾರು 12 ವರ್ಷದ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಆರೋಪಿ. ಬಾಲಕಿ ಪೋಷಕರು ಮೈಸೂರಿನಲ್ಲಿ ವಾಸವಿದ್ದು, ಬೇಸಿಗೆ ರಜೆ ಹಿನ್ನಲೆಯಲ್ಲಿ ಪುತ್ರಿಯೊಂದಿಗೆ ಗ್ರಾಮಕ್ಕೆ ಆಗಮಿಸಿದ್ದರು. ಏ.11ರಂದು ಮರೀಗೌಡ ಮನೆಯಲ್ಲಿ ಯಾರೂ ಇಲ್ಲದ ವೇಳೆ ಬಾಲಕಿಯನ್ನು ಪುಸಲಾಯಿಸಿ ತನ್ನ ಮನೆಗೆ ಕರೆದೊಯ್ದು ಅತ್ಯಾಚಾರವೆಸಗಿದ್ದಾನೆ. ಬಳಿಕ ಬಾಲಕಿ ಹೊಟ್ಟೆ ನೋವಿನಿಂದ ಬಳಲುತ್ತಿದ್ದನ್ನು ಗಮನಿಸಿದ ಪೋಷಕರು ವಿಚಾರಿಸಿದಾಗ ಬಾಲಕಿ ನಡೆದ ವಿಷಯ ತಿಳಿಸಿದ್ದಾಳೆ ಎನ್ನಲಾಗಿದೆ. ಇದರಿಂದ ಆತಂಕಗೊಂಡ ಬಾಲಕಿ ತಂದೆ, ತಾಯಿ ಮರ್ಯಾದೆ ಕಾಪಾಡಿಕೊಳ್ಳಲು ಯಾರ ಬಳಿಯೂ ಈ ವಿಷಯ ಹೇಳಿರಲಿಲ್ಲ. ಆದರೆ ಸಂತ್ರಸ್ತ ಬಾಲಕಿ ಮರೀಗೌಡನನ್ನು ಕಂಡಾಗಲೆಲ್ಲಾ ಆತನನ್ನು ಸಾಯಿಸುವಂತೆ ಹೇಳುತ್ತಿದ್ದರಿಂದ ಅಕ್ಕಪಕ್ಕದ ಮನೆಯವರು ಸೂಕ್ಷ್ಮವಾಗಿ ಘಟನೆ ಬಗ್ಗೆ ತಿಳಿದು, ಬಳಿಕ ಪೋಷಕರೊಂದಿಗೆ ತೆರಳಿ ಹೆಚ್.ಡಿ.ಕೋಟೆ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಇನ್ಸ್‌ಪೆಕ್ಟರ್ ಗಂಗಾಧರ್ ಹಾಗೂ ಸಿಬ್ಬಂದಿ ಶುಕ್ರವಾರ ಬೆಳಗ್ಗೆ ಹಾಲು ತರಲು ಮನೆಯಿಂದ ಹೊರಗೆ ಬಂದ ಮರೀಗೌಡನನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾತಿ, ಧರ್ಮದ ಹೆಸರಲ್ಲಿ ಛಿದ್ರ ಛಿದ್ರಗೊಂಡಿದ್ದ

ಸಮಾಜ ಒಂದಾಗಿಸಲು ಯತ್ನಿಸಿದ ನಾರಾಯಣಗುರು

ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್



ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಉದ್ಘಾಟಿಸಿದರು.

ಸರಗೂರು, ಏ.18– ನಾರಾಯಣ ಗುರುಗಳು ಒಂದೇ ದೇವರು, ಒಂದೇ ಜಾತಿ, ಒಂದೇ ಮತ ಎಂದು ದೇಶದಲ್ಲಿ ಜಾತಿ, ಧರ್ಮದ ಹೆಸರಲ್ಲಿ ಛಿದ್ರ ಛಿದ್ರವಾಗಿರುವ ಸಮಾಜವನ್ನು ಒಂದುಗೂಡಿಸಲು ಪ್ರಯತ್ನಿಸಿದರು ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ತಿಳಿಸಿದರು.

ಪಟ್ಟಣದ ಆರ್ಯ ಈಡಿಗ ಸಮಾಜದಿಂದ ನಡೆದ ಕೋದಂಡರಾಮ ದೇವಸ್ಥಾನದ ಬೆಳ್ಳಿಹಬ್ಬ, ಶ್ರೀರಾಮ ನವಮಿಯ 25ನೇ ವರ್ಧಂತಿ ಮಹೋತ್ಸವ ಹಾಗೂ ನಾರಾಯಣ ಗುರು ಸಮುದಾಯ ಭವನದ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸಮುದಾಯದ 26 ಪಂಗಡದವರಿಗೆ ದೇವಸ್ಥಾನ ಪ್ರವೇಶ ಇರಲಿಲ್ಲ. ಶೂದ್ರರಿಗೂ ಕಿಚ್ಚನ್ನು ಹಚ್ಚಿದವರು ನಾರಾಯಣ ಗುರುಗಳು ಎಂದರು.

ಸ್ವಾತಂತ್ರ್ಯ ಬರುವ ಮೊದಲು ಯಾವುದೇ ಸಂವಿಧಾನ ಇರಲಿಲ್ಲ. ಈ ವೇಳೆ ಜಾತಿ ಹೆಸರಲ್ಲಿ ಮೇಲು ಕೀಳೆಂಬ ಭಾವನೆ ಆಳವಾಗಿದ್ದ ಸಂದರ್ಭ ನಾವೆಲ್ಲರೂ ಒಂದೇ ಎನ್ನುವ ಭಾವನೆ ಬಿತ್ತಿದವರು ನಾರಾಯಣ ಗುರುಗಳು ಎಂದರು. ನಾರಾಯಣ ಗುರು ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ 50 ಲಕ್ಷ ಅನುದಾನ ನೀಡುವಂತೆ ಶಿವರಾಜ ತಂಗಡಗಿ ಅವರಿಗೆ ಶಾಸಕ ಅನಿಲ್ ಮೂಲಕ ಮನವಿ ಸಲ್ಲಿಸುವಂತೆ ತಿಳಿಸಿದ ಅವರು, ನಾನು ಹಾಗೂ ನನ್ನ ಬೆಂಗಳೂರಿನ ಸ್ನೇಹಿತರ ಮೂಲಕ ಸಮುದಾಯ ಭವನ ನಿರ್ಮಾಣಕ್ಕೆ ಧನಸಹಾಯ ಮಾಡುತ್ತೇನೆ ಎಂದು ಭರವಸೆ ನೀಡಿದರು.

ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ. ಶಿಕ್ಷಣವೇ ದೊಡ್ಡ ಆಸ್ತಿ. ಹೀಗಾಗಿ ಒಂದು ಹೊತ್ತು ಊಟ ಬಿಟ್ಟು ಮಕ್ಕಳಿಗೆ ಶಿಕ್ಷಣ ಕೊಡಿಸಿದರೇ, ನಮ್ಮ ಸಮುದಾಯ, ಕುಟುಂಬ ಮುಂದೆ ಬರಲು ಸಾಧ್ಯವಾಗುತ್ತದೆ ಎಂದರು.

ಸೋಲೂರು ಆರ್ಯ ಈಡಿಗ ಮಹಾ ಸಂಸ್ಥಾನ ಮಠದ ಪೀಠಾಧಿಪತಿ ವಿಖ್ಯಾತನಂದ ಸ್ವಾಮೀಜಿ ಮಾತನಾಡಿ, ನಮ್ಮಲ್ಲಿ ಪ್ರತಿಭೆಗಳಿವೆ. ಅವರಿಗೆ ಸೂಕ್ತ ಮಾರ್ಗದರ್ಶನ ವಿಲ್ಲ. ಇದನ್ನು ಕಂಡ ನಾವು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಯೋಜನೆ ಮಾಡಿದ್ದೇವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್, ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಎನ್.ಧ್ರುವರಾಜ್, ಉದ್ಯಮಿ ಕೆಗೋಪಿ, ಪಿ.ಶ್ರೀನಿವಾಸ್, ಎಂ.ಜಿ.ಗುರುರಾಜ್, ಕಾಂತರಾಜ್, ಗುಲ್ಬರ್ಗಾ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಾಲರಾಜ್, ತಾಲೂಕು ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಸ್.ಎನ್.ನಾಗರಾಜು, ಗೌರವಾಧ್ಯಕ್ಷ ಎಸ್.ಕೆ.ನಾಗರಾಜು, ಉಪಾಧ್ಯಕ್ಷ ಎಸ್.ಎನ್.ನಾಗರಾಜು, ಕಾರ್ಯದರ್ಶಿ ಎಸ್.ಎಂ.ಶ್ರೀನಿವಾಸ್, ಖಜಾಂಚಿ ಟಿ.ಕರಿಯಪ್ಪ, ಯಜಮಾನರಾದ ವೆಂಕಟೇಶ್, ಪಪಂ ಅಧ್ಯಕ್ಷೆ ರಾಧಿಕಾ, ಸದಸ್ಯರಾದ ನೂರಾಳಸ್ವಾಮಿ, ಚೈತ್ರ, ಗ್ರಾಪಂ ಮಾಜಿ ಸದಸ್ಯ ರಂಗನಾಥ್, ಆರ್ಯ ಈಡಿಗರ ಯುವಕ ಸಂಘ ಅಧ್ಯಕ್ಷ ಗಣೇಶ್, ಯುವ ವೇದಿಕೆ ಸಂಘದ ಅಧ್ಯಕ್ಷ ಎಸ್.ಟಿ.ರಾಜು, ಮುಖಂಡರಾದ ರಾಮಚಂದ್ರ, ನಾಗರಾಜು, ರವಿಗೌಡ್ರು, ಎಸ್.ಎಸ್.ಲೋಕನಾಥ್, ಎಸ್.ಎನ್.ಕೃಷ್ಣಪ್ಪ, ರಂಗಪ್ಪ, ರಾಜಣ್ಣ, ನರಸಿಂಹ, ಶ್ರೀನಿವಾಸ್, ಮಹೇಶ್, ವೆಂಕಟಾಚಲ, ಕಾಳಿಪ್ರಸಾದ್, ಮಂಜು, ಅಶ್ವತ್, ಕೃಷ್ಣಪ್ಪ, ವೆಂಕಟರಾಜು, ಮಹದೇವ್, ಜ್ಯೋತೀಶ್ ಕುಮಾರ್, ಬಾಲಕೃಷ್ಣ, ರವಿ, ಲಕ್ಷ್ಮಣ, ಲೋಡರ್ಸ್ ಸಂಘದ ಮಾಜಿ ಶ್ರೀನಿವಾಸ್, ಶ್ರೀನಾಥ್, ದಾಸೇಗೌಡ, ಮಹಿಳಾ ಸಮಾಜದ ಎಲ್ಲಾ ಸಂಘದವರು ಭಾಗವಹಿಸಿದ್ದರು.

> ಸಮುದಾಯ ಭವನಕ್ಕೆ ಈಗಾಗಲೇ 10 ಲಕ್ಷ ಅನುದಾನ ನೀಡಲಾಗಿದೆ. ಇನ್ನು ನಾನು ಹಾಗೂ ಹರಿಪ್ರಸಾದ್ ಜೊತೆಯಾಗಿ ಸಚಿವ ಶಿವರಾಜ್ ತಂಗಡಿ ಅವರನ್ನು ಭೇಟಿ ಮಾಡಿ 50 ಲಕ್ಷ ಅನುದಾನಕ್ಕೆ ಮನವಿ ಸಲ್ಲಿಸುತ್ತೇವೆ. ಮೈಸೂರಿನಲ್ಲಿರುವ ನನ್ನ ಸ್ನೇಹಿತರಿಂದ ಸಮುದಾಯ ಭವನಕ್ಕೆ ಹಣ ಕೊಡಿಸುವ ಪ್ರಯತ್ನ ಮಾಡುತ್ತೇನೆ. ಭವನ ಉದ್ಘಾಟನೆ ವೇಳೆ ಹರಿಪ್ರಸಾದ್ ಅವರನ್ನು ಕರೆದು ಉದ್ಘಾಟಿಸಬೇಕು.
> – ಅನಿಲ್, ಶಾಸಕ.

ಅಂಬೇಡ್ಕರ್ ಜಗತ್ತಿನ ಮಹಾಜ್ಞಾನಿ: ಶಾಸಕ ಜಿಟಿಡಿ

ಜಯಪುರ, ಏ.18– ಇಡೀ ಪ್ರಪಂಚದಲ್ಲಿ ಅಂಬೇಡ್ಕರ್ ಅವರಂತಹ ಮಹಾನ್ ವ್ಯಕ್ತಿ ಮತ್ತೊಬ್ಬರಿಲ್ಲ. ಅವರು ಜಗತ್ತಿನ ಮಹಾಜ್ಞಾನಿ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಗ್ರಾಮದ ಶಾಂತಿನಗರ ಬಡಾವಣೆಯಲ್ಲಿ ಜೈ ಭೀಮ್ ಸಂಘದಿಂದ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿಯಲ್ಲಿ ಅಂಬೇಡ್ಕರ್ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಅಂಬೇಡ್ಕರ್ ಹೆಸರೇ ಒಂದು ಬಹುದೊಡ್ಡ ಗ್ರಂಥ ಭಂಡಾರ. ಅವರ ಬಗ್ಗೆ ಪೂರ್ಣವಾಗಿ ಅಧ್ಯಯನ ಮಾಡಿರುವವರು ಯಾರು ಇಲ್ಲ. ಅವರು ಸಂವಿಧಾನ ರಚಿಸಿಕೊಟ್ಟ ದೇವರು. ಅವರ ಸಂವಿಧಾನದಡಿ ಈ ದೇಶ ಸಾಗುತ್ತಿದೆ. 4 ಗೋಡೆ ಒಳಗೆ ಇರಬೇಕಾದ ಮಹಿಳೆಯರಿಗೆ ಸ್ವಾತಂತ್ರ್ಯ, ಸಮಾನತೆ ನೀಡಿದರು. ಇದರಿಂದಾಗಿ ಪ್ರಸ್ತುತ ಮಹಿಳೆಯರು



ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿದರು.

ರಾಷ್ಟ್ರಪತಿ, ಪ್ರಧಾನ ಮಂತ್ರಿ, ಮುಖ್ಯಮಂತ್ರಿ ಹುದ್ದೆಗಳನ್ನು ಅಲಂಕರಿಸಿದ್ದಾರೆ. ದೇಶದ ಕಟ್ಟ ಕಡೆಯ ಶೋಷಿತ, ದಲಿತ, ದಮನಿತರಿಗೆ ಮತದಾನದ ಹಕ್ಕು ನೀಡಿದ್ದಾರೆ. ಧ್ವನಿ ಇಲ್ಲದ ಸಮುದಾಯಗಳಿಗೆ ಬೆಳಕಾಗಿದ್ದಾರೆ. ಅವರು ಬರೆದ ಸಂವಿಧಾನದಿಂದ ನಾನು ಶಾಸಕ ಆಗಿದ್ದೇನೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾರೆ. ಮೋದಿ ಪ್ರಧಾನಿ ಆಗಿದ್ದರೆ, ದ್ರೌಪದಿ ಮುರ್ಮು ರಾಷ್ಟ್ರಪತಿಗಳು ಆಗಿದ್ದಾರೆ. ಅವರು ಬರೆದಿರುವ ಸಂವಿಧಾನ ಯಾವುದೋ ಒಂದು ಸಮುದಾಯ ಅಥವಾ ಜಾತಿಗೆ ಸೀಮಿತವಾಗಿಲ್ಲ. ಅಂಬೇಡ್ಕರ್ ಅವರನ್ನು ವಿರೋಧಿಸುತ್ತಿದ್ದವರು ಇಂದು ಅಂಬೇಡ್ಕರ್ ರಚಿಸಿದ ಸಂವಿಧಾನ ಒಪ್ಪಿಕೊಂಡಿದ್ದಾರೆ ಎಂದರು.

ಜೈ ಭೀಮ್ ಸಂಘದಿಂದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಗ್ರಾಮದ ರಂಗಸ್ವಾಮಿ ಅವರ ಪುತ್ರಿ ಆರ್.ದೀಪಾ ಅವರಿಗೆ ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು. ತಾಪಂ ಮಾಜಿ ಸದಸ್ಯ ಸುರೇಶ್ ಕುಮಾರ್, ಸಮಾಜ ಸೇವಕ ಎಸ್.ಶ್ರೀಕಾಂತ್, ಸ್ವಾಮಿ, ಜಯಪುರ ಗ್ರಾಪಂ ಅಧ್ಯಕ್ಷ ಮಹದೇವಯ್ಯ, ಸದಸ್ಯರಾದ ಎಂ.ನಾಗರಾಜು, ಪಿಡಿಓ ಬಸವಣ್ಣ, ಡಿ.ಚಂದ್ರಶೇಖರ, ಡೇರಿ ಅಧ್ಯಕ್ಷ ಮೂಗನಾಯಕ, ಜವರನಾಯಕ, ರೇವಣ್ಣ, ಕೆಂಪರಾಜು, ಅಬ್ದುಲ್ ಮುಲಾಲಿಬ್, ರಂಗಸ್ವಾಮಿ, ಮಹೇಶ್, ಸಣ್ಣಪ್ಪ, ಮಂಜುನಾಥ್, ಶಿವರಾಜ್, ನಾಗೇಶ್ ಮತ್ತು ಜೈ ಭೀಮ್ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಧ್ವನಿ ಇಲ್ಲದ ಸಮಾಜಕ್ಕೆ ಧ್ವನಿಯಾದವರು ಡಾ.ಅಂಬೇಡ್ಕರ್



ಕಂಪಲಾಪುರದಲ್ಲಿ ಅಂಬೇಡ್ಕರ್ ಜಯಂತಿ ನಡೆಯಿತು.

ಕಂಪಲಾಪುರ, ಏ.18– ಧ್ವನಿ ಇಲ್ಲದ ಸಮಾಜಕ್ಕೆ ಧ್ವನಿಯಾದವರು ಡಾ.ಅಂಬೇಡ್ಕರ್ ಎಂದು ಪಿರಿಯಾಪಟ್ಟಣ ಡಾ.ಅಂಬೇಡ್ಕರ್ ವಸತಿ ಶಾಲೆ ಶಿಕ್ಷಕ ಪುಟ್ಟಮಾದಯ್ಯ ಕಿವಿಮಾತು ಹೇಳಿದರು.

ಗ್ರಾಮದ ಜೈ ಭೀಮ್ ಯುವಸೇನೆ ವತಿಯಿಂದ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿಯಲ್ಲಿ ಮಾತನಾಡಿದ ಅವರು, ನಾವು ಸುರಕ್ಷಿತವಾಗಿ ಬದುಕು ಸಾಗಿಸುತ್ತಿದ್ದೇವೆ ಎಂದರೆ ಅದಕ್ಕೆ ಮೂಲ ಕಾರಣ ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನ. ಅದು ನಮಗೆಲ್ಲಾ ವರದಾನವಾಗಿದೆ. 1916ರಲ್ಲಿ ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯ ಅರ್ಥಶಾಸ್ತ್ರ ವಿಷಯಕ್ಕೆ ಅಂಬೇಡ್ಕರ್ ಅವರಿಗೆ ಪಿಹೆಚ್‌ಡಿ ನೀಡಿತು. ಅದನ್ನು ಪಡೆದ ವಿಶ್ವದ ಮೊದಲ ಮಹಾನ್ ಪುರುಷ ಅಂಬೇಡ್ಕರ್ ಎಂದರು. ಇಂದು ಸರ್ಕಾರಿ ಕಚೇರಿಗಳಲ್ಲೇ ಜಾತಿ ವ್ಯವಸ್ಥೆ ತಾಂಡವವಾಡುತ್ತಿದೆ. ಅದು ತೊಲಗಬೇಕು. ಆದ್ದರಿಂದ ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು ಎಂದರು.

ಪತ್ರಕರ್ತ ಸದಾಶಿವ ಮಾತನಾಡಿದರು. ಗ್ರಾಪಂ ಮಾಜಿ ಅಧ್ಯಕ್ಷೆ ಜಾನಕಿ, ಯಜಮಾನ್ ತಮ್ಮಯ್ಯ, ಚಿಕ್ಕ ಯಜಮಾನ್ ವೈರಮುಡಿ, ರಾಮು, ರವಿ, ಜಯರಾಮ್, ರೋಹಿತ್, ಜೈ ಭೀಮ್ ಯುವಸೇನೆ ಗೌರವಾಧ್ಯಕ್ಷ ಗಣೇಶ್, ಅಧ್ಯಕ್ಷ ಕಾರ್ತಿಕ್, ಉಪಾಧ್ಯಕ್ಷ ಚಂದನ್ ಪ್ರಸಾದ್ ಸೇರಿದಂತೆ ಎಲ್ಲಾ ಪದಾಧಿಕಾರಿಗಳು, ಗ್ರಾಮಸ್ಥರು ಹಾಜರಿದ್ದರು. ಸಂಜೆ ಭವ್ಯ ಮಂಟಪದಲ್ಲಿ ಅಂಬೇಡ್ಕರ್ ಬೃಹತ್ ಭಾವಚಿತ್ರವನ್ನಿಟ್ಟು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಡಿಜೆ ಸೌಂಡ್‌ಗೆ ಎಲ್ಲಾ ಪದಾಧಿಕಾರಿಗಳು ಹಾಗೂ ಮಹಿಳೆಯರು ಹೆಜ್ಜೆಹಾಕಿ ಸಂಭ್ರಮಿಸಿದರು.

ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದಗೆ ಸನ್ಮಾನ



ಎಂಎಲ್‌ಸಿ ವಿವೇಕಾನಂದ ಅವರನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಏ.18– ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ (ಅಕ್ಯಾಡೆಮಿಕ್ ಕೌನ್ಸಿಲ್) ಸದಸ್ಯರನ್ನಾಗಿ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರನ್ನು ರಾಜ್ಯ ಸರ್ಕಾರ ನಾಮ ನಿರ್ದೇಶನ ಮಾಡಿರುವ ಹಿನ್ನೆಲೆಯಲ್ಲಿ ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ಮತ್ತು ವಿವೇಕಾನಂದ ಅವರ ಅಭಿಮಾನಿಗಳು ಅಭಿನಂದಿಸಿದರು.

ಪಟ್ಟಣದ ನವನಗರ ಅರ್ಬನ್ ಬ್ಯಾಂಕ್ ಪ್ರಧಾನ ಕಚೇರಿಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಎಂಎಲ್‌ಸಿ ಕೆ.ವಿವೇಕಾನಂದ, ರಾಜ್ಯ ಸರ್ಕಾರ ನನ್ನನ್ನು ಮುಂದಿನ 3 ವರ್ಷದ ಅವಧಿಗೆ ಮೈಸೂರು ವಿಶ್ವ ವಿದ್ಯಾಲಯಕ್ಕೆ ನಾಮ ನಿರ್ದೇಶನ ಮಾಡಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಈ ಹುದ್ದೆ ಬಹಳ ಜವಾಬ್ದಾರಿಯುತವಾಗಿದ್ದು, ಇದನ್ನು ಸಮರ್ಥವಾಗಿ ನಿಭಾಯಿಸಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸುತ್ತೇನೆ ಎಂದರು.

ಈ ವೇಳೆ ತಂಬಾಕು ಮಹಾಮಂಡಳಿ ನಿವೃತ್ತ ಅಧಿಕಾರಿ ಕೆ.ಎನ್.ದಿನೇಶ್, ಪುರಸಭೆ ಸದಸ್ಯ ಕೆ.ಎಲ್.ಜಗದೀಶ್, ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಮುಖಂಡರಾದ ನಂಜುಂಡೇಗೌಡ, ಬಂಕ್ ಚಂದ್ರು, ಕೃಷ್ಣಶೆಟ್ಟಿ, ರಂಗಣ್ಣ, ಡಾ.ದೀಪು, ಶಿಕ್ಷಕರಾದ ಪುರುಷೋತ್ತಮ್, ಮಧು ಸೇರಿದಂತೆ ಇನ್ನಿತರರಿದ್ದರು.

ಜೆಸಿಬಿ ಮಾಲೀಕರ ಸಂಘದ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ತಿ.ನರಸೀಪುರ, ಏ.18– ತಾಲೂಕಿನ ಹೆಳವರಹುಂಡಿ ಗ್ರಾಮದಲ್ಲಿ ನಡೆದ ಜೆಸಿಬಿ ಮಾಲೀಕರ ಸಭೆಯಲ್ಲಿ ಅಧ್ಯಕ್ಷರಾಗಿ ಬಿ.ರುದ್ರಸ್ವಾಮಿ, ಉಪಾಧ್ಯಕ್ಷರಾಗಿ ಶಿವಲಂಕಾರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕಾರ್ಯಕಾರಿ ಸಮಿತಿ ಕಾರ್ಯದರ್ಶಿಯಾಗಿ ಹೆಚ್.ಪಿ.ಹರೀಶ್, ಖಜಾಂಚಿ ಎಂ.ಬಸವರಾಜು, ಸಹ ಕಾರ್ಯದರ್ಶಿಯಾಗಿ ಜಿ.ಶಿವನಾಗ ಅವರನ್ನು ಆಯ್ಕೆ ಮಾಡಲಾಯಿತು. ನಿರ್ದೇಶಕರಾಗಿ ಕೆ.ಎಂ.ಲೋಕೇಶ್, ಆರ್.ಮಹದೇವಸ್ವಾಮಿ ಹಾಗೂ ಎಂ.ರವಿಕುಮಾರ್ ಆಯ್ಕೆಯಾದರು.

ನೂತನ ಅಧ್ಯಕ್ಷ ಬಿ.ರುದ್ರಸ್ವಾಮಿ ಮಾತನಾಡಿ, ಜೆಸಿಬಿ ಮಾಲೀಕರ ಹಿತದೃಷ್ಟಿಯಿಂದ ಸಂಘ ರಚಿಸಲಾಗಿದ್ದು, ಸಂಘದ ಸದಸ್ಯರು, ಮಾಲೀಕರು ಯಾವುದೇ ಸಮಸ್ಯೆಗಳಿದ್ದರೂ ಆಡಳಿತ ಮಂಡಳಿ ಸದಸ್ಯರೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಿಕೊಳ್ಳಬಹುದಾಗಿದೆ ಎಂದರು.



ಜೆಸಿಬಿ ಮಾಲೀಕರ ಸಂಘದ ಅಧ್ಯಕ್ಷ, ಉಪಾಧ್ಯಕ್ಷರನ್ನು ಆಯ್ಕೆ ಮಾಡಲಾಯಿತು.

ಜೆಸಿಬಿ ಯಂತ್ರಕ್ಕೆ ಈ ಹಿಂದೆ ಒಂದು ಗಂಟೆಗೆ 700 ರೂ. ಬಾಡಿಗೆ ಇದ್ದು, ಈಗ 1 ಸಾವಿರ ರೂ. ನಿಗದಿಪಡಿಸಲಾಗಿದೆ. ಆದರೆ ಕೆಲವರು ಹೊರಗಿನಿಂದ ಬಂದವರು ಕಡಿಮೆ ಬೆಲೆ ಪಡೆಯುವ ಮೂಲಕ ನಮ್ಮಲ್ಲಿ ಒಡಕು ಮೂಡಿಸಲು ಯತ್ನಿಸುತ್ತಿದ್ದಾರೆ. ಸಂಘದಲ್ಲಿ ಒಗ್ಗಟ್ಟು ಮೂಡಿಸಲು ಎಲ್ಲರೂ ಸಂಘಟಿತರಾಗಿ ಕೆಲಸ ಮಾಡುವ ಅವಶ್ಯಕತೆ ಇದೆ. ಹಾಗಾಗಿ ಎಲ್ಲಾ ಜೆಸಿಬಿ ಮಾಲೀಕರು ಸಂಘದಲ್ಲಿ ಸದಸ್ಯತ್ವ ಪಡೆದುಕೊಳ್ಳಬೇಕೆಂದು ಮನವಿ ಮಾಡಿದರು. ಈ ವೇಳೆ ಜೆಸಿಬಿ ಮಾಲೀಕರು, ಸದಸ್ಯರು ಹಾಜರಿದ್ದರು.

ರಸ್ತೆ ಬದಿ ಅಪರಿಚಿತ ಶವ ಪತ್ತೆ

ಜಯಪುರ, ಏ.18– ಮೈಸೂರು ತಾಲೂಕು ಜಯಪುರ ಹೋಬಳಿ ಗುಮಚನಹಳ್ಳಿ ಗ್ರಾಮದ ಸಮೀಪ ರಸ್ತೆ ಬದಿ ಅಪರಿಚಿತ ವ್ಯಕ್ತಿಯ ಅರೆಬೆಂದ ಶವ ಶುಕ್ರವಾರ ಪತ್ತೆಯಾಗಿದೆ. ಸುಮಾರು 35 ವರ್ಷದ ಪುರುಷನ ಶವವನ್ನು ಪೆಟ್ರೋಲ್ ಹಾಕಿ ಸುಡಲಾಗಿದ್ದು, ಶ್ವಾನದಳ ಮತ್ತು ಬೆರಳಚ್ಚು ತಜ್ಞರು ಸ್ಥಳಕ್ಕಾಗಮಿಸಿ ಪರಿಶೀಲಿಸಿದರು. ತನಿಖೆ ಮುಂದುವರೆಸಿದ್ದೇವೆ. ಸುಟ್ಟು ಕರಕಲಾದ ಶವವನ್ನು ಮೈಸೂರು ಮೆಡಿಕಲ್ ಕಾಲೇಜು ಶವಗಾರದಲ್ಲಿ ಇರಿಸಲಾಗಿದೆ ಎಂದು ಜಯಪುರ ಪೊಲೀಸರು ಮಾಹಿತಿ ನೀಡಿದರು. ಸ್ಥಳಕ್ಕೆ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್, ಡಿವೈಎಸ್ಪಿ ಕರೀಂ ರಾವತರ್, ಸಿಪಿಐ ಶಿವನಂಜಶೆಟ್ಟಿ, ಜಯಪುರ ಠಾಣಾ ಎಸ್‌ಐ ಪ್ರಕಾಶ್ ಎತ್ತಿನಮನಿ, ಅಪರಾಧ ವಿಭಾಗದ ಎಸ್‌ಐ ಹೇಮಲತಾ ಭೇಟಿ ನೀಡಿ ಪರಿಶೀಲಿಸಿದರು.

ರಾಜೀನಾಮೆ ವಾಪಸ್ ಪಡೆದ ಪುರಸಭಾಧ್ಯಕ್ಷೆ ವಸಂತ

ಉಪಾಧ್ಯಕ್ಷರು ರಾಜೀನಾಮೆ ಕೊಟ್ಟ ಮರುಕ್ಷಣ ನಾನು ರಾಜೀನಾಮೆ ನೀಡುವೆ: ಸ್ಪಷ್ಟನೆ

ತಿ.ನರಸೀಪುರ, ಏ.18– ಪ್ರಸಕ್ತ ರಾಜಕೀಯ ಬೆಳವಣಿಗೆಯಲ್ಲಿ ಕಾಂಗ್ರೆಸ್ ವರಿಷ್ಠರ ಸೂಚನೆ ಕಡೆಗಣಿಸಿ ಪುರಸಭೆ ಅಧ್ಯಕ್ಷ ಸ್ಥಾನಕ್ಕೆ ಸಲ್ಲಿಸಿದ್ದ ರಾಜೀನಾಮೆಯನ್ನು ವಸಂತ ಬಿ.ಶ್ರೀಕಂಠ ವಾಪಸ್ ಪಡೆದು ಅಚ್ಚರಿ ಮೂಡಿಸಿದ್ದಾರೆ.

ಪಕ್ಷದ ವರಿಷ್ಠರು ಹಾಗೂ ಮುಖಂಡರ ಉಪಸ್ಥಿತಿಯಲ್ಲಿ ಈ ಹಿಂದೆ ನಡೆದ ಸಭೆಯಲ್ಲಿ ಪುರಸಭೆ ಅಧ್ಯಕ್ಷ ಸ್ಥಾನ ವಸಂತ ಬಿ.ಶ್ರೀಕಂಠ ಅವರಿಗೆ ದೊರಕಿತ್ತು. ಮಾತುಕತೆ ವೇಳೆ ವಸಂತ ಶ್ರೀಕಂಠ 6 ತಿಂಗಳ ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ, ಮತ್ತೊಬ್ಬರಿಗೆ ಅವಕಾಶ ಕಲ್ಪಿಸಿಕೊಡುವ ತೀರ್ಮಾನ ಮಾಡಲಾಗಿತ್ತು. ಸ್ವತಃ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಮಾತುಕತೆ ವೇಳೆ ಉಪಸ್ಥಿತರಿದ್ದು, ಒಪ್ಪಂದಕ್ಕೆ ಸಾಕ್ಷಿಯಾಗಿದ್ದರು. 6 ತಿಂಗಳ ನಂತರದ ಅವಧಿಯನ್ನು 10ನೇ ವಾರ್ಡ್‌ನ ಸದಸ್ಯೆ ಮಹದೇವಮ್ಮ ಅವರಿಗೆ ಬಿಟ್ಟು ಕೊಡಲು ತೀರ್ಮಾನಿಸಲಾಗಿತ್ತು.

ಅದರಂತೆ ಅಧ್ಯಕ್ಷೆ ವಸಂತ ಬಿ.ಶ್ರೀಕಂಠ ಅವರು ತಮ್ಮ 6 ತಿಂಗಳ ಆಡಳಿತಾವಧಿ ಪೂರೈಸಿ ಉಪವಿಭಾಗಾಧಿಕಾರಿ ರಕ್ಷಿತ್ ಅವರಿಗೆ ತಮ್ಮ ರಾಜೀನಾಮೆ ಸಲ್ಲಿಸಿ ತಮ್ಮ ಮಾತು ಉಳಿಸಿಕೊಂಡಿದ್ದರು. ಆದರೆ ನಂತರ ನಡೆದ ರಾಜಕೀಯ ಬೆಳವಣಿಗೆಯಲ್ಲಿ ರಾಜೀನಾಮೆ ಅಂಗೀಕಾರವಾಗುವ ಹಿಂದಿನ ದಿನ ತಮ್ಮ ರಾಜೀನಾಮೆ



ಪುರಸಭೆ ಅಧ್ಯಕ್ಷೆ ವಸಂತ ರಾಜೀನಾಮೆಯನ್ನು ವಾಪಸ್ ಪಡೆದರು.

ವಾಪಸ್ ಪಡೆಯುವ ಮೂಲಕ ಅಚ್ಚರಿ ಮೂಡಿಸಿದ್ದು, ಕಾಂಗ್ರೆಸ್ ವರಿಷ್ಠರ ಮಾತಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲದಂತಾಗಿದೆ. ಸ್ವತಃ ಎಂಎಲ್‌ಸಿ ಡಾ.ಯತೀಂದ್ರ ಅವರೇ ರಾಜೀನಾಮೆ ಸಲ್ಲಿಸುವಂತೆ ಸೂಚಿಸಿದ್ದರೂ ರಾಜೀನಾಮೆ ಕೊಟ್ಟು ಮತ್ತೆ ಹಿಂಪಡೆದ ಅಧ್ಯಕ್ಷರ ನಡೆ ಅಚ್ಚರಿ ಮೂಡಿಸಿದೆ. ಮೂಲಗಳ ಪ್ರಕಾರ 10ನೇ ವಾರ್ಡ್ ಸದಸ್ಯೆ ಮಹದೇವಮ್ಮ ಅವರಿಗೆ ಅಧ್ಯಕ್ಷ ಸ್ಥಾನ ತಪ್ಪಿಸಬೇಕೆಂಬುದು ರಾಜೀನಾಮೆ ವಾಪಸ್ ಪಡೆದಿರುವ ಹಿಂದಿನ ಉದ್ದೇಶವಾಗಿದೆ ಎಂಬ ವಿಶ್ಲೇಷಣೆ ಕೇಳಿ ಬರುತ್ತಿದೆ.

> ಪಕ್ಷದ ಹೈ ಕಮಾಂಡ್ ನಿರ್ಧಾರಕ್ಕೆ ನಾನು ಈಗಲೂ ಬದ್ಧ. ಈ ಹಿಂದೆ ನಡೆದ ಮಾತುಕತೆಯಂತೆ ಉಪಾಧ್ಯಕ್ಷರೂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಅವರು ರಾಜೀನಾಮೆ ಸಲ್ಲಿಸಿದ ಮರುಕ್ಷಣವೇ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲು ನಾನು ಸಿದ್ಧ.
> –ವಸಂತ ಬಿ.ಶ್ರೀಕಂಠ, ಪುರಸಭೆ ಅಧ್ಯಕ್ಷೆ.

ಒಟ್ಟಾರೆ ಪಕ್ಷದ ವರಿಷ್ಠರ ಆದೇಶದ ನಂತರವೂ ಅಧ್ಯಕ್ಷ ಸ್ಥಾನಕ್ಕೆ ನೀಡಿದ್ದ ರಾಜೀನಾಮೆಯನ್ನು ವಸಂತ ಶ್ರೀಕಂಠ ಹಿಂಪಡೆದಿರುವುದು ಅಚ್ಚರಿಯೊಂದಿಗೆ ಕುತೂಹಲಕ್ಕೆ ಕಾರಣವಾಗಿದೆ.

ಉಪಾಧ್ಯಕ್ಷರೂ ರಾಜೀನಾಮೆ ನೀಡಿಲ್ಲ: ವರಿಷ್ಠ ಆದೇಶ ಪಾಲನೆ ಮಾಡದೇ ವಸಂತ ಅವರು ಅಧ್ಯಕ್ಷ ಸ್ಥಾನಕ್ಕೆ ನೀಡಿದ್ದ ರಾಜೀನಾಮೆ ಹಿಂಪಡೆದಿದ್ದರೆ, ಮತ್ತೊಂದೆಡೆ ಉಪಾಧ್ಯಕ್ಷೆ ರಾಜೇಶ್ವರಿ ಎಂ.ರಾಘವೇಂದ್ರ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸದೇ ತಟಸ್ಥ ನೀತಿ ಅನುಸರಿಸುತ್ತಿರುವುದು ಮತ್ತಷ್ಟು ಕುತೂಹಲಕ್ಕೆ ಕಾರಣವಾಗಿದೆ.

ಎಂಎಲ್‌ಸಿ ಡಾ.ಯತೀಂದ್ರ ಸೇರಿದಂತೆ ಸಂಸದ ಸುನೀಲ್ ಬೋಸ್ ಸಹ ರಾಜೀನಾಮೆ ನೀಡುವಂತೆ ಉಪಾಧ್ಯಕ್ಷರಿಗೆ ಸೂಚನೆ ನೀಡಿದ್ದರೂ ರಾಜೀನಾಮೆ ಸಲ್ಲಿಸದ ಉಪಾಧ್ಯಕ್ಷರ ನಡೆ ಹಿಂದೆ ಪ್ರಭಾರ ಅಧ್ಯಕ್ಷ ಸ್ಥಾನದ ನೆರಳಿದೆ. ಅಲ್ಲದೇ ತಮಗೆ ಪ್ರಭಾರ ಅಧ್ಯಕ್ಷ ಸ್ಥಾನ ಕಲ್ಪಿಸಿಕೊಡುವಂತೆ ಉಪಾಧ್ಯಕ್ಷರು ಸಂಸದರಲ್ಲಿ ಬೇಡಿಕೆ ಇಟ್ಟಿದ್ದಾರೆನ್ನಲಾಗಿದೆ. ಅಧ್ಯಕ್ಷರು ರಾಜೀನಾಮೆ ನೀಡಿದರೆ ಪ್ರಭಾರ ಅಧ್ಯಕ್ಷ ಸ್ಥಾನ ಉಪಾಧ್ಯಕ್ಷರ ಪಾಲಾಗಲಿದ್ದು, ಅದಕ್ಕಾಗಿ ರಾಜೇಶ್ವರಿ ರಾಜೀನಾಮೆ ಸಲ್ಲಿಸದೇ ಕಾದು ನೋಡುವ ತಂತ್ರಕ್ಕೆ ಮೋರೆ ಹೋಗಿದ್ದಾರೆನ್ನಲಾಗಿದೆ. ಉಪಾಧ್ಯಕ್ಷೆ ರಾಜೇಶ್ವರಿ ಅವರು ಪ್ರಭಾರ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟರೆ, ಕೊಟ್ಟ ರಾಜೀನಾಮೆ ವಾಪಸ್ ಪಡೆದಿರುವ ಅಧ್ಯಕ್ಷೆ ವಸಂತ ಅವರು ಉಪಾಧ್ಯಕ್ಷೆ ರಾಜೀನಾಮೆ ನೀಡಿದಲ್ಲಿ ಮತ್ತೆ ತಾವು ರಾಜೀನಾಮೆ ಸಲ್ಲಿಸುವುದಾಗಿ ಹೇಳುತ್ತಿದ್ದಾರೆ.

ಒಟ್ಟಾರೆ ಪಕ್ಷದ ವರಿಷ್ಠರ ಮಾತಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲದಂತಾಗಿದ್ದು, ವೈಯಕ್ತಿಕ ಪ್ರತಿಷ್ಠೆ ಇಲ್ಲಿ ಸ್ಥಾನ ಪಡೆದುಕೊಂಡಂತಿದೆ. ಪುರಸಭೆ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸದ ವಸಂತ ಹಾಗೂ ರಾಜೇಶ್ವರಿ ನಡೆಗೆ ಪಕ್ಷದ ವರಿಷ್ಠರು ಯಾವ ಕ್ರಮ ತೆಗೆದುಕೊಳ್ಳಲಿದ್ದಾರೆ. ಅಧ್ಯಕ್ಷ ಸ್ಥಾನ ಮಹದೇವಮ್ಮ ಹಾಗೂ ಉಪಾಧ್ಯಕ್ಷ ಸ್ಥಾನ ರೂಪ ಕರಿಯಪ್ಪರಿಗೆ ದೊರಕಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಐಪಿಎಲ್ ಹಂಗಾಮ

ಕಳಪೆ ಬ್ಯಾಟಿಂಗ್: ತವರಲ್ಲಿ ಆರ್‌ಸಿಬಿಗೆ ಹ್ಯಾಟ್ರಿಕ್ ಸೋಲು

ಮಳೆ ಬಾಧಿತ ಪಂದ್ಯದಲ್ಲಿ ಪಂಜಾಬ್‌ಗೆ ಭರ್ಜರಿ ಜಯ



ಬೆಂಗಳೂರು, ಏ.18– ಮಳೆ ಬಾಧಿತ ಪಂದ್ಯದಲ್ಲಿ ಬ್ಯಾಟ್ಸ್‌ಮನ್‌ಗಳ ಕಳಪೆ ಬ್ಯಾಟಿಂಗ್‌ಗೆ ಬೆಲೆತೆತ್ತ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪಂಜಾಬ್ ಕಿಂಗ್ಸ್ ವಿರುದ್ಧ 5 ವಿಕೆಟ್‌ಗಳ ಸೋಲು ಅನುಭವಿಸಿದೆ. ಆ ಮೂಲಕ ಪ್ರಸಕ್ತ ಸಾಲಿನಲ್ಲಿ ಆರ್‌ಸಿಬಿ ತವರಿನಲ್ಲಿ ಹ್ಯಾಟ್ರಿಕ್ ಸೋಲು ಅನುಭವಿಸಿದರೇ, ಅತ್ತ ಭರ್ಜರಿ ಗೆಲುವು ದಾಖಲಿಸಿದ ಪಂಜಾಬ್ 10 ಅಂಕಗಳೊಂದಿಗೆ 2ನೇ ಸ್ಥಾನ ಅಲಂಕರಿಸಿದೆ.

ಪಂದ್ಯ ಎಂದಿನಂತೆ ಸಂಜೆ 7.30ಕ್ಕೆ ಆರಂಭವಾಗಬೇಕಿತ್ತು. ಆದರೆ ಸಂಜೆ ಸುರಿದ ಮಳೆಯಿಂದಾಗಿ ಪಂದ್ಯ 9.30ಕ್ಕೆ ಆರಂಭವಾಗಿ ಉಭಯ ತಂಡಗಳಿಗೂ 14 ಓವರ್‌ಗಳನ್ನು ನಿಗದಿಪಡಿಸಲಾಯಿತು.

ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯಾವಳಿಯ 34ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ 14 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 95 ರನ್ ಗಳಿಸಲಷ್ಟೇ ಶಕ್ತವಾಯಿತು. 96 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪಂಜಾಬ್ 12.1 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 98 ರನ್ ಗಳಿಸುವ ಮೂಲಕ ಇನ್ನೂ 11 ಎಸೆತಗಳು ಬಾಕಿ ಇರುವಂತೆಯೇ ಜಯ ಗಳಿಸಿತು.

ಇನ್ನಿಂಗ್ಸ್ ಆರಂಭದಿಂದಲೇ ಆರ್‌ಸಿಬಿ ಬ್ಯಾಟ್ಸ್‌ಮನ್‌ಗಳು ಪಂಜಾಬ್ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿ ರನ್ ಗಳಿಸಲು ಪರದಾಡಿದರು. ತಂಡದ ಪರ ನಾಯಕ ರಜತ್ ಪಾಟಿದಾರ್ 18 ಎಸೆತಗಳಲ್ಲಿ ತಲಾ 1 ಸಿಕ್ಸರ್, ಬೌಂಡರಿ ಒಳಗೊಂಡ 23 ರನ್, ಟೀಮ್ ಡೇವಿಡ್ 26 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್ ಒಳಗೊಂಡ 50 ರನ್ ಗಳಿಸಿ ಸಂಭ್ರಮಿಸಿದರು. ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಉಳಿದಂತೆ ಭುವನೇಶ್ವರ್ ಕುಮಾರ್ 8, ಲಿವಿಂಗ್ ಸ್ಟೋನ್, ಫಿಲ್ ಸಾಲ್ಟ್ ತಲಾ 4 ರನ್ ಗಳಿಸಿದರು. ಪಂಜಾಬ್ ಪರ ಅರ್ಶದೀಪ್ ಸಿಂಗ್, ಮಾರ್ಕೋ ಯಾನ್ಸನ್, ಚಹಲ್, ಹರ್‌ಪ್ರಿತ್ ಬ್ರಾರ್ ತಲಾ 2, ಜೇವಿಯರ್ ಬಾರ್ಟ್ಲೆಟ್ 1 ವಿಕೆಟ್ ಪಡೆದರು.

ನಂತರ ಬ್ಯಾಟಿಂಗ್ ಮಾಡಿದ ಪಂಜಾಬ್ ಪರ ಪ್ರಿಯಾಂಶ್ ಆರ್ಯ 16, ಪ್ರಭ್‌ಸಿಮ್ರಾನ್ ಸಿಂಗ್ 13, ಜೋಶ್ ಇಂಗ್ಲಿಸ್ 14, ನೇಹಲ್ ವಧೇರಾ 33 ರನ್ ಗಳಿಸಿದರು. ಆರ್‌ಸಿಬಿ ಪರ ಜೋಶ್ ಹ್ಯಾಸೆಲ್‌ವುಡ್ 3, ಭುವನೇಶ್ವರ್ ಕುಮಾರ್ 2 ವಿಕೆಟ್ ಪಡೆದರು. ಟೀಮ್ ಡೇವಿಡ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಡೆಲ್ಲಿ	6	5	1	0	10
ಪಂಜಾಬ್	7	5	2	0	10
ಗುಜರಾತ್	6	4	2	0	8
ಬೆಂಗಳೂರು	7	4	3	0	8
ಲಕ್ನೋ	7	4	3	0	8
ಕೋಲ್ಕತ್ತಾ	7	3	4	0	6
ಮುಂಬೈ	7	3	4	0	6
ರಾಜಸ್ಥಾನ್	7	2	5	0	4
ಹೈದರಾಬಾದ್	7	2	5	0	4
ಚೆನ್ನೈ	7	2	5	0	4

ಇಂದಿನ ಪಂದ್ಯಗಳು

ಗುಜರಾತ್ ಟೈಟಾನ್
V/S
ಡೆಲ್ಲಿ ಕ್ಯಾಪಿಟಲ್ಸ್
ಸಮಯ: ಮಧ್ಯಾಹ್ನ 3.30
ಸ್ಥಳ : ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್

ರಾಜಸ್ಥಾನ್ ರಾಯಲ್ಸ್
V/S
ಲಕ್ನೋ ಸೂಪರ್ ಜಯಂಟ್ಸ್
ಸಮಯ: ಸಂಜೆ 7.30
ಸ್ಥಳ : ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣ, ಜೈಪುರ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅರ್ಜುನ್ S/O ವೈಜಯಂತಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಒಡೆಲಾ–2 (ತೆ)	4 ಪ್ರದರ್ಶನಗಳು
ಗಾಯಿತ್ರಿ	
ವಿದ್ಯಾಪತಿ (ಕ)	4 ಪ್ರದರ್ಶನಗಳು
ರಾಜಕಮಲ್	
ಒಡೆಲಾ–2 (ತೆ)+ ಅರ್ಜುನ್ S/O ವೈಜಯಂತಿ (ತೆ)	2+2 ಪ್ರದರ್ಶನಗಳು
ಸಂಗಂ	
ವಾಮನ (ಕ)	4 ಪ್ರದರ್ಶನಗಳು
ಲಿಡೋ	
ಅಜ್ಞಾತವಾಸಿ (ಕ) ಜಾಟ್ (ಹಿಂ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಅಲಪ್ಪುಳ ಜಿಮ್ಖಾನ (ಮ): ಬೆ.10.20ಕ್ಕೆ, ಜಾಕ್ (ತೆ): ಮ.1.20ಕ್ಕೆ, ಸಂ.4.15ಕ್ಕೆ, ಅಜ್ಞಾತವಾಸಿ (ಕ): ರಾ.7.15ಕ್ಕೆ, ಬಜೂಕ (ಮ): ರಾ.9.55ಕ್ಕೆ.
ಸ್ಕ್ರೀನ್ 3	ದಿ ಅಮಚೂರ್ (ಇಂ): ಬೆ.10.40ಕ್ಕೆ, ರಾ.7.15ಕ್ಕೆ, ಅಲಪ್ಪುಳ ಜಿಮ್ಖಾನ (ಮ): ಮ.1.20ಕ್ಕೆ, ರಾ.10ಕ್ಕೆ ಜಾಟ್ (ಹಿಂ): ಸಂ.4.10ಕ್ಕೆ.
ಸ್ಕ್ರೀನ್ 4	ವಿದ್ಯಾಪತಿ (ಕ): ಬೆ.10.30ಕ್ಕೆ, ರಾ.7.05ಕ್ಕೆ, ವಾಮನ (ಕ): ಮ.1.20ಕ್ಕೆ, ಸಂ.4.15ಕ್ಕೆ, ಜಾಟ್ (ಹಿಂ): ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519


ಸ್ಕ್ರೀನ್ 1	ವಿದ್ಯಾಪತಿ (ಕ): ಬೆ.10.45ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ಮನದ ಕಡಲು (ಕ): ಮ.1.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 2	ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಸಂ.4ಕ್ಕೆ, ವಾಮನ (ಕ): ಮ.1.15ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ವಾಮನ (ಕ): ಬೆ.10.40ಕ್ಕೆ, ಸಂ.4.05ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಮ.1.20ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಎಂಪುರನ್ 2 (ಕ): ಮ.12.30ಕ್ಕೆ, ಬಜೂಕ (ಮ): ಮ.3.50ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬ್ರಾಹ್ಮಣ ಮಹಾಸಭಾ ನೂತನ ರಾಜ್ಯಾಧ್ಯಕ್ಷರಿಗೆ ಅಭಿನಂದನೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನೂತನ ರಾಜ್ಯಾಧ್ಯಕ್ಷ ಎಸ್.ರಘುನಾಥ್, ಹಿರಿಯ ಉಪಾಧ್ಯಕ್ಷ ಲಕ್ಷ್ಮಿ ಕಾಂತ್ ಅವರನ್ನು ಮೈಸೂರಿನ ವಿಪ್ರ ಮುಖಂಡ ಎನ್.ಎಂ. ನವೀನ್‌ಕುಮಾರ್ ಅಭಿನಂದಿಸಿದರು. ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿಕಟಪೂರ್ವ ಅಧ್ಯಕ್ಷ, ಹಾಲಿ ನಿರ್ದೇಶಕ ಸಿ.ವಿ.ಪಾರ್ಥಸಾರಥಿ, ಪಶ್ಚಿಮವಾಹಿನಿ ಶೇಷಾದ್ರಿ, ರಾಘವೇಂದ್ರ ಸೇವಾ ಟ್ರಸ್ಟ್ ಅಧ್ಯಕ್ಷ ವಾಸುದೇವಮೂರ್ತಿ, ಸತ್ಯನಾರಾಯಣ, ವಿಪ್ರ ಮುಖಂಡರಾದ ಪ್ರವೀಣ್‌ಕುಮಾರ್, ಗದಾಧರ್ ಮತ್ತಿತರರು ಉಪಸ್ಥಿತರಿದ್ದರು.

ಬೀರಿಹುಂಡಿ, ಜಟ್ಟಿಹುಂಡಿಯಲ್ಲಿ ರೇಬಿಸ್ ಲಸಿಕೆ ಕಾರ್ಯಕ್ರಮ

ಮೈಸೂರು:ಮೈಸೂರಿನ ಪೀಪಲ್ ಫಾರ್ ಅನಿಮಲ್(ಪಿಎಫ್‌ಎ) ಮತ್ತು ಬೆಂಗಳೂರಿನ ಅಕಲ್ವಿಯೋ ಟೆಕ್ನಾಲಜೀಸ್ ಪ್ರೈ.ಲಿಮಿಟೆಡ್ ಆಶ್ರಯದಲ್ಲಿ ಏ.19ರಂದು ಬೆಳಗ್ಗೆ 10.30ರಿಂದ ಸಂಜೆ 4 ಗಂಟೆವರೆಗೆ ಮೈಸೂರು ತಾಲೂಕು ಬೀರಿಹುಂಡಿ ಮತ್ತು ಜಟ್ಟಿಹುಂಡಿಯಲ್ಲಿ ಬೀದಿನಾಯಿಗಳಿಗೆ ರೇಬಿಸ್ ನಿಯಂತ್ರಣ ಲಸಿಕೆಯನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪಿಎಫ್‌ಎ ಪ್ರಕಟಣೆ ತಿಳಿಸಿದೆ.

ವಿಶ್ವ ಪಾರಂಪರಿಕ ದಿನ: ಮೈಸೂರಲ್ಲಿ ಪ್ರವಾಸಿಗರಿಗೆ ಸಿಹಿ, ಗುಲಾಬಿ ನೀಡಿ ಆತ್ಮೀಯ ಸ್ವಾಗತ



ವಿಶ್ವ ಪಾರಂಪರಿಕ ದಿನದ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಆವರಣದಲ್ಲಿ ಪ್ರವಾಸಿಗರಿಗೆ ಪ್ರಜ್ಞಾವಂತ ನಾಗರಿಕ ವೇದಿಕೆ ಕಾರ್ಯಕರ್ತರು ಮೈಸೂರು ಪಾಕ್ ಹಾಗೂ ಗುಲಾಬಿ ವಿತರಿಸಿ ಸ್ವಾಗತಿಸಿದರು.

ಮೈಸೂರು,ಏ.18(ಎಂಟಿವೈ)– ವಿಶ್ವ ಪಾರಂಪರಿಕ ದಿನದ ಹಿನ್ನೆಲೆಯಲ್ಲಿ ಮೈಸೂರು ಅರಮನೆ ವೀಕ್ಷಣೆಗಾಗಿ ಆಗಮಿಸಿದ ಪ್ರವಾಸಿಗರಿಗೆ ಪ್ರಜ್ಞಾವಂತ ನಾಗರಿಕ ವೇದಿಕೆ ಕಾರ್ಯಕರ್ತರು ಮೈಸೂರು ಪಾಕ್ ಹಾಗೂ ಗುಲಾಬಿ ವಿತರಿಸಿ, ಮೈಸೂರಿನ ಪಾರಂಪರಿಕ ಕಟ್ಟಡಗಳ ಬಗ್ಗೆ ಮಾಹಿತಿ ನೀಡಿದರು.

ಅರಮನೆಯ ವರಹಾ ದ್ವಾರದ ಬಳಿ ವೇದಿಕೆಯ ಕಾರ್ಯಕರ್ತರು ಅರಮನೆ ವೀಕ್ಷಿಸಲು ಆಗಮಿಸಿದ ವಿದೇಶಿ ಹಾಗೂ ದೇಶೀಯ ಪ್ರವಾಸಿಗರಿಗೆ ಆತ್ಮೀಯವಾಗಿ ಬರಮಾಡಿಕೊಂಡರು. ಅಲ್ಲದೆ, ಮೈಸೂರು ಅರಮನೆ ಸೇರಿದಂತೆ ವಿವಿಧ ಪ್ರಮುಖ ಪಾರಂಪರಿಕ ಕಟ್ಟಡಗಳ ಮಾಹಿತಿ ನೀಡಿದರು.

ಈ ವೇಳೆ ವೇದಿಕೆಯ ಮಹಿಳಾ ಘಟಕದ ಅಧ್ಯಕ್ಷೆ ನಾಗಮಣಿ, ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ವೀಕ್ಷಿಸುವಂತೆ ಪ್ರವಾಸಿಗರಿಗೆ ಮನವರಿಕೆ ಮಾಡಿಕೊಡುವ ಮೂಲಕ ವಿಶ್ವ ಪಾರಂಪರಿಕ ದಿನವನ್ನು ಸಾಂಪ್ರದಾಯಿಕವಾಗಿ ಆಚರಿಸಲಾಗಿದೆ ಎಂದರು.

ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ವಿಶ್ವ ಪಾರಂಪರಿಕ ದಿನಾಚರಣೆಯ ಹಿನ್ನೆಲೆಯಲ್ಲಿ ಮೈಸೂರಿಗೆ ಬರುವ ಪ್ರವಾಸಿಗರಿಗೆ ಮೈಸೂರಿನ ಪಾರಂಪರಿಕತೆಯ ಮಾಹಿತಿ ನೀಡಿ, ಪ್ರವಾಸಿಗರಿಗೆ ಸಿಹಿ ಹಾಗೂ ಗುಲಾಬಿ ನೀಡಲಾಗಿದೆ. ಇದರಿಂದ ಮೈಸೂರಿನ ಪ್ರವಾಸೋದ್ಯಮ ಇನ್ನಷ್ಟು ಅಭಿವೃದ್ಧಿಯಾಗುತ್ತದೆ. ಅಲ್ಲದೆ, ರಕ್ತದಾನದ ಕೊರತೆಯನ್ನು ನೀಗಿಸಲು ಪಾರಂಪರಿಕ ಕಟ್ಟಡದ ಬಳಿ ರಕ್ತದಾನದ ಬಗ್ಗೆ ಜಾಗೃತಿ ಮೂಡಿಸಲು ಫಲಕ ಅಳವಡಿಸಿ ರಕ್ತದಾನದ ಮಹತ್ವ ಹಾಗೂ ಅನಿವಾರ್ಯತೆ ಕುರಿತು ಜಾಗೃತಿ ಮೂಡಿಸಿದರೆ ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ನೆರವಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್, ದುರ್ಗಾ ಫೌಂಡೇಷನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಮುಖಂಡರಾದ ರವಿಚಂದ್ರ ದರ್ಶನ್ ಮೂರ್ತಿ, ರವಿ, ಯತೀಶ್ ಬಾಬು, ಉಮೇಶ್, ಸದಾಶಿವ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕೃಷ್ಣರಾಜ ಉಪವಿಭಾಗದಲ್ಲಿ ನಗರ ಪೊಲೀಸರಿಂದ ಜನಸಂಪರ್ಕ ಸಭೆ

ಹತ್ತು ಹಲವು ಸಮಸ್ಯೆ ಪ್ರಸ್ತಾಪಿಸಿದ ನಾಗರಿಕರು



ಮೈಸೂರಿನ ರಾಜೇಂದ್ರ ಕಲಾಮಂದಿರದಲ್ಲಿ ಜನಸಂಪರ್ಕ ಸಭೆ ಬಳಿಕ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಇನ್ನಿತರ ಅಧಿಕಾರಿಗಳು ಹಾಗೂ ಸಾರ್ವಜನಿಕರ ಗ್ರೂಪ್ ಫೋಟೋ ತೆಗೆಯಲಾಯಿತು.

ಮೈಸೂರು, ಏ.17– ಮೈಸೂರು ನಗರ ಪೊಲೀಸ್, ಕೃಷ್ಣರಾಜ ಉಪವಿಭಾಗ ವ್ಯಾಪ್ತಿಯ ಜನಸಂಪರ್ಕ ಸಭೆ ಗುರುವಾರ ನಡೆಯಿತು.

ಅಗ್ರಹಾರ ರಾಮಾನುಜ ರಸ್ತೆಯಲ್ಲಿರುವ ರಾಜೇಂದ್ರ ಕಲಾಮಂದಿರದಲ್ಲಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೃಷ್ಣರಾಜ ಉಪವಿಭಾಗದ ಎಲ್ಲಾ ಪೊಲೀಸ್ ಠಾಣೆಗಳ ಅಧಿಕಾರಿಗಳು ಹಾಗೂ ವಿವಿಧ ಬಡಾವಣೆಗಳ ನೂರಾರು ನಿವಾಸಿಗಳು ಹಾಜರಿದ್ದರು.

ಆನ್‌ಲೈನ್ ಜೂಜು ವ್ಯಾಪಕವಾಗಿದ್ದು, ಯುವ ಸಮುದಾಯವನ್ನು ಈ ದುಶ್ಚಟಕ್ಕೆ ಸೆಳೆಯಲಾಗುತ್ತಿದೆ. ರಸ್ತೆಗಳಲ್ಲಿ ಅಪಾಯಕಾರಿ ವ್ಹೀಲಿಂಗ್ ಮಾಡುವ ಪುಂಡರ ಹಾವಳಿ ಜಾಸ್ತಿಯಾಗಿದೆ. ಜೋರು ಮಳೆಯಲ್ಲೂ ಸಿಗ್ನಲ್ ಲೈಟ್ ಆಫ್ ಮಾಡದ ಕಾರಣ ದ್ವಿಚಕ್ರ ವಾಹನ ಸವಾರರಿಗೆ ತೊಂದರೆಯಾಗುವುದರ ಜೊತೆಗೆ ಸಂಚಾರವೂ ಅಧ್ವಾನವಾಗುತ್ತಿದೆ. ಕೆಲವು ಬಾರ್‌ಗಳು ತಡರಾತ್ರಿ 12 ಗಂಟೆವರೆಗೂ ತೆರೆದಿರುತ್ತಾರೆ. ಹೀಗೆ, ನಿವಾಸಿಗಳು ಹತ್ತು ಹಲವು ಸಮಸ್ಯೆಗಳನ್ನು ಸಭೆಯ ಮುಂದಿಟ್ಟರು.

ಕಳ್ಳತನ ಹಾಗೂ ಪುಂಡರ ಉಪಟಳವನ್ನು ನಿಯಂತ್ರಿಸಲು ರಾತ್ರಿ ವೇಳೆ ಪೊಲೀಸ್ ಗಸ್ತು ಹೆಚ್ಚಿಸಿ. ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳನ್ನು ತಡೆದು ಸ್ಥಳದಲ್ಲೇ ದಂಡ ವಿಧಿಸಲಾಗುತ್ತಿದೆ. ಇದರಿಂದ ತುರ್ತು ಕೆಲಸಕ್ಕೆ ಹೋಗುವವರ ಬಳಿ ಹಣವಿಲ್ಲದಿದ್ದರೆ ದಂಡ ಕಟ್ಟಲಾಗದೆ ಮತ್ತಷ್ಟು ಪೇಚಿಗೆ ಸಿಲುಕುತ್ತಾರೆ. ಇದರ ಬದಲು ವಾಹನ ಸವಾರರ ಮೊಬೈಲ್ ನಂಬರ್ ಪಡೆದು, ನಂತರ ನೋಟಿಸ್ ಕಳುಹಿಸಿ ದಂಡ ವಸೂಲಿ ಮಾಡುವ ಕ್ರಮ ವಹಿಸಬೇಕು ಎಂದು ಇದೇ ವೇಳೆ ಮನವಿ ಮಾಡಿದರು.

ಕಾನೂನು–ಸುವ್ಯವಸ್ಥೆ ಸಂಬಂಧ ಸಾರ್ವಜನಿಕರ ಅಭಿಪ್ರಾಯ, ಸಲಹೆ–ಸೂಚನೆಯನ್ನು ಆಲಿಸಿದ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ವ್ಹೀಲಿಂಗ್ ಮಾಡುವವರ ಫೋಟೋ ತೆಗೆದು ಹತ್ತಿರದ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಅಥವಾ ಎಸ್‌ಐಗೆ ಕಳುಹಿಸಿ, ದೂರುದಾರರ ಮಾಹಿತಿಯನ್ನು ಗೌಪ್ಯವಾಗಿಡುತ್ತೇವೆ. ನೀವು ತಿಳಿಸಿದ ಎಲ್ಲಾ ವಿಚಾರಗಳನ್ನೂ ನಮ್ಮ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ, ಸೂಕ್ತ ಕ್ರಮ ವಹಿಸಲಿದ್ದಾರೆ ಎಂದು ಭರವಸೆ ನೀಡಿದರು. ಡಿಸಿಪಿಗಳಾದ ಎಂ.ಮುತ್ತುರಾಜು, ಸುಂದರ್ ರಾಜ್, ಎಸಿಪಿಗಳು, ಇನ್ಸ್‌ಪೆಕ್ಟರ್‌ಗಳು, ಸಬ್‌ಇನ್ಸ್‌ಪೆಕ್ಟರ್‌ಗಳು ಹಾಜರಿದ್ದರು.

ಇಂದು ಗಂಧದಗುಡಿ ರಾಗ ಸಂಭ್ರಮ ಸಂಗೀತ ಕಾರ್ಯಕ್ರಮ

ಮೈಸೂರು, ಏ.18(ಜಿಎ)–ಡಾ.ರಾಜ್‌ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಅರುಣ ರಾಗ ಕ್ರಿಯೇಷನ್ಸ್ ವತಿಯಿಂದ ಏ.19ರಂದು ನಾದಬ್ರಹ್ಮ ಸಂಗೀತ ಸಭಾದಲ್ಲಿ ಗಂಧದಗುಡಿ ರಾಗ ಸಂಭ್ರಮ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕ್ರಿಯೇಷನ್ಸ್‌ನ ಅಧ್ಯಕ್ಷೆ ಡಾ.ರೇಖಾ ಅರುಣ್ ಈ ವಿಷಯ ತಿಳಿಸಿ, ಅಂದು ಸಂಜೆ 4.30ರಿಂದ ಡಾ.ರಾಜ್‌ಕುಮಾರ್, ಡಾ.ಪುನೀತ್ ರಾಜ್‌ಕುಮಾರ್, ಡಾ.ಶಿವರಾಜ್ ಕುಮಾರ್ ಚಿತ್ರಗಳ ರಾಗಸಂಭ್ರಮ ಚಲನಚಿತ್ರ ಗೀತೆಗಳ ಕರೋಕೆ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದ್ದು, ಸುಮಾರು 17 ಗಾಯಕರು 45 ಗೀತೆಗಳನ್ನು ಹಾಡಲಿದ್ದಾರೆ. ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಹಿರಿಯ ಪತ್ರಕರ್ತರ ಅಂಶಿ ಪ್ರಸನ್ನಕುಮಾರ್ ಇನ್ನಿತರರು ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಂಜುನಾಥ್, ಎನ್.ಗುರುರಾಜ್, ನಾರಾಯಣಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಏ.18– ಏಪ್ರಿಲ್ 19 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ 220/666/11 ಕೆ.ವಿ ವಾಜಮಂಗಲ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ. ಹಾರೋಹಳ್ಳಿ ಎನ್.ಜೆ.ವೈ ಮತ್ತು ಮೆಲ್ಲಹಳ್ಳಿ ಐ.ಪಿ ಫೀಡರ್‌ಗಳಲ್ಲಿ ಮಾದರಿ ಗ್ರಾಮ ಯೋಜನೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಹಾರೋಹಳ್ಳಿ, ಮೆಲ್ಲಹಳ್ಳಿ, ಹಲಗಯ್ಯನಹುಂಡಿ, ಹಳ್ಳಿಕೆರೆಹುಂಡಿ, ಶಿವಪುರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಿಗಳು ಸಹಕರಿಸಬೇಕೆಂದು ಸೆಸ್ಕ್ ಪ್ರಕಟಣೆಯಲ್ಲಿ ತಿಳಿಸಿದೆ.

ಮೈಸೂರಿಗೆ ಆಗಮಿಸಿದ ಬಸವಣ್ಣನವರ ಅನುಭವ ಮಂಟಪ ರಥ

ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ಸ್ವಾಗತ



ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಆಗಮಿಸಿದ ಅನುಭವ ಮಂಟಪ ರಥಕ್ಕೆ ಸ್ವಾಗತ ಕೋರಲಾಯಿತು.

ಮೈಸೂರು, ಏ.18(ಬಿಎಲ್‌ಯು)– ಬಾಗಲಕೋಟೆಯ ಕೂಡಲ ಸಂಗಮದಲ್ಲಿ ನಡೆಯುವ ಬಸವ ಜಯಂತಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಸಂಚರಿಸಲು ಬೆಂಗಳೂರಿನಿಂದ ಹೊರಟಿರುವ ಅನುಭವ ಮಂಟಪ ರಥ ಇಂದು ಮೈಸೂರಿಗೆ ಆಗಮಿಸಿತು.

ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿರುವ ಅನುಭವ ಮಂಟಪ ರಥ ಇಂದು ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಆಗಮಿಸಿದಾಗ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ಅವರು ಬಸವಣ್ಣನವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ರಥಕ್ಕೆ ಸ್ವಾಗತ ಕೋರಿದರು.

ಮೈಸೂರು ಸೇರಿದಂತೆ ರಾಜ್ಯಾದ್ಯಂತ ಸಂಚರಿಸಲಿರುವ ಅನುಭವ ಮಂಟಪ ರಥ ಏಪ್ರಿಲ್ 29 ರಂದು ಬಸವಣ್ಣನವರು ಐಕ್ಯವಾಗಿರುವ ಕೂಡಲ ಸಂಗಮ ಸ್ಥಳಕ್ಕೆ ತೆರಳಿ ಅಲ್ಲಿ ಸಮಾಪ್ತಿಯಾಗಲಿದೆ.

ಬಾಗಲಕೋಟೆಯಲ್ಲಿ ಬಸವ ಜಯಂತಿ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ. ಈ ಹಿನ್ನೆಲೆ ಅನುಭವ ಮಂಟಪದ ರಥದ ಮೂಲಕ ಬಸವಾದಿ ಶರಣರ ತತ್ವಾದರ್ಶಗಳನ್ನು ಜನರಿಗೆ ಮನದಟ್ಟು ಮಾಡಲಾಗುತ್ತಿದೆ. ಅನುಭವ ಮಂಟಪದ ಪರಿಕಲ್ಪನೆಯಂತೆ ಜಾತಿ, ಧರ್ಮದ ಭೇದವಿಲ್ಲದೆ ಸಮ ಸಮಾಜ ನಿರ್ಮಾಣಕ್ಕೆ ರಥದ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲಾಗುವುದು.

ಮೈಸೂರಿಗೆ ಆಗಮಿಸಿದ ಅನುಭವ ಮಂಟಪದಲ್ಲಿ ಪ್ರತಿಷ್ಠಾಪಿಸಿದ್ದ ಬಸವಣ್ಣನವರ ಪ್ರತಿಮೆಗೆ ಅಪರ ಜಿಲ್ಲಾಧಿಕಾರಿ ಶಿವರಾಜ್ ಅವರಲ್ಲದೆ ಕನ್ನಡ ಮತ್ತು ಸಂಸ್ಕೃತಿ ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಕರ್ನಾಟಕ ಕಾವಲು ಪಡೆ ಅಧ್ಯಕ್ಷ ಮೋಹನ್ ಕುಮಾರ್ ಗೌಡ, ಕನ್ನಡ ಪರ ಹೋರಾಟಗಾರ ಚಂದ್ರಶೇಖರ್ ಸೇರಿದಂತೆ ಹಲವರು ಹಾಜರಿದ್ದರು. ಮೈಸೂರಿಗೆ ಆಗಮಿಸಿದ್ದ ಅನುಭವ ಮಂಟಪ ರಥ ಚಾಮರಾಜನಗರದ ನಂತರ ಇತರೆ ಜಿಲ್ಲೆಗಳಿಗೆ ತೆರಳಿತು.

ವಕ್ಫ್ ತಿದ್ದುಪಡಿ ಕಾಯ್ದೆ ಸಂವಿಧಾನ ವಿರೋಧಿ; ನಮ್ಮದು ಅವಿರತ ಹೋರಾಟ

● ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಘೋಷಣೆ ● ರಾಜ್ಯ ಸರ್ಕಾರದ ಜಾತಿಗಣತಿ ವರದಿ ವೈಜ್ಞಾನಿಕ



ಮೈಸೂರು, ಏ.18(ಎಂಕೆ)– ವಕ್ಫ್ ತಿದ್ದುಪಡಿ ಕಾಯ್ದೆ ಸಂವಿಧಾನ ವಿರುದ್ಧವಾಗಿದ್ದು, ನಮ್ಮ ಹಕ್ಕುಗಳ ಉಲ್ಲಂಘನೆಯಾಗಿದೆ. ವಕ್ಫ್ ತಿದ್ದುಪಡಿ ಕಾಯ್ದೆ ವಿರುದ್ಧ ನಮ್ಮ ಹೋರಾಟ ಮುಂದುವರೆಯಲಿದೆ ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಹೇಳಿದರು.

ಮೈಸೂರಿನ ಬೆಂಗಳೂರು ರಸ್ತೆಯಲ್ಲಿರುವ ಮಿಲಾದ್ ಫಂಕ್ಷನ್ ಹಾಲ್‌ನಲ್ಲಿ ಗುರುವಾರ ಎಸ್‌ಡಿಪಿಐ(ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ) ವತಿಯಿಂದ ಆಯೋಜಿಸಿದ್ದ ಈದ್ ಸೌಹಾರ್ದ ಕೂಟದಲ್ಲಿ ಮಾತನಾಡಿದ ಅವರು, ವಕ್ಫ್ ತಿದ್ದುಪಡಿ ಕಾಯ್ದೆ ವಿರುದ್ಧ ಎಸ್‌ಡಿಪಿಐ ಶಾಂತಿಯುತ ಹೋರಾಟ ಮುಂದುವರೆಯಲಿದೆ. ಹಾಗೆಯೇ ರಾಜ್ಯ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ಜಾತಿ ಜನಗಣತಿ ವೈಜ್ಞಾನಿಕವಾಗಿದೆ ಎಂದರು.

ಭಾರತ ಸೌಹಾರ್ದ ಪರಂಪರೆಯ ದೇಶ. ಅದರಲ್ಲೂ ಕರ್ನಾಟಕ ಭಾವೈಕ್ಯತೆಯ ಹಾಗೂ ಕುವೆಂಪು ಅವರ ಮಾನವೀಯತೆಯ ನಾಡಾಗಿದೆ. ಶರಣರ, ಸೂಫಿ ಸಂತರ ಸಂಸ್ಕೃತಿಯನ್ನೊಳಗೊಂಡ ಸೌಹಾರ್ದತೆ, ಭಾವೈಕ್ಯತೆ ಈ ನಾಡಿನಲ್ಲಿದೆ ಈ ನಾಡಿನ ಹಬ್ಬಗಳು ಪರಸ್ಪರ ಭಾವೈಕ್ಯತೆಯನ್ನು ಗಟ್ಟಿಗೊಳಿಸುವ ಆಚರಣೆಗಳಾಗಿವೆ. ಆದರೆ, 2014ರ ನಂತರ ಈ ದೇಶದಲ್ಲಿನ ಪರಸ್ಪರ ಸೌಹಾರ್ದತೆಗೆ ಬೆಂಕಿ ಇಡುವ ಕೆಲಸ ನಡೆಯುತ್ತಿದೆ. ನಮ್ಮಗಳ ನಡುವೆಯೇ ಪರಸ್ಪರ ದ್ವೇಷ ಬಿತ್ತಿ ಸಂಬಂಧಗಳನ್ನು ದೂರ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಈ ಪ್ರಕ್ರಿಯೆಗೆ ರಾಜಕಾರಣವೇ ಮುಖ್ಯ ಕಾರಣವಾಗಿದ್ದು, ಅಧಿಕಾರಕ್ಕಾಗಿ ಧರ್ಮ, ಧರ್ಮಗಳ ನಡುವೆ, ಜಾತಿ ಜಾತಿಗಳ ನಡುವೆ ಹೊಡೆದಾಡಿಸುವ ಕೆಲಸ ದಿನನಿತ್ಯ ನಡೆಯುತ್ತಲೇ ಇದ್ದು, ಇದೊಂದು ಅಪಾಯಕಾರಿ ಸಂಗತಿ ಎಂದು ಆತಂಕ ವ್ಯಕ್ತಪಡಿಸಿದರು.

ಸಂವಿಧಾನದಲ್ಲಿ ಅಡಕವಾಗಿರುವ ಆಶಯಗಳನ್ನು ಗಟ್ಟಿಗೊಳಿಸುವ, ಆಶಯಗಳನ್ನು ಜಾರಿಗೊಳಿಸುವ ಕಾರ್ಯವನ್ನು ನಾವು ಮಾಡಬೇಕಿದೆ. ಇವತ್ತು ಡಾ.ಬಿ.ಆರ್. ಅಂಬೇಡ್ಕರ್ ನೇತೃತ್ವದಲ್ಲಿ ರಚಿತವಾದ ಭಾರತ ಸಂವಿಧಾನವನ್ನು ಸಂಪೂರ್ಣವಾಗಿ ಹೊಸಕಿ ಹಾಕಿ ಮನುಸ್ಮೃತಿಯನ್ನು ಜಾರಿಗೆ ತರುವ ಹುನ್ನಾರಗಳು ಬಹಿರಂಗವಾಗಿ ನಡೆಯುತ್ತಿವೆ. ಈ ದೇಶದ ಸಂವಿಧಾನವನ್ನು ಕಡೆಗಣಿಸಿ, ಮನುಸ್ಮೃತಿಯನ್ನೇ ಸಂವಿಧಾನವನ್ನಾಗಿ ಮಾಡುವ ಪ್ಲಾನ್‌ಗಳನ್ನು ಒಂದರ ಹಿಂದೆ ಒಂದರಂತೆ ಮಾಡುತ್ತಿದ್ದಾರೆ. ಈ ದೇಶದ ಮುಸಲ್ಮಾನರು, ಕ್ರೈಸ್ತರನ್ನು ದ್ವಿತೀಯ ದರ್ಜೆ ಪ್ರಜೆಗಳನ್ನಾಗಿ ಮಾಡಿ, ದಲಿತರ ಮೀಸಲಾತಿ ಹಕ್ಕುಗಳನ್ನು ಕಿತ್ತುಕೊಂಡು ಮನುಸ್ಮೃತಿಯ ದೇಶವನ್ನಾಗಿ ಮಾಡುವ ಪ್ರಕ್ರಿಯೆಗಳನ್ನು ನಡೆಯುತ್ತಿದ್ದು, ಅದರಲ್ಲಿ ಒಂದು ಪ್ರಕ್ರಿಯೆ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯಾಗಿದೆ ಎಂದು ತಿಳಿಸಿದರು.

ಭವಿಷ್ಯದಲ್ಲಿ ಲೋಕಸಭಾ ಕ್ಷೇತ್ರಗಳನ್ನು ಹೆಚ್ಚಿಸಿ, ಮೂರನೇ ಎರಡರಷ್ಟು ಬಹುಮತದ ಮೂಲಕ ಅಂಬೇಡ್ಕರ್ ರಚಿತ ಸಂವಿಧಾನವನ್ನು ಕಡೆಗಣಿಸಿ, ಮನುಸ್ಮೃತಿಯನ್ನೇ ಸಂವಿಧಾನವನ್ನಾಗಿಸುವ ಯೋಜನೆ ನಡೆಯುತ್ತಿದೆ. ಹಾಗಾಗಿ ನಾವುಗಳು ಎಚ್ಚೆತ್ತುಕೊಳ್ಳಬೇಕಾಗಿದೆ. ರಾಜಕೀಯ ವೈರತ್ವದ ಮೂಲಕ ವಿರೋಧ ಪಕ್ಷಗಳನ್ನೇ ಇಲ್ಲವಾಗಿಸುವ ಕೆಲಸವನ್ನೂ ಮಾಡಲಾಗುತ್ತಿದೆ. ಕರ್ನಾಟಕದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಇಡಿ ದಾಳಿ, ಎಎಪಿ ಅರವಿಂದ್ ಕ್ರೇಜಿವಾಲ್ ಬಂಧನ, ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರ ವಿರುದ್ಧ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಇಡಿ ಬಳಕೆಗೆ ಯತ್ನಿಸಲಾಗುತ್ತಿದೆ. ಯಾರು ಇವರ ವಿರುದ್ಧವಾಗಿ ಕೆಲಸ ಮಾಡುತ್ತಾರೋ ಅವರನ್ನು ಜೈಲಿಗಟ್ಟುವ ಮೂಲಕ ಧಮನಿಸುವ ಕೆಲಸವನ್ನು ಮಾಡಲಾಗುತ್ತಿದೆ ಎಂದರು.

ಈದ್ ಸೌಹಾರ್ದ ಕೂಟದಲ್ಲಿ ಮೈಸೂರ್ ಸರ್ ಖಾಜಿ ಮೊಹಮ್ಮದ್ ಉಸ್ಮಾನ್ ಷರೀಫ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ನಿವೃತ್ತ ಪ್ರಾಧ್ಯಾಪಕ ನಂಜರಾಜೇ ಅರಸ್, ಎಸ್‌ಡಿಪಿಐ ಉಪಾಧ್ಯಕ್ಷರಾದ ಅಬ್ದುಲ್ ಹನಾನ್, ದೇವನೂರು ಪುಟ್ಟನಂಜಯ್ಯ, ಅರವಿಂದ ಶರ್ಮಾ, ಎಎಪಿ ಮುಖಂಡ ಸಿದ್ದರಾಜು, ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್ ಖಾನ್, ಮುಖಂಡ ತಬ್ರೇಜ್ ಮತ್ತಿತರರಿದ್ದರು.

ರಘು ಕೌಟಿಲ್ಯ ಅವರ 'ಭೂಮಿ ಪುತ್ರಿ', 'ಅಂಕಣದ ಬೆಳಕು' ಕೃತಿಗಳ ಬಿಡುಗಡೆ

●ರಾಜಕೀಯ ಒತ್ತಡದಲ್ಲೂ ರಘು ಅವರಿಂದ ಕೃತಿ ರಚನೆ ಶ್ಲಾಘನೀಯ: ಯದುವೀರ್ ●ಪುರುಷ ಸಮಾಜ ಸ್ತ್ರೀಯನ್ನು ಎಷ್ಟೇ ನಿಕೃಷ್ಟವಾಗಿ ಕಂಡರೂ ಆಕೆ ತನ್ನ ಪಾಡಿಗೆ ಕಾರ್ಯನಿರತಳು: ಬಿ.ಜಯಶ್ರೀ ●ಅರ್ಧಾಂಗಿಯನ್ನು ಕಳೆದುಕೊಂಡಾಗ ಗಂಡು ಅರೆಜೀವವಾಗುತ್ತಾನೆ: ಡಾ.ಗುರುರಾಜ ಕರಜಗಿ



ಮೈಸೂರಿನ ಕಲಾಮಂದಿರದಲ್ಲಿ ಶುಕ್ರವಾರ ಆರ್.ರಘು ಕೌಟಿಲ್ಯ(ಎಡದಿಂದ ಎರಡನೆಯವರು) ಅವರ 'ಭೂಮಿಪುತ್ರಿ' ಕವನ ಸಂಕಲನ ಹಾಗೂ 'ಅಂಕಣದ ಬೆಳಕು' ಪುಸ್ತಕ ಬಿಡುಗಡೆಗೊಂಡವು. ಆರ್.ರಘು ಪುತ್ರ ಕೌಟಿಲ್ಯ, ನೃತ್ಯ ಕಲಾವಿದೆ ಡಾ.ಶಾಂಭವಿ ಸ್ವಾಮಿ, ಶ್ರೀಮತಿ ಕೋಮಲಾ ಹರ್ಷಕುಮಾರ್‌ಗೌಡ, ಸಂಸದ ಯದುವೀರ್, ಹಿರಿಯ ರಂಗ ಕಲಾವಿದೆ ಬಿ.ಜಯಶ್ರೀ, ಶಿಕ್ಷಣತಜ್ಞ ಡಾ.ಗುರುರಾಜ ಕರಜಗಿ, ರಘು ಅವರ ಪುತ್ರಿ ವರ್ಣಿಕಾ, ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ, ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಪ್ರಾಂಶುಪಾಲ ಮಹೇಂದ್ರ ಚಿತ್ರದಲ್ಲಿದ್ದಾರೆ.

ಮೈಸೂರು, ಏ.18(ಎಸ್‌ಬಿಡಿ)– ಬಿಜೆಪಿ ಮುಖಂಡ ಹಾಗೂ ನೈಪುಣ್ಯ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಆರ್.ರಘು ಕೌಟಿಲ್ಯ ಅವರ ಎರಡು ಪುಸ್ತಕಗಳು ಶುಕ್ರವಾರ ಲೋಕಾರ್ಪಣೆಗೊಂಡವು.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ವತಿಯಿಂದ ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಿದ್ದ 'ನಿರ್ಮಲ ನೆನಪು' ಹೃದಯಸ್ಪರ್ಶಿ ಕಾರ್ಯಕ್ರಮದಲ್ಲಿ ಆರ್.ರಘು ಅವರು ತಮ್ಮ ಮಡದಿ ನಿರ್ಮಲ ಅವರನ್ನು ಕುರಿತು ರಚಿಸಿರುವ 'ಭೂಮಿಪುತ್ರಿ' ಕವನ ಸಂಕಲನವನ್ನು ಪದ್ಮಶ್ರೀ ಪುರಸ್ಕೃತ ಹಿರಿಯ ರಂಗಕಲಾವಿದೆ ಬಿ.ಜಯಶ್ರೀ ಹಾಗೂ 'ಮೈಸೂರು ಮಿತ್ರ'ದಲ್ಲಿ ಪ್ರಕಟಗೊಂಡ ಅಂಕಣಗಳ ಗುಚ್ಛ 'ಅಂಕಣದ ಬೆಳಕು' ಪುಸ್ತಕವನ್ನು ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಬಿಡುಗಡೆ ಮಾಡಿದರು.

ಇದಕ್ಕೂ ಮುನ್ನ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ರಾಜಕೀಯದ ಮೂಲಕ ಆರ್.ರಘು ಅವರ ಪರಿಚಯವಾಗಿದ್ದು, ಸದ್ಯ ಬಿಜೆಪಿ ಓಬಿಸಿ ಮೋರ್ಚಾ ಅಧ್ಯಕ್ಷರಾಗಿ ಸಣ್ಣ ಸಣ್ಣ ಸಮುದಾಯಗಳ ಒಗ್ಗೂಡಿಸಿ, ಅವುಗಳ ಅಭಿವೃದ್ಧಿಗೆ ಶ್ರಮಿಸುವ ಮಹತ್ವದ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ನಾನೂ ಓಬಿಸಿಗೆ ಸೇರಿದವನಾಗಿರುವುದರಿಂದ ರಘು ಅವರದ್ದು ಎಷ್ಟು ಕಷ್ಟದ ಕೆಲಸ ಎಂಬುದರ ಅರಿವಿದೆ. ಒಟ್ಟಾರೆಯಾಗಿ ಎಲ್ಲರೂ ಭಾರತೀಯರೆಂಬ ಭಾವನೆಯೊಂದಿಗೆ ಮುಂದುವರೆಯಬೇಕಿದೆ ಎಂದರು.

ರಾಜಕೀಯ ಒತ್ತಡದಲ್ಲೂ ರಘು ಅವರು ಎರಡು ಪುಸ್ತಕಗಳನ್ನು ಬರೆದಿರುವುದು ಶ್ಲಾಘನೀಯ. ಕವನ ಸಂಕಲನದ ಜೊತೆಗೆ ಅಂಕಣಗಳ ಸಂಗ್ರಹವನ್ನೂ ಪುಸ್ತಕವಾಗಿ ಹೊರತಂದಿದ್ದಾರೆ. ಮೈಸೂರು ಮಹಾಸಂಸ್ಥಾನದ ಬಗ್ಗೆಯೂ ಹಲವು ಅಂಕಣ ಬರೆದಿದ್ದಾರೆ. ಓದಲು ಸಾಧ್ಯವಾಗಿಲ್ಲವಾದರೂ ಇವು ಒಳ್ಳೆಯ ಪುಸ್ತಕಗಳಾಗಿವೆ ಎಂಬುದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿಯಾಗಿದೆ. ಹಿರಿಯ ಕಲಾವಿದೆಯಾದ ಬಿ.ಜಯಶ್ರೀ ಹಾಗೂ ಶಿಕ್ಷಣ ತಜ್ಞರಾದ ಗುರುರಾಜ ಕರಜಗಿ ಅವರೊಂದಿಗೆ ವೇದಿಕೆ ಹಂಚಿಕೊಂಡಿದ್ದು ಖುಷಿ ತಂದಿದೆ ಎಂದು ಹೇಳಿದರು.

ಸ್ತ್ರೀ ಅಂದರೆ ಅಷ್ಟೇ ಸಾಕೆ: ಹಿರಿಯ ರಂಗ ಕಲಾವಿದೆ ಹಾಗೂ ಮಾಜಿ ರಾಜ್ಯಸಭಾ ಸದಸ್ಯೆ ಬಿ.ಜಯಶ್ರೀ ಅವರು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ 'ನಿನಗೆ ಬೇರೆ ಹೆಸರು ಬೇಕೆ ಸ್ತ್ರೀ ಅಂದರೆ ಅಷ್ಟೇ ಸಾಕೆ...' ಕವಿತೆ ಸಾಲುಗಳನ್ನು ಹಾಡಿ, ಸ್ತ್ರೀ ಏನೆಲ್ಲಾ ಕೆಲಸ ಮಾಡುತ್ತಾಳೆ. ಎಷ್ಟೇ ನಿಕೃಷ್ಟವಾಗಿ ಕಂಡರೂ ನನ್ನ ಕೆಲಸ ಮಾಡುತ್ತೇನೆ ಎನ್ನುತ್ತಾಳೆ. ಆದರೆ ಪುರುಷ ಸಮಾಜ ಆಕೆಯನ್ನು ಒಂದು ದಿನವೂ ಪ್ರೀತಿಯಿಂದ ನಡೆಸಿಕೊಳ್ಳುವುದಿಲ್ಲ. ನಿರ್ಮಲಾ ಮಗಳು ಅಮ್ಮನ ಆಸೆಯಂತೆ ನ್ಯಾಯಾಧೀಶೆಯಾಗಿದ್ದಾರೆ. ಆಕೆ ಇದ್ದಿದ್ದರೆ ಮಗಳನ್ನು ತಬ್ಬಿ ಮುದ್ದಾಡುತ್ತಿದ್ದಳು. 'ಭೂಮಿಪುತ್ರಿ' ಎಂಬ ಅರಿವು ಅವಳಿದ್ದಾಗಲೇ ಬಂದಿದ್ದರೆ ರಘು ಅವರನ್ನು ಹೆಗಲ ಮೇಲೆ ಹೊತ್ತು ಕುಣಿಯುತ್ತಿದ್ದಳು. ನಿರ್ಮಲಾ ಇಲ್ಲ ಎಂಬುದನ್ನು ನಾನು ನಂಬುವುದಿಲ್ಲ. ಆಕೆ ಎಲ್ಲರ ಮನಸ್ಸಿನಲ್ಲೂ ಇದ್ದಾಳೆ ಎಂದು ನುಡಿದರು.

ಭಾವನಾತ್ಮಕ ಕಸಿ: ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಮಾತನಾಡಿ, ಪುಸ್ತಕ ಬಿಡುಗಡೆ ನೆಪದಲ್ಲಿ ನಿರ್ಮಲಾ ಅವರ ಸ್ಮರಣೆಯಾಗುತ್ತಿದೆ. ರಘು ಪರಿಚಯವಾಗುವ ಮುನ್ನವೇ ಕೆಲ ಶಿಕ್ಷಕ ಮಿತ್ರರು ನಿರ್ಮಲಾ ಅವರ ಮಾತೃತ್ವದ ಬಗ್ಗೆ ನನಗೆ ಹೇಳಿದ್ದರು. ಹೆಣ್ಣು ಅಬಲೆ ಎನ್ನುವುದು ತಪ್ಪು ಕಲ್ಪನೆ. ಹೆಣ್ಣಿನಷ್ಟು ನೋವು ಸಹಿಸುವ ಶಕ್ತಿ ಗಂಡಿಗಿಲ್ಲ. ಇದಕ್ಕೆ ಪುರಾಣ ಪುಣ್ಯಕತೆಗಳಲ್ಲೂ ಉದಾಹರಣೆಗಳಿವೆ. ಹಾಗೆಯೇ ಹೆಂಡತಿಯಷ್ಟು ಪ್ರೀತಿ ಕೊಡಲು ಗಂಡನಿಂದ ಸಾಧ್ಯವೇ ಇಲ್ಲ. ಎಲ್ಲೋ ಹುಟ್ಟಿ–ಬೆಳೆದವಳು ಗಂಡನನ್ನೇ ನಂಬಿ ಇಡೀ ಜೀವನ ಕಳೆಯುತ್ತಾಳೆ. ಆರಂಭದಲ್ಲಿ ತವರಿನ ನೆನಪು ಕಾಡಿದರೂ ಕೆಲ ವರ್ಷಗಳಲ್ಲೇ ಆ ಮನೆಯನ್ನೇ ತನ್ನದಾಗಿ ಮಾಡಿಕೊಳ್ಳುತ್ತಾಳೆ. ಇದೇ ಭಾವನಾತ್ಮಕ ಕಸಿ. ಅರ್ಧಾಂಗಿಯನ್ನು ಕಳೆದುಕೊಂಡಾಗ ಗಂಡು ಅರೆಜೀವವಾಗುತ್ತಾನೆ. ಇರುವಾಗ ಅವಳಷ್ಟು ಪ್ರೀತಿ ನೀಡಲಾಗಲಿಲ್ಲ ಎಂಬ ಪಶ್ಚಾತ್ತಾಪ, ಅಪರಾಧಿ ಭಾವದಿಂದ ಪರಿತಪಿಸುತ್ತಾನೆ. ಈ ಅಪರಾಧಿ ಭಾವ ಕಡಿಮೆ ಮಾಡಿಕೊಳ್ಳಲು ರಘು ಬರವಣಿಗೆ ಹಾದಿ ಕಂಡುಕೊಂಡಿದ್ದಾರೆ. ಮನಸ್ಸಿನ ದುಗುಡವನ್ನು ಕಾವ್ಯ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಸಂತೋಷದಂತೆ ದುಃಖವನ್ನು ಮರೆಯುತ್ತೇವೆ. ಆದರೆ ಆತ್ಮ ಸಂಗಾತಿಯ ಅಗಲಿಕೆಯ ನೆನಪು ದಿನಕಳೆದಂತೆ ಹಸಿಯಾಗುತ್ತದೆ ಎಂದು ಹೇಳಿದರು.

ಅಂಕಣ ಬರಹ ಮುಂದುವರೆಸಿ: ನಲವತ್ತು ವರ್ಷದ ಹಿಂದೆ 'ಇಪ್ಪತ್ತೊಂದನೇ ಶತಮಾನ ಮಹಿಳೆಯರದ್ದು' ಎಂಬ ಅಂಕಣ ಬರೆದಿದ್ದೆ. ಅದಕ್ಕೆ ಪರ–ವಿರೋಧ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ನಾನೀಗ ಮೂರೂವರೆ ಸಾವಿರ ಅಂಕಣ ಬರೆದಿದ್ದೇನೆ. ಅಂಕಣ ಬರೆಯೋದು ಆಕಾಶವನ್ನು ಅಂಗೈಯಲ್ಲಿ ಹಿಡಿದುಕೊಳ್ಳುವಷ್ಟು ಕಷ್ಟ, ನಿಗದಿತ ಮಿತಿಯಲ್ಲೇ ಕಟ್ಟಿಕೊಡಬೇಕು. ಅಂಕಣ, ಸಾಹಿತ್ಯದ ಒಂದು ಪ್ರಕಾರ ಎಂದಾಗಿದ್ದು ಹಾ.ಮಾ.ನಾಯಕರಿಂದ. ಅವರ ಮೂಲಕವೇ ಅಂಕಣ ಸಾಹಿತ್ಯಕ್ಕೆ ಮೊದಲ ಬಾರಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದಕ್ಕಿತು. ಸಮಾಜದ ವಿವಿಧ ಮಜಲುಗಳನ್ನು ಅರಿತು ಎಚ್ಚರಿಕೆಯಿಂದ ಬರೆದರೆ ಅಂತಹ ಅಂಕಣಗಳು ಸಮೃದ್ಧಿಯಾಗಿರುತ್ತವೆ. ಆರ್.ರಘು ಅವರು ವಿವಿಧ ಕ್ಷೇತ್ರಗಳಲ್ಲಿ ಸಕ್ರಿಯವಾಗಿರುವುದರಿಂದ ಉತ್ತಮ ಹಾಗೂ ಪರಿಣಾಮಕಾರಿ ಅಂಕಣಗಳನ್ನು ಬರೆದಿದ್ದಾರೆ. ಅಂಕಣ ಬರಹ ನಿರಂತರವಾಗಿರಲಿ ಎಂದು ಆಶಿಸಿದರು.


ತಪ್ಪದೇ ಪುಸ್ತಕ ಓದಿ: ಪುಸ್ತಕಗಳನ್ನು ಕುರಿತು ಮಾತನಾಡಿದ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ, ಇಷ್ಟೊಂದು ಅದ್ಭುತ ಬರಹ ರಘು ಅವರಿಂದ ಸಾಧ್ಯವೇ ಎಂಬ ಅನುಮಾನವನ್ನು ಅವರೇ ನಿವಾರಿಸಿದರು. ನಿಜಕ್ಕೂ ರಘು ಅವರದು ಉತ್ತಮ ಬರವಣಿಗೆ. ಗೋಕಾಕ್ ಚಳವಳಿ, ಡಾ.ರಾಜ್‌ಕುಮಾರ್ ಅವರ ಪ್ರಭಾವ ಅಂಕಣ ಬರಹದಲ್ಲಿ ಕಾಣಿಸುತ್ತದೆ. ದಾಂಪತ್ಯದ ಮೌಲ್ಯವನ್ನು ತಿಳಿಯಲು ಹಾಗೂ ಕಳೆದುಕೊಂಡರ ಮೌಲ್ಯವನ್ನು ಬದುಕಿರುವಾಗಲೇ ತಿಳಿಯ ಬೇಕಾದರೆ 'ಭೂಮಿಪುತ್ರಿ' ಪುಸ್ತಕವನ್ನು ಓದಲೇಬೇಕು ಎಂದು ತಿಳಿಸಿದರು.

ಶ್ರೀಮತಿ ಕೋಮಲಾ ಹರ್ಷಕುಮಾರಗೌಡ, ವಿದುಷಿ ಡಾ.ಶಾಂಭವಿ ಸ್ವಾಮಿ, ಆರ್.ರಘು ಕೌಟಿಲ್ಯ, ನೈಪುಣ್ಯ ಶಾಲೆ ಪ್ರಾಂಶುಪಾಲ ಮಹೇಂದ್ರ, ಗಾಯಕಿ ವಿದುಷಿ ಸಂಗೀತ ಕಟ್ಟಿ ವೇದಿಕೆಯಲ್ಲಿದ್ದರು. ಕಾರ್ಯಕ್ರಮಕ್ಕೂ ಮುನ್ನ ಡಾ.ಶಾಂಬವಿ ಸ್ವಾಮಿ ನಿರ್ದೇಶನದಲ್ಲಿ ಪ್ರಸ್ತುತಗೊಂಡ ಸುಮಾರು 40 ನಿಮಿಷಗಳ 'ಪುಣ್ಯಕೋಟಿ(ಗೋವಿನ ಹಾಡು) ನೃತ್ಯರೂಪಕ ನೆರೆದಿದ್ದವರ ಕಣ್ಣಾಲಿಗಳಲ್ಲಿ ನೀರು ತಂದಿತು. ಕಾರ್ಯಕ್ರಮದ ನಂತರ ಪ್ರಸಿದ್ಧ ಗಾಯಕಿ ಶ್ರೀಮತಿ ಸಂಗೀತ ಕಟ್ಟಿ ಸಾರಥ್ಯದಲ್ಲಿ ಸಂಗೀತ ರಸಸಂಜೆ ನಡೆಯಿತು. ದಿವ್ಯಾ ಆಲೂರು ಪರಿಕಲ್ಪನೆಯಲ್ಲಿ ಮಾನಸ ಹೊಳ್ಳ ಸಂಗೀತ, ಆದರ್ಶ್–ಆದಿತ್ಯ ಗಾಯನವನ್ನೊಳಗೊಂಡ ಆರ್.ರಘು ಕವಿತೆಗಳ ಸಂಗೀತ–ದೃಶ್ಯ ವಿನ್ಯಾಸವನ್ನು ಪ್ರಸಾರ ಮಾಡಲಾಯಿತು.

ಸ್ತ್ರೀ ಕುಲಕ್ಕೆ ಸಮರ್ಪಣೆ....

ಆರ್.ರಘು ಮಾತನಾಡುವಾಗ ಮಡದಿ ನಿರ್ಮಲಾ ಅವರನ್ನು ನೆನೆದು ಭಾವುಕರಾದರು. 'ನಿರ್ಮಲ ನೆನಪು' ಕಾರ್ಯಕ್ರಮ ನನ್ನ ಪತ್ನಿ ನಿರ್ಮಲ ಸ್ಮರಣೆ ಮಾತ್ರವಲ್ಲ. ಎಲ್ಲವನ್ನೂ ನುಂಗಿಕೊಂಡು ಪತಿ, ಮಕ್ಕಳ ಒಳಿತಿಗಾಗಿ, ಭಾರತೀಯ ಸಂಸ್ಕೃತಿಯ ಕೊಂಡಿಯಾಗಿರುವ ಇಡೀ ಸ್ತ್ರೀ ಕುಲಕ್ಕೆ ಸಮರ್ಪಣೆಯಾಗಿದೆ. ಹರ್ಷಕುಮಾರಗೌಡರು ಶಾಸಕರಾಗಲು ಅವರ ಪತ್ನಿ ಕೋಮಲಾ ಅವರು ಪ್ರಮುಖ ಕಾರಣಕರ್ತರು, ಹರ್ಷಕುಮಾರಗೌಡರ ಒಡನಾಟದಿಂದ ರಾಜಕೀಯಕ್ಕೆ ಬಂದ ನನಗೆ ಶ್ರೀಮತಿ ಕೋಮಲಾ ಅವರು ಯಶೋದೆಯ ಪ್ರೀತಿ ನೀಡಿದರು. ನನ್ನ ಹೋರಾಟದ ಜೀವನದಲ್ಲಿ ನಿರ್ಮಲಾಳನ್ನು ಜೊತೆಯಾಗಿಸಿದರು. ನಿರ್ಮಲಾ, ಸೀತೆಯಂತೆಯೇ ಬದುಕಿದ್ದಳು. ನಾನು ಪಾತಾಳದಿಂದ ಎದ್ದು ಬಂದಿರುವುದಕ್ಕೂ ಇವಳೇ ಕಾರಣ. ನಿರ್ಮಲಾ, ಆತ್ಮ ಭದ್ರಕಾಳಿಯಂತೆ ಬಂದು ನನಗೆ ಶಕ್ತಿ ತುಂಬಿದೆ. ಕೊರೊನಾ ಉತ್ತುಂಗದಲ್ಲಿದ್ದ ವೇಳೆ 'ಸೀತೆಯ ರಾಮ' ಧಾರವಾಹಿಯಲ್ಲಿ ಸೀತೆ ಭೂಮಾತೆ ಒಡಲು ಸೇರುವ ದೃಶ್ಯ ನೋಡಲು ಕಾತುರಳಾಗಿದ್ದ ನಿರ್ಮಲಾ, ಮುಂಚಿತವಾಗಿಯೇ ಭೂಮಿಯ ಒಡಲು ಸೇರಿದಳು. ಕೊರೊನಾ ನಿರ್ವಹಣೆ ಜವಾಬ್ದಾರಿ ನಡುವೆ ಬೆನ್ನುನೋವು ಎನ್ನುತ್ತಿದ್ದ ಮನೆಯಾಕೆಯ ಸ್ಯಾಚುರೇಶನ್ ಕಡಿಮೆಯಾಗುವುದು ತಿಳಿಯಲೇ ಇಲ್ಲ. ಪುನೀತ್ ರಾಜ್‌ಕುಮಾರ್ ಅವರಂತೆಯೇ ಚೆನ್ನಾಗಿ ನಡೆದುಕೊಂಡು ಕಾರು ಹತ್ತಿ ಆಸ್ಪತ್ರೆಗೆ ಹೋದ ನಿರ್ಮಲಾ ಕೆಲ ಹೊತ್ತಿನಲ್ಲೇ ಇಲ್ಲವಾದರು. ಮಡದಿ ನಮ್ಮ ಬದುಕಿನ ಉಸಿರು, ಹಸಿರಾಗಿರುತ್ತಾಳೆ. ಆಕೆ ಪತ್ನಿ ಮಾತ್ರವಲ್ಲ ತಾಯಿಯೂ ಆಗಿರುತ್ತಾಳೆ. ಜೊತೆಯಲ್ಲಿದ್ದ ಕ್ಷಣಗಳು ಹೆಚ್ಚು ಕಾಡಿದಾಗ ಹೀಗೆ ಬರೆಯುತ್ತೇನೆ. ಹೆಣ್ಣು ಮಕ್ಕಳಿಗೆ ನಿರ್ಮಲಾ ಸ್ಫೂರ್ತಿಯಾಗಲಿ, ಪತ್ನಿಯನ್ನು ಅಲಕ್ಷಿಸುವವರಿಗೆ ಎಚ್ಚರಿಕೆಯಾಗಲಿ ಎಂದು ಪುಸ್ತಕ ರೂಪದಲ್ಲಿ ನೀಡುತ್ತಿದ್ದೇನೆ ಎಂದು ತಿಳಿಸಿದರು.

ತೀವ್ರ ಹೃದಯಾಘಾತ: ಪತ್ನಿ, ಮಗು ಕಣ್ಣೆದುರೇ ವೈದ್ಯ ಸಾವು



ಡಾ. ಆದರ್ಶ್

ಮೈಸೂರು, ಏ. 18(ಆರ್‌ಕೆ)– ತೀವ್ರ ಹೃದಯಾಘಾತದಿಂದ ವೈದ್ಯರೊಬ್ಬರು ಪತ್ನಿ ಹಾಗೂ ಒಂದೂವರೆ ವರ್ಷದ ಮಗು ಕಣ್ಣೆದುರೇ ಸಾವನ್ನಪ್ಪಿದ್ದಾರೆ. ಈ ಘಟನೆ ಮೈಸೂರಲ್ಲಿ ಏಪ್ರಿಲ್ 15ರಂದು ಸಂಭವಿಸಿದೆ.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಎಮರ್ಜೆನ್ಸಿ ಮೆಡಿಸಿನ್ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದ ಡಾ. ಆದರ್ಶ್(36) ಸಾವನ್ನಪ್ಪಿದ ವೈದ್ಯ. ಮೂಲತಃ ದಾವಣಗೆರೆಯವರಾದ ಆದರ್ಶ್ ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನಲ್ಲೇ ವ್ಯಾಸಂಗ ಮಾಡಿ, ಅದೇ ಆಸ್ಪತ್ರೆಯಲ್ಲೇ ವೈದ್ಯ ವೃತ್ತಿ ಮಾಡುತ್ತಿದ್ದು, ಪತ್ನಿಯೂ ಸಹ ಜೆಎಸ್‌ಎಸ್ ಆಸ್ಪತ್ರೆ ರೇಡಿಯಾಲಜಿ ವಿಭಾಗದಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ರಜೆ ಪಡೆದು ದಾವಣಗೆರೆಗೆ ಹೋಗಿದ್ದ ಡಾ. ಆದರ್ಶ್, ಏಪ್ರಿಲ್ 15ರಂದು ಸಾರಿಗೆ ಬಸ್ಸಿನಲ್ಲಿ ಪತ್ನಿ ಮತ್ತು ಮಗುವಿನೊಂದಿಗೆ ಬೆಳಗ್ಗೆ 7 ಗಂಟೆ ವೇಳೆಗೆ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಬಂದಿದ್ದಾರೆ. ಮನೆಗೆ ಹೋಗಲು ಆಟೋರಿಕ್ಷಾಗಾಗಿ ಕಾಯುತ್ತಿದ್ದಾಗ ಡಾ. ಆದರ್ಶ್‌ಗೆ ತೀವ್ರ ಹೃದಯಾಘಾತವಾಗಿ ಕುಸಿದು ಬಿದ್ದಿದ್ದಾರೆ. ವೈದ್ಯೆ ಪತ್ನಿ ತಕ್ಷಣ ಅವರಿಗೆ ಸಿಪಿಆರ್ ಮಾಡಿ ಆಂಬುಲೆನ್ಸ್‌ನಲ್ಲಿ ಜೆಎಸ್‌ಎಸ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರಾದರೂ, ಮಧ್ಯಾಹ್ನ ಸುಮಾರು 2 ಗಂಟೆ ವೇಳೆಗೆ ಡಾ. ಆದರ್ಶ್ ಕೊನೆಯುಸಿರೆಳೆದಿದ್ದಾರೆ.

ಆಸ್ಪತ್ರೆ ಅಧಿಕಾರಿಗಳು, ವೈದ್ಯರು, ಸಿಬ್ಬಂದಿ ತಮ್ಮ ಸಹೋದ್ಯೋಗಿಯ ನಿಧನದಿಂದ ಅತೀವ ದುಃಖತಪ್ತರಾಗಿ, ಅಂತಿಮ ನಮನ ಸಲ್ಲಿಸಿದರು. ನಂತರ ಪಾರ್ಥಿವ ಶರೀರ ವನ್ನು ಹುಟ್ಟೂರಾದ ದಾವಣಗೆರೆಗೆ ಅಂದು ಸಂಜೆಯೇ ಕಳುಹಿಸಿಕೊಡಲಾಯಿತು.

ಮತ್ತೊಬ್ಬ ಬಿಜೆಪಿ ಕಾರ್ಯಕರ್ತ ವಿಡಿಯೋ ಮಾಡಿ ಆತ್ಮಹತ್ಯೆ!



ಪ್ರವೀಣ್ ಗೌಡ

ಬೆಂಗಳೂರು: ಬಿಜೆಪಿ ಕಾರ್ಯಕರ್ತ ಆತ್ಮಹತ್ಯೆಗೆ ಶರಣಾಗಿದ್ದು, ಈ ಬಾರಿ ಬೆಂಗಳೂರು ಹೊರವಲಯದ ಆನೇಕಲ್‌ನ ಪ್ರವೀಣ್ ಗೌಡ, ಫೇಸ್ ಬುಕ್ ವಿಡಿಯೋ ಮಾಡಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಮೂಲತಃ ಕೊಡಗಿನ ಬೆಂಗಳೂರಿನ ನಾಗವಾರದ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ನೆನಪು ಹಸಿಯಾಗಿರುವಾಗಲೇ ಬೆಂಗಳೂರು ನಗರ ಜಿಲ್ಲೆ ಆನೇಕಲ್‌ನಲ್ಲೂ ಇಂತಹುದೇ ಪ್ರಕರಣ ವರದಿಯಾಗಿದೆ.

ಆನೇಕಲ್ ನ ಎಸ್.ವಿ.ಎಂ ಸ್ಕೂಲ್ ಬಳಿ ಬಿಜೆಪಿ ಕಾರ್ಯಕರ್ತ ಪ್ರವೀಣ್ ಗೌಡ ಬೇಲೂರು (35) ಎಂಬುವವರು ಫೇಸ್ಬುಕ್ ವಿಡಿಯೋ ಮಾಡಿ ಹಲವರ ಹೆಸರುಗಳನ್ನು ಪ್ರಸ್ತಾಪಿಸಿದ್ದು, ಮರಕ್ಕೆ ನೇಣು ಬಿಗಿದುಕೊಂಡು ಸಾವಿಗೆ ಶರಣಾಗಿದ್ದಾರೆ.

ಬಿಜೆಪಿ ನಾಯಕರಿಂದ ಕಿರುಕುಳ: ಪ್ರವೀಣ್ ಗೌಡ ತಮ್ಮ ಫೇಸ್ ಬುಕ್ ವಿಡಿಯೋದಲ್ಲಿ ಹಲವರ ಮೇಲೆ ವಂಚನೆ ಮತ್ತು ಹಲ್ಲೆ ಆರೋಪ ಹೊರಿಸಿದ್ದು, ಬಿಜೆಪಿ ಮಂಡಲ ಅಧ್ಯಕ್ಷ ಮುನಿರಾಜುಗೌಡ, ಕೌನ್ಸಿಲರ್ ಭಾಗ್ಯಮ್ಮ ಮತ್ತು ಶ್ರೀನಿವಾಸ್ ವಿರುದ್ಧವೂ ಆರೋಪ ಮಾಡಲಾಗಿದೆ. ತಮ್ಮ ಸಾವಿಗೆ ಇವರೇ ಕಾರಣ ಎಂದು ಹಲವರನ್ನು ಹೆಸರಿಸಿರುವ ಅವರು, ಆ ಪೈಕಿ ಕಿರಣ್ ಎಂಬಾತನ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದ್ದಾರೆ.

ವಿಡಿಯೋದಲ್ಲೇನಿದೆ?: ಸಮಂದೂರ್ ಕಿರಣ್, ಗೋಕುಲ್ ಫ್ಯಾಷನ್ ಹರೀಶ, ಭಾಸ್ಕರ್, ನಾರಾಯಣಪ್ಪ, ದೊಡ್ಡಹಾಗಡೆ ಮಧುಗೌಡ, ಸರವಣ ಇವರೇ ನನ್ನ ಸಾವಿಗೆ ಕಾರಣ. ಯಾರನ್ನು ಬಿಟ್ಟರೂ ಕಿರಣ್ ನನ್ನು ದಯವಿಟ್ಟು ಬಿಡಬೇಡಿ. ಕಿರಣ್ ಹಲವು ಹೆಣ್ಣು ಮಕ್ಕಳಿಗೆ ಫೋನ್ ಮಾಡಿ ಟಾರ್ಚರ್ ಕೊಡುತ್ತಿದ್ದಾನೆ. ಕಿರಣ್ ಮಾಡಿರುವ ಇಂತಹ ಕೆಲಸಗಳೆಲ್ಲಾ ನನ್ನ ಮೇಲೆ ಬಂದಿವೆ. ಹಣದ ವಿಚಾರವಾಗಿ ಮಾತುಕತೆಗೆ ಕರೆಸಿಕೊಂಡು ಹಲ್ಲೆ ನಡೆಸಿದ್ದಾರೆ ಎಂದು ಪ್ರವೀಣ್ ಫೇಸ್‌ಬುಕ್ ವಿಡಿಯೋದಲ್ಲಿ ಆರೋಪಿಸಿದ್ದಾರೆ.

ಅಂತೆಯೇ ಆನೇಕಲ್ ಬಿಜೆಪಿ ಮಂಡಲ ಅಧ್ಯಕ್ಷ ಮುನಿರಾಜುಗೌಡ ವಿರುದ್ಧವೂ ಪ್ರವೀಣ್ ಗಂಭೀರ ಆರೋಪ ಮಾಡಿದ್ದು, 'ಬಿಜೆಪಿ ಮುಖಂಡ ನಾಯನಹಳ್ಳಿ ಮುನಿರಾಜು ಮನೆಗೆ ಕರೆದಿದ್ದರು. ಆ ಸಂದರ್ಭದಲ್ಲಿ ಆನೇಕಲ್ ಕೌನ್ಸಿಲರ್ ಭಾಗ್ಯಮ್ಮ ಹಾಗೂ ಆಕೆಯ ಪತಿ ಶ್ರೀನಿವಾಸ್ ಇದ್ದರು. ಏಕಾಏಕಿ ಹತ್ತಾರು ಮಂದಿಯನ್ನು ಕರೆಸಿಕೊಂಡಿದ್ದ ಭಾಗ್ಯಮ್ಮ ಶ್ರೀನಿವಾಸ್, ಮೊಬೈಲ್ ಕಿತ್ತುಕೊಂಡು 2 ಗಂಟೆಗಳ ಕಾಲ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ.

ಮನಸೋ ಇಚ್ಛೆ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ನಾನು ಸತ್ತ ಮೇಲೆ ನನ್ನ ದೇಹದ ಮೇಲಿರುವ ಗಾಯದ ಗುರುತುಗಳನ್ನು ಪರಿಶೀಲಿಸಿ. ಪೊಲೀಸರು ನನಗೆ ನ್ಯಾಯ ಕೊಡಿಸಬೇಕು ಎಂದು ಪ್ರವೀಣ್ ವಿಡಿಯೋದಲ್ಲಿ ಆರೋಪಿಸಿದ್ದಾರೆ.

ಗುರುವಾರ ರಾತ್ರಿ ಪ್ರವೀಣ್ ಆತ್ಮಹತ್ಯೆ ಮಾಡಿಕೊಂಡಿದ್ದು, ಸ್ಥಳಕ್ಕೆ ಆನೇಕಲ್ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು